ಶುಕ್ರವಾರ, ಅಕ್ಟೋಬರ್ 20, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತಿಮ ಸ್ಪರ್ಶ
ಹರಿಯಾಣದ ಗುರುಗ್ರಾಮದಲ್ಲಿ ನವರಾತ್ರಿಯ ಅಂಗವಾಗಿ ದುರ್ಗಾದೇವಿಯ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದ ಕಲಾವಿದ



ಜಾತ್ರೆ ವ್ಯಾಪಾರ: 'ಧರ್ಮ'ಕ್ಕೆ ಸೊಪ್ಪುಹಾಕದ ಗ್ರಾಹಕರು

• ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ಭಗವಾಧ್ವಜ ಕಟ್ಟಿರುವ ಹಿಂದೂ ವರ್ತಕರ ಮಳಿಗೆಗಳಲ್ಲಿ ಖರೀದಿಗೆ ಮುಗಿಬಿದ್ದ ಮುಸ್ಲಿಂ ಗ್ರಾಹಕರು; ಕೇಸರಿ ಧ್ವಜವಿರದ ಮುಸ್ಲಿಂ ವರ್ತಕರ ಮಳಿಗೆಗಳಲ್ಲಿ ವ್ಯಾಪಾರ ನಡೆಸಿದ ಹಿಂದೂಗಳು ಇಲ್ಲಿನ 'ಮಂಗಳಾದೇವಿ' ನೆಲದ ಸೌಹಾರ್ದ ಪರಂಪರೆಗೆ ಸಾಕ್ಷಿಯಾದರು.

ಮಂಗಳಾದೇವಿ ದೇವಸ್ಥಾನದ ನವರಾತ್ರಿ ಉತ್ಸವದ ಸಂದರ್ಭದಲ್ಲಿ ದೇವಸ್ಥಾನದ ಆಸುಪಾಸಿನ ಬೀದಿಗಳಲ್ಲಿ ಹಿಂದೂಗಳಿಗೆ ಮಾತ್ರ ವ್ಯಾಪಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಸನಾತನ ಹಿಂದೂ ವ್ಯಾಪಾರಸ್ಥರ ಸಂಘದವರು ಈ ವರ್ಷ ಬೇಡಿಕೆ ಇಟ್ಟಿದ್ದರು.

'ಆರಂಭದಲ್ಲಿ ಇಲ್ಲಿನ ಕೆಲ ಮಳಿಗೆಗಳನ್ನು ಹಿಂದೂ ವರ್ತಕರಿಗೆ ಮಾತ್ರ ಹಂಚಿಕೆ ಮಾಡಲಾಗಿದೆ' ಎಂದು ಬೀದಿಬದಿ ವ್ಯಾಪಾರಿಗಳ ಶ್ರೇಯೋಭಿವೃದ್ಧಿ ಸಂಘದವರು ಪ್ರತಿಭಟನೆ ನಡೆಸಿದರು. ಬಳಿಕ ಜಿಲ್ಲಾಡಳಿತ ಬಾಕಿ ಉಳಿದ ಮಳಿಗೆಗಳನ್ನು ಹರಾಜು ಹಾಕಿ ಎಲ್ಲ ಧರ್ಮದವರಿಗೂ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿತ್ತು. ಒಟ್ಟು 125 ಮಳಿಗೆಗಳಿದ್ದು, ಅವುಗಳಲ್ಲಿ ಆರು ಮಳಿಗೆಗಳನ್ನು ಮುಸ್ಲಿಂ ವರ್ತಕರು ಪಡೆದಿದ್ದಾರೆ.

> **ಆದಷ್ಟು ಸೌಹಾರ್ದದ ವಾತಾವರಣ ರೂಪಿಸಲು ಯತ್ನಿಸಬೇಕು. ಎಲ್ಲ ಧರ್ಮದವರೂ ಸಾಮರಸ್ಯದಿಂದ ಬದುಕುವಂತಾದರೆ ಎಲ್ಲರಿಗೂ ಒಳ್ಳೆಯದು**
> **ಜಾಕೀರ್ ಹುಸೇನ್,** ಒಣಹಣ್ಣುಗಳ ವರ್ತಕ

> **ವರ್ತಕರ ಧರ್ಮವನ್ನು ಹುಡುಕುವಂತಹ ಸ್ಥಿತಿ ಒಳ್ಳೆಯದಲ್ಲ. ಎಲ್ಲ ಧರ್ಮದವರೂ ಒಂದಿಲ್ಲೊಂದು ಕಾರಣಕ್ಕೆ ಪರಸ್ಪರ ಅವಲಂಬಿಸಿಯೇ ಬದುಕಬೇಕಾಗುತ್ತದೆ**
> **ಹನುಮಂತ,** ಲೋಹದ ಆಭರಣಗಳ ವರ್ತಕ



ಹರಾಜಿನಲ್ಲಿ ಮಳಿಗೆ ಪಡೆದ ಮುಸ್ಲಿಂ ವರ್ತಕರ ಬಳಿ ಹಿಂದೂಗಳು ವ್ಯಾಪಾರ ನಡೆಸುವುದನ್ನು ತಡೆಯಲು ವಿಶ್ವ ಹಿಂದೂ ಪರಿಷತ್‌ನವರು ಹಿಂದೂಗಳ ಮಳಿಗೆಗಳಲ್ಲಿ ಭಗವಾಧ್ವಜ ಕಟ್ಟಿ, ಈ ಧ್ವಜವಿರುವ ಮಳಿಗೆಗಳಲ್ಲಿ ಮಾತ್ರ ಖರೀದಿ ಮಾಡುವಂತೆ ಹಿಂದೂಗಳಿಗೆ ಸಂದೇಶ ರವಾನಿಸಿದ್ದರು. ಆದರೆ, ಇದಕ್ಕೆ ಗ್ರಾಹಕರು ಸೊಪ್ಪು ಹಾಕಿಲ್ಲ. ಹಿಂದೂಗಳ ಮಳಿಗೆಗಳಲ್ಲಿ ಮುಸ್ಲಿಮರು ಹಾಗೂ ಮುಸ್ಲಿಮರ ಮಳಿಗೆಗಳಲ್ಲಿ ಹಿಂದೂಗಳು ವ್ಯಾಪಾರ ನಡೆಸುತ್ತಿರುವುದು ಗುರುವಾರ ಇಲ್ಲಿಗೆ ಭೇಟಿ ನೀಡಿದಾಗ ಕಂಡುಬಂತು.

'ಈ ಜಾತ್ರೆಯಲ್ಲಿ 20 ವರ್ಷಗಳಿಂದಲೂ ವ್ಯಾಪಾರ ನಡೆಸು-ತ್ತಿದ್ದೇನೆ. ಯಾವತ್ತೂ ಇಲ್ಲಿ ಕೋಮು ವಿಭಜನೆ ಇರಲಿಲ್ಲ. ಈ ಸಲ ಕೆಲ ಸಂಘಟನೆಗಳು ಸಾಮರಸ್ಯ ಕೆಡಿಸುವ ಯತ್ನ ನಡೆಸಿವೆ. ನನ್ನ ಗ್ರಾಹಕರಲ್ಲಿ ಹಿಂದೂಗಳೇ ಜಾಸ್ತಿ. ನನಗೆ ಹಿಂದಿನಂತೆಯೇ ವ್ಯಾಪಾರ ಆಗುತ್ತಿದೆ. ಇಲ್ಲಿ ಧ್ವಜ ಕಟ್ಟಲಾಗಿದೆಯೇ ಇಲ್ಲವೇ ಎಂದು ಯಾರೂ ನೋಡುವುದಿಲ್ಲ' ಎನ್ನುತ್ತಾರೆ ಚಪ್ಪಲಿ ವರ್ತಕ ಖಾಸಿಂ ಅಡ್ಯಾರ್.

ಧರ್ಮದ ಆಧಾರದಲ್ಲಿ ವ್ಯಾಪಾರಿಗಳನ್ನು ವಿಭಜಿಸುವುದನ್ನು ಹಿಂದೂ ವರ್ತಕರೂ ಒಪ್ಪುವುದಿಲ್ಲ. ಇಲ್ಲಿ ಕೆಲ ಹಿಂದೂ ವರ್ತಕರೂ ತಮ್ಮ ಮಳಿಗೆಗಳಲ್ಲಿ ಕೇಸರಿ ಧ್ವಜ ಕಟ್ಟಿಲ್ಲ.

'ಜಾತ್ರೆಗಳಲ್ಲಿ ಮುಸ್ಲಿಂ ವರ್ತಕರು ಮಾರುವ ಸಾಮಗ್ರಿಗಳೇ ಬೇರೆ. ನಾವು ಮಾರುವ ಸಾಮಗ್ರಿಗಳೇ ಬೇರೆ. ಎಲ್ಲ ಬಗೆಯ ಸಾಮಾಗ್ರಿಗಳ ಮಳಿಗೆಗಳು ಜಾತ್ರೆಯಲ್ಲಿದ್ದರೆ ಗ್ರಾಹಕರಿಗೆ ಅನುಕೂಲ. ಅದರಿಂದ ಎಲ್ಲ ವರ್ತಕರಿಗೂ ವ್ಯಾಪಾರ ಹೆಚ್ಚಾಗುತ್ತದೆ' ಎನ್ನುತ್ತಾರೆ ಪ್ಲಾಸ್ಟಿಕ್ ಪರಿಕರಗಳ ವ್ಯಾಪಾರಿ ಲೋಕೇಶ್.

'ಈ ಸಲ ಹಿಂದೂ ವರ್ತಕರ ಮಳಿಗೆಗಳಲ್ಲಿ ಕೇಸರಿ ಧ್ವಜಗಳನ್ನು ಕಟ್ಟಿದ್ದರಿಂದ ನಮ್ಮ ವ್ಯಾಪಾರಕ್ಕೆ ಧಕ್ಕೆ ಆಗುತ್ತದೆ ಎಂದೆನಿಸುವುದಿಲ್ಲ. ಧ್ವಜ ನೋಡಿಕೊಂಡು ಖರೀದಿ ಮಾಡುವ ಮನಃಸ್ಥಿತಿಯವರು ನೂರರಲ್ಲಿ ಒಂದಿಬ್ಬರು ಇರಬಹುದು' ಎಂದು ವರ್ತಕ ತೌಸೀಫ್ ಬೆಂಗ್ರೆ ಹೇಳಿದರು.

'ಜಾತ್ರೆಗೆ ಹಿಂದೂಗಳು ಮಾತ್ರವಲ್ಲ ಮುಸ್ಲಿಮರೂ ಬರುತ್ತಾರೆ. ತಮಗೆ ಬೇಕಾದ ಸಾಮಗ್ರಿ ಎಲ್ಲಿ ಸಿಗುತ್ತದೋ ಅಲ್ಲಿ ಖರೀದಿಸುತ್ತಾರೆ. ಸಾಮಗ್ರಿಯ ಗುಣಮಟ್ಟ ಹಾಗೂ ದರವನ್ನು ಗಮನಿಸಬಹುದೇ ಹೊರತು ವರ್ತಕರ ಧರ್ಮವನ್ನಲ್ಲ' ಎಂದು ರಾಜೇಶ್ ಉರ್ವಸ್ಟೋರ್ ಅಭಿಪ್ರಾಯಪಟ್ಟರು.


ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ಬಳಿ ನವರಾತ್ರಿ ಮಹೋತ್ಸವದ ಅಂಗವಾಗಿ ತೆರೆಯಲಾದ ಹಿಂದೂ ವರ್ತಕರೊಬ್ಬರ ಮಳಿಗೆಯಲ್ಲಿ ಖರೀದಿಯಲ್ಲಿ ತೊಡಗಿರುವ ಮುಸ್ಲಿಂ ಕುಟುಂಬ
– ಪ್ರಜಾವಾಣಿ ಚಿತ್ರ: ವಿಷ್ಣುಧರನ್

ರಾಷ್ಟ್ರೀಯ ಹಸಿರು ಪೀಠ ನಿರ್ದೇಶನದಡಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸೌಲಭ್ಯಕ್ಕೆ ಸಚಿವ ಸಂಪುಟ ತೀರ್ಮಾನ

110 ಮಲ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 30 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಪರಿಸರ ಪರಿಹಾರ ನಿಧಿಯಡಿ 110 ಮಲ ತ್ಯಾಜ್ಯ ಸಂಸ್ಕರಣಾ ಸ್ಥಾವರಗಳ ಸ್ಥಾಪನೆಗೆ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ. ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಅಲ್ಲದೇ, ರಾಜ್ಯಮಟ್ಟದಲ್ಲಿ ಕರ್ನಾಟಕ ಮಿಷನ್ ಡೈರೆಕ್ಟರ್ ಮೂಲಕ ಒಟ್ಟು 161 ಸೆಸ್‌ಪೂಲ್ ವಾಹನಗಳನ್ನು ಸೆಪ್ಟಿಕ್ ಟ್ಯಾಂಕ್‌ಗಳಿಂದ ಎಫ್‌ಎಸ್‌ಟಿಪಿ ಘಟಕಗಳಿಗೆ ಮಲದ ಕೆಸರು ಸಾಗಣೆಗಾಗಿ ಖರೀದಿಸಲು ಅನುಮೋದನೆ ನೀಡಲಾಯಿತು ಎಂದರು.

100 ಗ್ರಾಮ ನ್ಯಾಯಾಲಯಗಳ ಸ್ಥಾಪನೆಗೆ ಒಪ್ಪಿಗೆ

ರಾಜ್ಯದಲ್ಲಿ 100 ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ರಾಜ್ಯದಲ್ಲಿ ₹ 100 ಕೋಟಿ ವೆಚ್ಚದಲ್ಲಿ ಒಟ್ಟು 400 ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಮೊದಲ ಹಂತದಲ್ಲಿ 100 ನ್ಯಾಯಾಲಯಗಳ ಸ್ಥಾಪನೆ ಆಗಲಿದೆ. ಇದಕ್ಕೆ ₹ 25 ಕೋಟಿ ಬೇಕಾಗುತ್ತದೆ ಎಂದರು.

'ಗ್ರಾಮ ನ್ಯಾಯಾಲಯ– 2008'ರ ಅನ್ವಯ ರಾಜ್ಯ ಸರ್ಕಾರವು ಪಂಚಾಯಿತಿಮಟ್ಟದಲ್ಲಿ ಒಂದು ಅಥವಾ ಹೆಚ್ಚಿನ ಗ್ರಾಮ ನ್ಯಾಯಾಲಯ ಸ್ಥಾಪಿಸಲು ಅವಕಾಶವಿದೆ. ಈಗ ಚಿಕ್ಕಬಳ್ಳಾಪುರ, ಗೌರಿಬಿದನೂರು ತಾಲ್ಲೂಕುಗಳಲ್ಲಿ ನ್ಯಾಯಾಲಯ ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ನ್ಯಾಯ ಮತ್ತು ಉಚಿತ ಕಾನೂನು ನೆರವಿಗೆ ಸಂಬಂಧಿಸಿದಂತೆ ರಾಜ್ಯವು ಸಮಾನ ಅವಕಾಶದ ಆಧಾರದ ಮೇಲೆ ನ್ಯಾಯ ಲಭಿಸುವಂತೆ ಕಾನೂನು ವ್ಯವಸ್ಥೆಯ ನಿರ್ವಹಣೆ ನಿಶ್ಚಿತಗೊಳಿಸಲು ಗ್ರಾಮ ನ್ಯಾಯಾಲಯಗಳ ಅಗತ್ಯವಿದೆ ಎಂದರು.

ಈ ನ್ಯಾಯಾಲಯಗಳು ಜೆಎಂಎಫ್‌ಸಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಮೂಲಕ ಕಾರ್ಯಕಲಾಪಗಳನ್ನು ನಿರ್ವಹಿಸುತ್ತವೆ ಎಂದೂ ತಿಳಿಸಿದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ನಿರ್ದೇಶನ ಜಾರಿ ಮಾಡಲು ಎನ್‌ಜಿಟಿ ಪರಿಸರ ಪರಿಹಾರ ನಿಧಿ ಮತ್ತು ಎಸ್‌ಬಿಎಂ (ಯು)-2.0 ನಿಧಿಗಳ ಅಡಿಯಲ್ಲಿ ₹ 400.24 ಕೋಟಿ ವೆಚ್ಚದಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಈ ಘಟಕಗಳನ್ನು ನಿರ್ಮಿಸಲಾಗುವುದು. ಕರ್ನಾಟಕ ಮಿಷನ್ ಡೈರೆಕ್ಟರ್ ಮೂಲಕ ₹ 40.25 ಕೋಟಿ ವೆಚ್ಚದಲ್ಲಿ ಸೆಸ್‌ಪೂಲ್ ವಾಹನಗಳನ್ನು ಖರೀ-ದಿಸಲಾಗುವುದು ಎಂದು ಪಾಟೀಲ ತಿಳಿಸಿದರು.

ಮೊದಲ ಹಂತದಲ್ಲಿ 110 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನು-ಷ್ಠಾನಗೊಳ್ಳಲಿದೆ. ಇದಕ್ಕೆ ಟೆಂಡರ್ ಕರೆಯಲಾಗುವುದು. ಪ್ರತಿ ಕಂದಾಯ ವಿಭಾಗಕ್ಕೆ ನಾಲ್ಕು ಪ್ಯಾಕೇಜ್‌ಗಳಿಗಿಂತ ಹೆಚ್ಚಿಲ್ಲದಂತೆ ಟೆಂಡರ್ ಪ್ಯಾಕೇಜ್ ರೂಪಿಸಲಾಗುವುದು. ಈಗ ದೇವನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಒಂದು ಘಟಕ ಆರಂಭವಾಗಿದೆ. ಅಲ್ಲದೇ, 45 ಎಫ್‌ಎಸ್‌ಟಿಪಿಗಳ ನಿರ್ಮಾಣ ಕಾರ್ಯ ಪೌರಾಡಳಿತ ನಿರ್ದೇಶನಾಲಯ ಕೈಗೆತ್ತಿಕೊಂಡಿದೆ ಎಂದು ಹೇಳಿದರು.

ಪ್ರಮುಖ ತೀರ್ಮಾನಗಳು

- ಗೃಹಲಕ್ಷ್ಮಿ ಯೋಜನೆ ಲಿಂಗತ್ವ ಅಲ್ಪಸಂಖ್ಯಾತರಿಗೂ ವಿಸ್ತರಣೆ. 854 ಕುಟುಂಬಗಳಿಗೆ ಇದರ ಪ್ರಯೋಜನ ಸಿಗಲಿದೆ. ₹ 2.04 ಕೋಟಿ ವೆಚ್ಚವಾಗಲಿದೆ.
- ಕೊಪ್ಪಳ ವೈದ್ಯಕೀಯ ಕಾಲೇಜಿನ 450 ಹಾಸಿಗೆಗಳ ಬೋಧನಾ ಆಸ್ಪತ್ರೆ ನಿರ್ಮಾಣ ಕಾಮಗಾರಿಯ ಪರಿಷ್ಕೃತ ₹ 192 ಕೋಟಿ ಅಂದಾಜಿಗೆ ಒಪ್ಪಿಗೆ ಹುಬ್ಬಳ್ಳಿಯ ಗೋಕುಲ್ ರಸ್ತೆಯಲ್ಲಿರುವ ವಾಯವ್ಯ ಕರ್ನಾಟಕ ಸಾರಿಗೆ ಕೇಂದ್ರ ಬಸ್ ನಿಲ್ದಾಣವನ್ನು ₹ 23.48 ಕೋಟಿ ಅಂದಾಜು ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸುವ ಕಾಮಗಾರಿಗೆ ಅನುಮೋದನೆ
- ಧಾರವಾಡ ಹಳೆಯ ನಗರ ಸಾರಿಗೆ ಬಸ್ ನಿಲ್ದಾಣವನ್ನು ₹ 13.11 ಕೋಟಿ ವೆಚ್ಚದಲ್ಲಿ ನೂತನ ಮಾದರಿ ನಗರ ಸಾರಿಗೆ ಬಸ್ ನಿಲ್ದಾಣ ನಿರ್ಮಾಣ ಮಾಡಲು ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ
- ರಾಜ್ಯದ 11 ಪೊಲೀಸ್ ತರಬೇತಿ ಶಾಲೆಗಳ ಬಲವರ್ಧನೆ ಕಾಮಗಾರಿಯನ್ನು ₹ 20 ಕೋಟಿ ಆಡಳಿತಾತ್ಮಕ ಅನುಮೋದನೆ. ಖಾನಾಪುರ, ಕಲಬುರಗಿ, ಕೆಪಿಎ ಮೈಸೂರು, ಐಮಂಗಲ, ಧಾರವಾಡ, ಹಾಸನ, ಪಿಟಿಎಸ್ ಮೈಸೂರು, ಥಣಿಸಂದ್ರ, ಯಲಹಂಕ, ಚನ್ನಪಟ್ಟಣ ಮತ್ತು ಪಿಡಿಎಂಎಸ್ ಗಳಲ್ಲಿರುವ ಶಾಲೆಗಳ ಬಲವರ್ಧನೆ

₹17,901 ಕೋಟಿ ನೆರವು ಕೋರಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ ಕಾರಣ ಬೆಳೆ ನಷ್ಟ, ಕುಡಿಯುವ ನೀರು ಪೂರೈಕೆ ಮತ್ತು ಜಾನುವಾರುಗಳ ಸಂರಕ್ಷಣೆ ಮತ್ತಿತರ ಪರಿಹಾರ ಕಾರ್ಯಗಳಿಗಾಗಿ ಕೇಂದ್ರದಿಂದ ₹17,901.73 ಕೋಟಿ ನೆರವು ಕೋರಲು ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಒಟ್ಟು ₹33,770.10 ಕೋಟಿ ಮೌಲ್ಯದ ಬೆಳೆ ಹಾನಿಯಾಗಿದೆ. ಕೇಂದ್ರ ಸಚಿವರನ್ನು ಭೇಟಿ ಮಾಡಿ ರಾಜ್ಯದ ಸ್ಥಿತಿ ವಿವರಿಸಲು ಸಮಯ ಕೇಳುತ್ತಿದ್ದೇವೆ. ಈವರೆಗೆ ಸಮಯ ನೀಡಿಲ್ಲ. ಈ ಬಗ್ಗೆ ಸಭೆಯಲ್ಲಿ ಕಳವಳ ವ್ಯಕ್ತವಾಯಿತು ಎಂದರು.

195 ತಾಲ್ಲೂಕುಗಳಲ್ಲದೇ ಹೆಚ್ಚುವರಿಯಾಗಿ 21 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲು ಸಂಪುಟ ಒಪ್ಪಿಗೆ ನೀಡಿತು ಎಂದರು.

ರಸಗೊಬ್ಬರ ಬಫರ್ ಸ್ಟಾಕ್ ದಾಸ್ತಾನು ಮಾಡಲು ಕರ್ನಾಟಕ ಸಹಕಾರ ಮಾರಾಟ ಮಂಡಳಿಗೆ ₹200 ಕೋಟಿ ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತಕ್ಕೆ ₹200 ಕೋಟಿ ಸಾಲದ ಮೊತ್ತಕ್ಕೆ ಗ್ಯಾರಂಟಿ ನೀಡಲು ಸಂಪುಟ ಒಪ್ಪಿಗೆ ನೀಡಿತು.

ಸಚಿವರ ವೇತನ ಹೆಚ್ಚಿಸುವ ಸಂಬಂಧ ಘಟನೋತ್ತರ ಮಂಜೂರಾತಿ ನೀಡಲಾಯಿತು. ಕಳೆದ ಅಧಿವೇಶನದಲ್ಲಿ ವೇತನ ಹೆಚ್ಚಳ ಸಂಬಂಧ ಮಸೂದೆಗೆ ಅಂಗೀಕಾರ ನೀಡಲಾಗಿತ್ತು ಎಂದು ಪಾಟೀಲ ತಿಳಿಸಿದರು.

'ನಗರ ಅನಿಲ ವಿತರಣಾ ಜಾಲ ರಾಜ್ಯ ನೀತಿ': ಗೃಹ ಬಳಕೆ, ವಾಣಿಜ್ಯ, ಕೈಗಾರಿಕಾ ಗ್ರಾಹಕರಿಗೆ ಕೊಳವೆ ಮೂಲಕ ನೈಸರ್ಗಿಕ ಅನಿಲ ಸರಬರಾಜು ಮತ್ತು ವಾಹನಗಳಿಗೆ ಕಂಪ್ರೆಸ್ಡ್ ನೈಸರ್ಗಿಕ ಅನಿಲ ಒದಗಿಸುವ ಕುರಿತು 'ನಗರ ಅನಿಲ ವಿತರಣಾ ಜಾಲದ ಅಭಿವೃದ್ಧಿ ರಾಜ್ಯ ನೀತಿ'ಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ರಾಜ್ಯದಲ್ಲಿ ಹಸಿರು ಮತ್ತು ಸ್ವಚ್ಛ ಪರಿಸರವನ್ನು ರೂಪಿಸಲು ನೈಸರ್ಗಿಕ ಅನಿಲದ ಬಳಕೆ ಹೆಚ್ಚಿಸಲು ಅನಿಲ ಆಧಾರಿತ ಆರ್ಥಿಕ ಅಭಿವೃದ್ಧಿಗೆ ಸರ್ಕಾರ ಕ್ರಮಕೈಗೊಳ್ಳಲಿದೆ ಎಂದರು.

'ನಂಬಿದವರಿಗೆ ನಾಮ ಬಳಿಯುವ ಎಚ್‌ಡಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಂಬಿದವರಿಗೆ ನಾಮ ಬಳಿಯುವ ಕುಮಾರಸ್ವಾಮಿ, ನಿಮ್ಮ ಬಾಯಲ್ಲಿರುವುದು ನಾಲಿಗೆಯೊ ಅಥವಾ ಕೊಳಕುಮಂಡಲ ಹಾವೊ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಿರುದ್ಧ ರಾಜ್ಯ ಕಾಂಗ್ರೆಸ್ ಘಟಕ ವಾಗ್ದಾಳಿ ನಡೆಸಿದೆ.

ಸರಣಿ 'X' (ಟ್ವೀಟ್) ಮಾಡಿರುವ ಕಾಂಗ್ರೆಸ್, 'ಕ್ಷಣಕ್ಕೊಂದು ಬಣ್ಣ, ದಿನಕ್ಕೊಂದು ವೇಷ ತೊಡುವ ನಿಮ್ಮ ಬಣ್ಣ-ದೋಕುಳಿಯಾಟಕ್ಕೆ ಗೋಸುಂಬೆಯೇ ಲಾಗ ಹೊಡೆದಿದೆ! ಹಿಂದಿನ ನಿಮ್ಮ ಎಲ್ಲ ಅಕ್ರಮ, ಅನಾಚಾರ, ಅವ್ಯವಹಾರಗಳು ಹೊರಬರುತ್ತವೆ ಎಂದು ಹೆದರಿ ಬಿಜೆಪಿ ಸೆರಗಿನೊಳಗೆ ಸೇರಿಕೊಂಡಿರುವ ನಿಮ್ಮ ಜಾತ್ಯತೀತತೆ ನಾಟ್ಯಕ್ಕೆ ಬೆರಗಾಗಿ ತನೆ ಹೊತ್ತ ಮಹಿಳೆಯೇ 'ಕೋಮು-ಕುಂಡ'ದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ವ್ಯಂಗ್ಯವಾಡಿದೆ.

'ಕುಮಾರಸ್ವಾಮಿಯವರೇ, ಯಡಿಯೂರಪ್ಪ ಅವರಿಗೆ ಅಧಿಕಾರ ಹಸ್ತಾಂತರಿಸದೆ ವಚನ ಭ್ರಷ್ಟರಾದಿರಿ. ಕಾಂಗ್ರೆಸ್ ನಿಮ್ಮನ್ನು ಸಿ.ಎಂ ಮಾಡಿದಾಗ ಯಡಿಯೂರಪ್ಪ ಅಸೆಂಬ್ಲಿಯಲ್ಲಿ, 'ಶಿವಕುಮಾರ್, ಈ ಅಪ್ಪ ಮಕ್ಕಳನ್ನು ನಂಬಬೇಡಿ, ಬಳಸಿ ಬಿಸಾಡುತ್ತಾರೆ. ಹಾವು ಇವರ ಲಾಂಛನ' ಎಂದಿದ್ದರು. ಕಾಂಗ್ರೆಸ್ ದಯಾಭಿಕ್ಷೆಯಿಂದ ಎರಡನೇ ಬಾರಿಗೆ ಸಿ.ಎಂ ಆದ ನಿಮಗೆ ಕಿಂಚಿತ್ತಾದರೂ ನಿಯತ್ತು ಬೇಡವೇ? ಆತ್ಮಸಾಕ್ಷಿ ಮಾರಿಕೊಂಡೇ ರಾಜಕೀಯ ಬಯಲಾಟ ಆಡುವ ನಿಮ್ಮಂಥವರಿಂದ ನೀತಿ, ನಿಯತ್ತು, ನೈತಿಕತೆ ನಿರೀಕ್ಷೆ ಮಾಡುವುದೇ ಮಹಾಪಾಪ' ಎಂದು ಜರೆದಿದೆ.

'ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ ಅವರನ್ನು ಅನ್ಯ ರಾಜ್ಯದ ಪೇಶ್ವೆ ಎಂದು ನಿಂದಿಸಿದಿರಿ. ಸಿ.ಟಿ. ರವಿಯನ್ನು ಲೂಟಿ ರವಿ ಎಂದು ನಾಮಕರಣ ಮಾಡಿದವರೂ ನೀವೇ. ಇವತ್ತು ಅವರದ್ದೇ ಅಂಗಿ ಚುಂಗು ಹಿಡಿದು ನಿಂತಿದ್ದೀರಲ್ಲಾ... ನಿಮಗೇನಾದರೂ ಆತ್ಮಗೌರವ ಇದೆಯೇ' ಎಂದೂ ಪ್ರಶ್ನಿಸಿದೆ.

'ನಿಮ್ಮಂಥವರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡುವ ಅಗತ್ಯವಿಲ್ಲ. ನೀವೀಗ ನಿರುದ್ಯೋಗಿ. ಪರರ ನಿಂದನೆಗೆ ಸಾಕಷ್ಟು ಸಮಯವಿದೆ. ಮಾತಾಡುತ್ತಾ ಹೋಗಿ. ನಾವು ತಲೆಕೆಡಿಸಿಕೊಳ್ಳುವುದಿಲ್ಲ. ನಮಗೆ ಕೆಲಸವಿದೆ, ಜನ ಜವಾಬ್ದಾರಿ ಕೊಟ್ಟಿದ್ದಾರೆ. ಅದನ್ನು ಮರೆತು ಹಾದಿ ಬೀದಿಯಲ್ಲಿ ಹೋಗುವವರಿಗೆಲ್ಲ ಉತ್ತರ ಕೊಡುತ್ತಾ ಹೋದರೆ ನಿಮಗೂ ನಮಗೂ ವ್ಯತ್ಯಾಸ ಇರುವುದಿಲ್ಲ' ಎಂದೂ ಹೇಳಿದೆ.

ನನ್ನನ್ನು ಜೈಲಿಗೆ ಕಳಿಸಲು ಆತುರ: ಡಿಕೆಶಿ ಲೇವಡಿ

ದೇವನಹಳ್ಳಿ: 'ಜೆಡಿಎಸ್ ಮತ್ತು ಬಿಜೆಪಿ ಮುಖಂಡರೆಲ್ಲ ನನ್ನನ್ನು ಜೈಲಿಗೆ ಕಳಿಸಲು ಆತುರದಲ್ಲಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಲೇವಡಿ ಮಾಡಿದ್ದಾರೆ.

'ಎಚ್‌.ಡಿ. ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ಮತ್ತು ಬಿಜೆಪಿ ಮುಖಂಡರೆಲ್ಲ ಆದಾಯ ತೆರಿಗೆ ಇಲಾಖೆಯ ವಕ್ತಾರರಂತೆ ವರ್ತಿಸುತ್ತಿದ್ದಾರೆ. ಕೆ.ಎಸ್‌. ಈಶ್ವರಪ್ಪ ಅವರಂತೂ ನ್ಯಾಯಾಧೀಶರಾಗಿಬಿಟ್ಟಿದ್ದಾರೆ' ಎಂದರು.

ಗುರುವಾರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ಮೇಲೆ ದಾಖಲು ಮಾಡಿರುವ ಎಫ್‌ಐಆರ್ ರಾಜಕೀಯಪ್ರೇರಿತ. ಅದನ್ನು ರದ್ದುಪಡಿಸುವಂತೆ ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ. ಕಾನೂನಿನ ಚೌಕಟ್ಟಿನಲ್ಲಿ ಹೋರಾಡುತ್ತಿ ದ್ದೇನೆ. ಎಲ್ಲದಕ್ಕೂ ಸಮಯವೇ ಉತ್ತರ ಕೊಡಲಿದೆ' ಎಂದರು.

'ಹೊಸದಾಗಿ ಹುಟ್ಟಿಕೊಂಡಿರುವ ಆದಾಯ ತೆರಿಗೆ ಇಲಾಖೆ ವಕ್ತಾರರು ಶೇ 90ರಷ್ಟು ತನಿಖೆ ಪೂರ್ಣಗೊಂಡಿದೆ ಎಂದು ಹೇಳುತ್ತಿದ್ದಾರೆ. ಆದರೆ, ಒಂದು ದಿನವೂ ನನ್ನನ್ನು ವಿಚಾರಣೆಗೆ ಕರೆದಿಲ್ಲ. ಅದು ಹೇಗೆ ತನಿಖೆ ಮುಗಿಯಲು ಸಾಧ್ಯ' ಎಂದು ಪ್ರಶ್ನಿಸಿದರು.

> **ಎಚ್‌.ಡಿ. ಕುಮಾರಸ್ವಾಮಿ ಗಂಟೆಗೊಂದು ಮಾತನಾಡುತ್ತಾರೆ. ಆ ಮೂಲಕ ಮನಸ್ಸಿನ ಭಾವೋದ್ವೇಗ ಹೊರಹಾಕುತ್ತಿದ್ದಾರೆ. ನಾನು ವ್ಯವಹಾರ ಜ್ಞಾನ ಮತ್ತು ರಾಜಕೀಯ ಪ್ರಜ್ಞೆಯಿಂದ ಮಾಡನಾಡುತ್ತೇನೆ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

'ಸಿಬಿಐ ವಿಚಾರಣೆಗೆ ಕರೆದು ನನ್ನ ಆಸ್ತಿ ಯಾವುವು, ನನ್ನ ಪತ್ನಿಯ ಆಸ್ತಿ ಎಷ್ಟಿದೆ ಎಂಬ ಮಾಹಿತಿ ಪಡೆಯದೇ ಹೇಗೆ ತನಿಖೆ ಮುಕ್ತಾಯ ಮಾಡಲು ಸಾಧ್ಯ? ದೇಶದ ಕಾನೂನು ಮತ್ತು ನ್ಯಾಯಾಲಯದ ಮೇಲೆ ನಂಬಿಕೆ ಇದೆ. ಎಲ್ಲವನ್ನೂ ಪಟ್ಟಿ ಮಾಡಿಕೊಂಡಿದ್ದೇನೆ. ಸೂಕ್ತ ಸಮಯದಲ್ಲಿ ಉತ್ತರ ಕೊಡುತ್ತೇನೆ' ಎಂದರು.

'4 ತಿಂಗಳಲ್ಲಿ ಹಲವು ಸಲ ಹಸ್ತಕ್ಷೇಪ'

ಡಿಕೆಶಿ ವಿರುದ್ಧ ಸಚಿವ ಜಾರಕಿಹೊಳಿ ಪರೋಕ್ಷ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ನಾಲ್ಕು ತಿಂಗಳುಗಳಲ್ಲಿ ವರ್ಗಾವಣೆ ವಿಚಾರವಾಗಿ ಸಾಕಷ್ಟು ಬಾರಿ ಹಸ್ತಕ್ಷೇಪ ಆಗಿದೆ. ಹಾಗೆಂದು, ನನ್ನ ಮೌನ ದೌರ್ಬಲ್ಯ ಅಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದರು.

ಬೆಳಗಾವಿ ಜಿಲ್ಲೆಯ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ಹಸ್ತಕ್ಷೇಪ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಗುರು ವಾರ ಪ್ರತಿಕ್ರಿಯಿಸಿದ ಅವರು, 'ಪಕ್ಷದ ಹಿತದೃಷ್ಟಿಯಿಂದ ನಾನು ರಾಜಿಯಾಗಿದ್ದೇನೆ' ಎಂದರು.

'ವರ್ಗಾವಣೆಗೆ ನಾನು ಶಿಫಾರಸು ಮಾಡಿದ್ದೆ. ನಿಗಮ, ಮಂಡಳಿಯಲ್ಲಿ ಕೇವಲ ಶಾಸಕರಿಗೆ ಮಾತ್ರ ಅವಕಾಶ ಬೇಡ, ಕಾರ್ಯಕರ್ತರಿಗೆ ಅವಕಾಶ ಕೊಡಿ ಎಂದೂ ಹೇಳಿದ್ದೇನೆ. ಮಾಡುವುದು, ಬಿಡುವುದು ಪಕ್ಷಕ್ಕೆ ಬಿಟ್ಟಿದ್ದು' ಎಂದರು.

'30 ವರ್ಷಗಳಿಂದ ರಾಜಕೀಯದಲ್ಲಿದ್ದು ಯಶಸ್ಸು ಕಂಡಿದ್ದೇನೆ. ಲಕ್ಷ್ಮಿ ಹೆಬ್ಬಾಳಕರ ಜೊತೆ ಯಾವುದೇ ಕಿರಿಕಿರಿಯಿಲ್ಲ. ನಾನು ಅವರನ್ನು ಮೀರಿ ಬೆಳೆದಿದ್ದೇನೆ. ನಾನು ಆರು ಬಾರಿ ಶಾಸಕ ನಾಗಿದ್ದೇನೆ. ಅವರು ಎರಡು ಬಾರಿ ಮಾತ್ರ ಶಾಸಕರಾಗಿ, ಈಗ ಸಚಿವರಾಗಿದ್ದಾರೆ' ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ರಾಜ್ಯ ಪ್ರವಾಸ ಮಾಡಲು ಯಾವುದೇ ಅಡ್ಡಿಯಿಲ್ಲ. ಶಾಸಕರು ಕ್ಷೇತ್ರದ ಕೆಲಸ ಮಾತ್ರ ಅಲ್ಲ. ಒಟ್ಟಾಗಿ ಪ್ರವಾಸ ಕೂಡ ಮಾಡಬೇಕು. ಮುಂದೆ ಆ ಬಗ್ಗೆ ಯೋಜನೆ ಹಾಕಿಕೊಳ್ಳುತ್ತೇವೆ' ಎಂದೂ ಹೇಳಿದರು.

'ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನಕ್ಕೆ ನಾನೂ ಹೆಸರು ಶಿಫಾರಸು ಮಾಡಿದ್ದೇನೆ. ಲಕ್ಷ್ಮಣ ಸವದಿ, ಅಂಜಲಿ ನಿಂಬಾಳ್ಕರ್ ಯಾರೇ ಕಾರ್ಯಾಧ್ಯಕ್ಷರಾದರೂ ನನಗೆ ಅಡ್ಡಿಯಿಲ್ಲ' ಎಂದ ಅವರು, 'ಜಿಲ್ಲಾ ಘಟಕದ ಅಧ್ಯಕ್ಷರು, ಕಾರ್ಯಾಧ್ಯಕ್ಷರ ಬದಲಾವಣೆಗೆ ಶಿಫಾರಸು ಮಾಡಿದ್ದೇನೆ. ಹೈಕಮಾಂಡ್ ಏನು ಮಾಡುತ್ತದೆ ಎಂದು ಕಾದು ನೋಡೋಣ' ಎಂದು ತಿಳಿಸಿದರು.

ರಾಜೀನಾಮೆಗೆ ಅಲ್ಪಸಂಖ್ಯಾತ ಮುಖಂಡರ ತೀರ್ಮಾನ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಸಿ.ಎಂ. ಇಬ್ರಾಹಿಂ ಅವರನ್ನು ತೆಗೆದು ಹಾಕಿದ್ದನ್ನು ಖಂಡಿಸಿ ಬಾಗಲಕೋಟೆ ಜೆಡಿಎಸ್ ಅಲ್ಪಸಂಖ್ಯಾತರ ಮುಖಂಡರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಸಾಮೂಹಿಕ ರಾಜೀನಾಮೆ ನೀಡಲು ನಿರ್ಧರಿದ್ದಾರೆ.

'ಜೆಡಿಎಸ್‌ನ ಜಾತ್ಯತೀತ ನಿಲುವು ಸಡಿಲಗೊಂಡಿವೆ. ಅಲ್ಪಸಂಖ್ಯಾತರ ವಿರೋಧಿ ನೀತಿ ಅನುಸರಿಸುವ ಬಿಜೆಪಿ ಜತೆಗೆ ಹೊಂದಾಣಿಕೆ ಮಾಡಿರುವ ಕಾರಣದಿಂದಲೂ ಪಕ್ಷ ತೊರೆಯಲು ತೀರ್ಮಾನಿಸಿದ್ದೇವೆ' ಎಂದು ಬಿಟಿಡಿಎ ಮಾಜಿ ಅಧ್ಯಕ್ಷ ಜಾಕೀರ್ ಮೊಕಾಶಿ ತಿಳಿಸಿದ್ದಾರೆ.

'ಎ.ಎಂ. ಸಾಲಾರ, ಅಜೀಜ್ ಬಾಳಿಕಾಯಿ, ದಾದಾಬಾಯಿ ಡಾಲಾಯತ್, ಎಂ.ಆರ್. ಮನಿಯಾರ, ಐ.ಎ.ಜಮಾದಾರ , ರಜಾಕ್ ಹಳ್ಳೂರ, ಶಫೀಕ್ ದೂಡಕಟ್ಟಿ, ತೋಹಿದ್ ಸಂತಿಶಿರೂರ, ಅಕ್ರಮ್ ಶಹಾಪುರ, ಅಬ್ದುಲ್ ಹಮೀದ್ ಮಲಬಾರಿ, ದಸ್ತಗೀರ್ ಚೌಧರಿ, ಶಬ್ಬಿರ್ ನಧಾಫ್ ಸೇರಿ ಹಲವರು ರಾಜೀನಾಮೆ ಸಲ್ಲಿಸುವರು' ಎಂದು ಅವರು ತಿಳಿಸಿದ್ದಾರೆ.


ನವರಾತ್ರಿ ಉತ್ಸವದ ಅಂಗವಾಗಿ ಕಲಬುರಗಿಯ ಶರಣಬಸವೇಶ್ವರ ವಿಶ್ವವಿದ್ಯಾಲಯದ ಆವರಣದಲ್ಲಿ ಗುರುವಾರ ನಡೆದ ದಾಂಡಿಯಾ ನೃತ್ಯ ಕಾರ್ಯಕ್ರಮದಲ್ಲಿ ಯುವತಿಯರು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಅವಾಚ್ಯ ಶಬ್ದಗಳಿಂದ ಅಧಿಕಾರಿಗಳನ್ನು ನಿಂದಿಸಿದ ಶಾಸಕ ಬಸನಗೌಡ ದದ್ದಲ್

ಪ್ರಜಾವಾಣಿ ವಾರ್ತೆ

ರಾಯಚೂರು: ನೀರಾವರಿ ಇಲಾಖೆಯ ಅಧಿಕಾರಿಗಳನ್ನು ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಅವಾಚ್ಯ ಪದಗಳಿಂದ ನಿಂದಿಸಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.


ಬಸನಗೌಡ ದದ್ದಲ್

ತುಂಗಭದ್ರಾ ಎಡದಂಡೆ ಕಾಲುವೆಯ ಸಿರವಾರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಸತ್ಯನಾರಾಯಣ ಶೆಟ್ಟಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವಿಜಯಲಕ್ಷ್ಮಿ ಪಾಟೀಲ ಅವರನ್ನು ಅಸಾಂವಿಧಾನಿಕ ಪದಗಳಿಂದ ನಿಂದಿಸಿದ್ದಾರೆ.

'7 ಕಡೆ ಕಾಲುವೆಯ ವಿತರಣೆ, ನಿರ್ವಹಣೆ ಗೇಟ್ ಮುರಿದಿದ್ದು ದುರಸ್ತಿ ಮಾಡಿಲ್ಲ. ನಿರ್ಲಕ್ಷ್ಯ ಮಾಡಿದರೆ ರೈತರಿಂದ ಚಪ್ಪಲಿಯಲ್ಲಿ ಹೊಡೆಸುತ್ತೇನೆ' ಎಂದು ಅಧಿಕಾರಿಗಳ ಮೇಲೆ ರೇಗಾಡಿದ್ದಾರೆ.

ತುಂಗಭದ್ರಾ ಎಡದಂಡೆ ನಾಲೆಯ ಕೊನೆ ಭಾಗದ ರೈತರಿಗೆ ನೀರು ತಲುಪದ ಕಾರಣ ಎರಡು ದಿನ ಪ್ರತಿಭಟನೆ ಮಾಡಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಕಾರಣ ಶಾಸಕ ಬಸನಗೌಡ ಹಾಗೂ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಬುಧವಾರ ಕಾಲುವೆ ವೀಕ್ಷಣೆ ಮಾಡಿದ್ದರು. ನಂತರ ಅಧಿಕಾರಿಗಳೊಂದಿಗೆ ಮಾತನಾಡುವಾಗ ಬಸನ ಗೌಡ ದದ್ದಲ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

'ಅಪಪ್ರಚಾರಕ್ಕೆ ಕಿವಿಗೊಡಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಯುಧಪೂಜೆ ಸಂದರ್ಭದಲ್ಲಿ ರಾಸಾಯನಿಕ ಯುಕ್ತ ಅರಿಸಿನ-ಕುಂಕುಮ ಮತ್ತು ಇತರೆ ಬಣ್ಣಗಳನ್ನು ವಿಧಾನಸೌಧ, ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡಗಳಲ್ಲಿರುವ ಕಚೇರಿಗಳ ಒಳಗೆ ಅಥವಾ ಕಾರಿಡಾರ್‌ಗಳಲ್ಲಿ ಬಳಸಬಾರದು ಎಂದು ಹೊರಡಿಸಿರುವ ಆದೇಶ ಹೊಸತೇನೂ ಅಲ್ಲ. ಈ ಬಗ್ಗೆ ಸರ್ಕಾರದ ವಿರುದ್ಧ ನಡೆಸಲಾಗುತ್ತಿರುವ ಅಪಪ್ರಚಾರಕ್ಕೆ ಯಾರೂ ಕಿವಿಗೊಡಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಈ ಬಗ್ಗೆ 'X' (ಟ್ವೀಟ್) ಮಾಡಿರುವ ಅವರು, 'ಇವು ಪಾರಂಪರಿಕ ಕಟ್ಟಡಗಳಾಗಿರುವುದರಿಂದ ರಾಸಾಯನಿಕಯುಕ್ತ ಬಣ್ಣಗಳು ನೆಲಹಾಸಿನ ಮೇಲೆ ಬಿದ್ದು, ಅವುಗಳ ಕಲೆ ಶಾಶ್ವತವಾಗಿ ಅಥವಾ ಬಹುಕಾಲ ಉಳಿಯಲಿದೆ. ಇದರಿಂದಾಗುವ ಹಾನಿ ತಪ್ಪಿಸಲು ಹಿಂದಿನ ಸರ್ಕಾರಗಳು ಪಾಲಿಸಿಕೊಂಡು ಬಂದಿದ್ದ ಸಂಪ್ರದಾಯವನ್ನೇ ನಾವು ಪಾಲಿಸಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಸಂತ್ರಸ್ತರ ನೆರವಿಗೆ 'ಸಾಂತ್ವನ': ಸಚಿವ ಜಮೀರ್ ಚಾಲನೆ

ಬೆಂಗಳೂರು: 'ಪ್ರವಾಹ, ಅಗ್ನಿ ದುರಂತ, ಕೋಮು ಗಲಭೆ ಹಾಗೂ ಪ್ರಕೃತಿ ವಿಕೋಪದಲ್ಲಿ ಸಂತ್ರಸ್ತ ಕುಟುಂಬಗಳಿಗೆ ನೆರವಾಗಲು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 'ಸಾಂತ್ವನ' ಯೋಜನೆಯನ್ನು ಆರಂಭಿಸಿದೆ.

ಯೋಜನೆಗೆ ಗುರುವಾರ ಚಾಲನೆ ನೀಡಿ ಮಾತನಾಡಿದ ವಸತಿ ಸಚಿವ ಜಮೀರ್ ಅಹಮದ್ ಖಾನ್, 'ಮನೆ, ಅಂಗಡಿ ಕಳೆದುಕೊಳ್ಳುವ ಕುಟುಂಬ ಗಳಿಗೆ ಈ ಯೋಜನೆಯಡಿ ₹ 5 ಲಕ್ಷದ ವರೆಗೆ ಸಾಲ ನೀಡಲಾಗುವುದು' ಎಂದರು.

'ಈ ಸಾಲದಲ್ಲಿ ಶೇ 50ರಷ್ಟು (₹ 2.50 ಲಕ್ಷ) ಸಾಲ, ಉಳಿದ ₹ 2.50 ಲಕ್ಷ ಸಹಾಯಧನ. ಸಾಲಕ್ಕೆ ಶೇ 3ರಷ್ಟು ಬಡ್ಡಿ ವಿಧಿಸಲಾಗುವುದು. ಈ ಮೊತ್ತದಲ್ಲಿ ಸಂತ್ರಸ್ತ ಕುಟುಂಬಗಳು ವ್ಯಾಪಾರದಲ್ಲಿ ತೊಡಗಬಹುದು' ಎಂದು ತಿಳಿಸಿದರು.

₹ 5 ಸಾವಿರ ಕೋಟಿ ಆದಾಯ ನಿರೀಕ್ಷೆ

ಅನಧಿಕೃತ 34.35 ಲಕ್ಷ ಆಸ್ತಿಗಳಿಗೆ ತೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳ 34.35 ಲಕ್ಷ ಆಸ್ತಿಗಳಿಗೆ ಬಿಬಿಎಂಪಿ ಮಾದರಿಯಲ್ಲಿ 'ಬಿ' ಖಾತಾ ನೀಡಿ, ತೆರಿಗೆ ನಿಗದಿಗೆ ಶಿಫಾರಸು ಮಾಡಲು ನಿರ್ಧರಿಸಿರುವ ಸಚಿವ ಈಶ್ವರ ಖಂಡ್ರೆ ನೇತೃತ್ವದ ಸಂಪುಟ ಉಪ ಸಮಿತಿ, ವಾರದ ಒಳಗೆ ಕರಡು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಸಮಿತಿಯ ಸಭೆಯ ಬಳಿಕ ಮಾತನಾಡಿದ ಈಶ್ವರ ಖಂಡ್ರೆ, 'ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ತೆರಿಗೆ ನಿಗದಿಪಡಿಸಿ ಸಂಗ್ರಹಿಸಿದರೆ ರಾಜ್ಯದ ಬೊಕ್ಕಸಕ್ಕೆ ಸುಮಾರು ₹ 5 ಸಾವಿರ ಕೋಟಿ ಆದಾಯ ಬರಲಿದೆ' ಎಂದರು.

'ಇನ್ನು ಮುಂದೆ ಅಕ್ರಮ ಕಟ್ಟಡ ನಿರ್ಮಾಣಕ್ಕೆ ಆಸ್ಪದ ನೀಡುವುದಿಲ್ಲ. ಈಗಾಗಲೇ ವಾಸ ಮಾಡುತ್ತಿರುವ ಮನೆಗಳಿಗೆ ದಂಡ ವಿಧಿಸಿ, ಸಕ್ರಮಗೊಳಿಸುವ ಕುರಿತು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಲಾಗುವುದು. ಕೋರ್ಟ್ ಒಪ್ಪಿದರೆ ಮಾತ್ರ ಅಕ್ರಮ-ಸಕ್ರಮ ಯೋಜನೆ ಮರು ಜಾರಿ ಸಾಧ್ಯ' ಎಂದು ಖಂಡ್ರೆ ವಿವರಿಸಿದರು.

'ನಗರಪಾಲಿಕೆ, ನಗರಸಭೆ ಮತ್ತು ಪುರಸಭೆಯ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಇಲ್ಲದೆ ಅಕ್ರಮ ಬಡಾವಣೆಗಳನ್ನು ನಿರ್ಮಿಸಲಾಗಿದೆ. ಕಂದಾಯ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಲಾಗಿದೆ. ಪ್ರಸ್ತುತ 54.90 ಲಕ್ಷ ಆಸ್ತಿಗಳನ್ನು ಪಟ್ಟಿ ಮಾಡಲಾಗಿದೆ. ಅವುಗಳಲ್ಲಿ 20.55 ಲಕ್ಷ ಆಸ್ತಿಗಳಿಂದ ತೆರಿಗೆ ಪಾವತಿಯಾಗುತ್ತಿದೆ. ನಿಯಮಬಾಹಿರ ನಿರ್ಮಾಣದ ಕಟ್ಟಡಗಳ ಮಾಲೀಕರು ಸ್ಥಳೀಯ ಸಂಸ್ಥೆಗಳಿಂದ ಮೂಲಸೌಕರ್ಯ ಪಡೆಯುತ್ತಿದ್ದರೂ ತೆರಿಗೆ ಪಾವತಿಸುತ್ತಿಲ್ಲ' ಎಂದರು.

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ- 2020ರ ಕಲಂ 144(6) ಮತ್ತು (21)ರ ಅಂಶವನ್ನು ರಾಜ್ಯದ ಇತರೆ ನಗರಸ್ಥಳೀಯ ಸಂಸ್ಥೆಗಳಿಗೂ ವಿಸ್ತರಿಸಲು ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ -1976 ಮತ್ತು ಕರ್ನಾಟಕ ಪುರಸಭೆಗಳ ಕಾಯ್ದೆ -1964ರಲ್ಲಿ ಅಳವಡಿಸಿಕೊಳ್ಳಲಾಗುವುದು.

'ರಾಜ್ಯದ ಜನಸಂಖ್ಯೆಯ ಶೇ 40ಕ್ಕೂ ಹೆಚ್ಚು ಜನರು ನಗರ ಪ್ರದೇಶಗಳಲ್ಲಿ ಇದ್ದಾರೆ. ಎಲ್ಲ ವಸತಿ ಪ್ರದೇಶಗಳಿಗೂ ಮೂಲಸೌಕರ್ಯ ಕಲ್ಪಿಸುವುದು ನಗರ ಸ್ಥಳೀಯ ಸಂಸ್ಥೆಗಳಿಗೆ ಸವಾಲಾಗಿದೆ. ಆರ್ಥಿಕ ಬಲ ತುಂಬಲು ಅನಧಿಕೃತ ಕಟ್ಟಡಗಳಿಗೂ ತೆರಿಗೆ ನಿಗದಿಪಡಿಸುವುದು ಅನಿವಾರ್ಯವಾಗಿದೆ' ಎಂದರು.

ಸಮಿತಿಯ ಸದಸ್ಯರ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಕಾನೂನು, ನಕ್ಷೆ ಮಂಜೂರಾತಿ ಪ್ರಕ್ರಿಯೆ ಸರಳವಾಗಬೇಕು. ಅಕ್ರಮ ವನ್ನು ಆರ್‌ಟಿಸಿ ದಾಖಲೆಯಲ್ಲೇ ನಮೂದಿಸಬೇಕು. ಕಾವೇರಿ ತಂತ್ರಾಂಶದ ಜತೆ ಜೋಡಿಸಬೇಕು. ಆಗ ಅಕ್ರಮ ಆಸ್ತಿಗಳ ನೋಂದಣಿಗೆ ಕಡಿವಾಣ ಬೀಳುತ್ತದೆ' ಎಂದರು.

ಕಾನೂನು ಸಚಿವ ಎಚ್‌.ಕೆ. ಪಾಟೀಲ, 'ಸರ್ಕಾರಿ ಭೂಮಿ ಒತ್ತುವರಿ ಮಾಡುವ ಮಾಲೀಕರ ಖಾತೆಯಲ್ಲಿ ಸರ್ಕಾರಿ ಜಾಗ ಎಂದು ನಮೂದಾಗಬೇಕು. ಬಡವರು, ದಲಿತರು, ದುರ್ಬಲರ ಮನೆಗಳಿಗೆ ತೆರಿಗೆ ವಿಧಿಸುವಾಗ ಮಾನವೀಯತೆ ತೋರಬೇಕೆಂದು ಸಲಹೆ ನೀಡಲಾಗಿದೆ' ಎಂದರು.

'ಉಪ್ಪು ತಿಂದರೆ ನೀರು ಕುಡಿಯಲೇಬೇಕು'

ಚಿಕ್ಕಮಗಳೂರು: ಉಪಮುಖ್ಯ-ಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ತನಿಖೆ ಮುಂದುವರಿಸಲು ಸಿಬಿಐಗೆ ಹೈಕೋರ್ಟ್ ಸೂಚನೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ಬಿಜೆಪಿ ಮುಖಂಡ ಸಿ.ಟಿ.ರವಿ, 'ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು' ಎಂದಿದ್ದಾರೆ.

'ಹಾಲಿಂದು ಹಾಲಿಗೆ, ನೀರಿಂದು ನೀರಿಗೆ ಹೋಗಲೇಬೇಕು. ಗಾದೆ ಮಾತುಗಳು ಎಂದಿಗೂ ಸುಳ್ಳಾಗುವುದಿಲ್ಲ. ಅಕ್ರಮ ಎಸಗಿದ್ದರೆ ಇಂದಲ್ಲ, ನಾಳೆ ಬಯಲಿಗೆ ಬರಲೇಬೇಕು. ಸತ್ಯವನ್ನು ಕೆಲ ಕಾಲ ಮುಚ್ಚಿಡಬಹುದೆ ಹೊರತು, ಹೂತುಹಾಕಲು ಸಾಧ್ಯವಿಲ್ಲ. ಎಷ್ಟೇ ದೊಡ್ಡ ಅಧಿಕಾರದಲ್ಲಿ ಇದ್ದರೂ ಕಾನೂನಿಗಿಂತ ಯಾರು ದೊಡ್ಡವರಲ್ಲ' ಎಂದು ಸುದ್ದಿಗಾರರಿಗೆ ಹೇಳಿದರು.

'ಯಾರು ತಪ್ಪು ಮಾಡಿದ್ದಾರೆ ಎಂದು ಹೇಳುವ ಅಧಿಕಾರ ನನಗೆ ಇಲ್ಲ. ನ್ಯಾಯಾಲಯಕ್ಕೆ ಇದೆ. ತಪ್ಪು ಮಾಡಿರಬಹುದು ಎಂದಷ್ಟೇ ಹೇಳಬಹುದು' ಎಂದು ಸ್ಪಷ್ಟಪಡಿಸಿದರು.

ಜಾಮೀನು: ಅಭಿನವ ಹಾಲಶ್ರೀ ಹೈಕೋರ್ಟ್ ಮೊರೆ

ಬೆಂಗಳೂರು: ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಉದ್ಯಮಿಗೆ ವಂಚನೆ ಎಸಗಿದ ಆರೋಪ ಎದುರಿಸುತ್ತಿರುವ ವಿಜಯನಗರ ಜಿಲ್ಲೆ ಹಿರೇಹಡಗಲಿ ಹಾಲಸ್ವಾಮಿ ಮಠದ ಜಿ.ಎಂ. ಅಭಿನವಶ್ರೀ ಹಾಲವೀರಪ್ಪಜ್ಜ ಸ್ವಾಮೀಜಿ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತ ಅರ್ಜಿಯನ್ನು ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

'ಉಡುಪಿ ಜಿಲ್ಲೆಯ ಬೈಂದೂರು ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಂಬಿಸಿ ನನ್ನಿಂದ ₹ 5 ಕೋಟಿ ಪಡೆದು ವಂಚಿಸಿದ್ದಾರೆ' ಎಂದು ಆರೋಪಿಸಿ ಉದ್ಯಮಿ ಗೋವಿಂದಬಾಬು ಪೂಜಾರಿ ಪೊಲೀಸರಿಗೆ ದೂರು ನೀಡಿದ್ದರು.

ಈ ಪ್ರಕರಣದಲ್ಲಿ ₹ 1.50 ಕೋಟಿ ಪಡೆದ ಆರೋಪ ಎದುರಿಸುತ್ತಿರುವ ಸ್ವಾಮೀಜಿಯನ್ನು ಸೆಪ್ಟೆಂಬರ್ 19ರಂದು ಸಿಸಿಬಿ ಪೊಲೀಸರು ಒಡಿಶಾದ ಕಟಕ್‌ನಲ್ಲಿ ಬಂಧಿಸಿದ್ದರು. ಇತ್ತೀಚೆಗಷ್ಟೇ ಹಾಲಶ್ರೀ ಸ್ವಾಮೀಜಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿತ್ತು.

ಶುಕ್ರವಾರ, ಅಕ್ಟೋಬರ್ 20, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 291 | ಪುಟ 18

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
'ಇದು ಆ್ಯಕ್ಷನ್ ಪ್ರಿಯರ ಕಾಲ'
ಶಿವರಾಜ್‌ಕುಮಾರ್ ನಟನೆಯ 'ಘೋಸ್ಟ್' ಸಿನಿಮಾ ತೆರೆ ಕಂಡಿದ್ದು, ಚಿತ್ರದ ಕುರಿತ ಸಂದರ್ಶನ

ಆಳ-ಅಗಲ
ಸಲಿಂಗ ವಿವಾಹ: ಮಾನ್ಯತೆ ಬದಲು ಮಮತೆಯ ಹೊನಲು

'ನಕ್ಸಲ್‌ವಾದಕ್ಕೆ ಕಾಂಗ್ರೆಸ್ ಪ್ರೋತ್ಸಾಹ' 8

ಗಾಜಾ ಮೇಲೆ ಇಸ್ರೇಲ್ ಅವ್ಯಾಹತ ದಾಳಿ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,629 ▼	19,625 ▲	₹61,400 (ಬೆಂಗಳೂರು) ▲	₹73,200 (ಬೆಂಗಳೂರು) ▼	83.23 ▲

ಸಿಬಿಐ ತನಿಖೆ ಮುಂದುವರಿಕೆಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿರುವ ಹೈಕೋರ್ಟ್, ತನಿಖೆ ಮುಂದುವರಿಸಲು ಅನುಮತಿ ನೀಡಿದೆ.

ಎಫ್‌ಐಆರ್ ರದ್ದು ಕೋರಿ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿದೆ. ವಿಚಾರಣೆ ಹಂತದಲ್ಲಿ ಸಿಬಿಐ ತನಿಖೆಯ ಮುಂದುವರಿಕೆಗೆ ನೀಡಲಾಗಿದ್ದ ಮಧ್ಯಂತರ ತಡೆ ಆದೇಶವನ್ನು ತೆರವುಗೊಳಿಸಿದೆ.

4ನೇ ಪುಟ ನೋಡಿ

ಸೆನ್ಸೆಕ್ಸ್, ನಿಫ್ಟಿ ಇಳಿಕೆ 9

ಎಂಬಿಬಿಎಸ್, ಸ್ನಾತಕೋತ್ತರ ವೈದ್ಯಕೀಯ ಅಭ್ಯರ್ಥಿಗಳಿಗೆ ನಿಯಮ ಸಡಿಲಿಕೆ

ಗ್ರಾಮೀಣ ಸೇವೆ ಕಡ್ಡಾಯವಿಲ್ಲ



ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮವನ್ನು ರದ್ದು ಮಾಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಈ ಸಂಬಂಧ 'ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ಮಸೂದೆ -2023'ಕ್ಕೆ ಸಂಪುಟ ಒಪ್ಪಿಗೆ ನೀಡಿದ್ದು, ಇದನ್ನು ತುರ್ತಾಗಿ ಜಾರಿಗೊಳಿಸುವ ಉದ್ದೇಶದಿಂದ ಸುಗ್ರೀವಾಜ್ಞೆ ಹೊರಡಿಸಲು ತೀರ್ಮಾನಿಸಲಾಗಿದೆ. ವಿಧಾನ ಮಂಡಲದ ಅಧಿವೇಶನ ಡಿಸೆಂಬರ್‌ನಲ್ಲಿ ನಡೆಯಲಿದೆ. ಅದಕ್ಕೂ ಮೊದಲೇ ತಿದ್ದುಪಡಿ ಜಾರಿ ಮಾಡುವುದಕ್ಕಾಗಿ ಸುಗ್ರೀವಾಜ್ಞೆ ಹೊರಡಿಸಲು ನಿರ್ಧರಿಸಲಾಗಿದೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಈ ಕುರಿತು ಮಾಹಿತಿ ನೀಡಿದರು.

2012ರ ಕಾಯ್ದೆ ಮತ್ತು 2015ರ ನಿಯಮಗಳ ಅನ್ವಯ ಎಂಬಿಬಿಎಸ್ ಮತ್ತು ವೈದ್ಯಕೀಯ ಸ್ನಾತಕೋತ್ತರ ಅಭ್ಯರ್ಥಿಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುವುದು ಕಡ್ಡಾಯವಾಗಿತ್ತು ಎಂದರು.

4ನೇ ಪುಟ ನೋಡಿ

ಮುಖ್ಯಾಂಶಗಳು

- ಗ್ರಾಮೀಣ ಪ್ರದೇಶದಲ್ಲಿ ಮೆರಿಟ್ ಮತ್ತು ಕೌನ್ಸೆಲಿಂಗ್ ಆಧಾರದಲ್ಲೇ ನೇಮಕ
- ವೈದ್ಯರ ಕೊರತೆ ಇಲ್ಲ, ಈ ತೀರ್ಮಾನದಿಂದ ಸಮಸ್ಯೆ ಉದ್ಭವಿಸುವುದಿಲ್ಲ
- ತಕ್ಷಣವೇ ಜಾರಿ ಮಾಡಲು ಸುಗ್ರೀವಾಜ್ಞೆ ಹೊರಡಿಸುವ ಅನಿವಾರ್ಯತೆ

'ಅಕ್ಕಿ ಬದಲಿಗೆ ಹಣ ಮುಂದುವರಿಕೆ'

'ಬಿಪಿಎಲ್ ಕಾರ್ಡ್‌ದಾರರಿಗೆ 5 ಕೆ.ಜಿ ಅಕ್ಕಿ ಮತ್ತು ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಿಗೆ ಹಣ ನೀಡುವ ವ್ಯವಸ್ಥೆಯನ್ನೇ ಮುಂದುವರಿಸಲು ಸಂಪುಟ ಸಭೆ ತೀರ್ಮಾನಿಸಿದೆ' ಎಂದು ಎಚ್.ಕೆ. ಪಾಟೀಲ ತಿಳಿಸಿದರು.

'ಹೆಚ್ಚುವರಿಯಾಗಿ 5 ಕೆ.ಜಿ ಅಕ್ಕಿಯನ್ನು ಉಚಿತವಾಗಿ ನೀಡಲು 2.29 ಲಕ್ಷ ಟನ್ ಅಕ್ಕಿ ಅಗತ್ಯವಿದೆ. ಆದರೆ, ಆ ಪ್ರಮಾಣದ ಅಕ್ಕಿ ಸಿಗದ ಕಾರಣ ಅಂತ್ಯೋದಯ ಅನ್ನ ಯೋಜನೆ ಮತ್ತು ಬಿಪಿಎಲ್ ಕುಟುಂಬಗಳ ಫಲಾನುಭವಿಗಳಿಗೆ ಹಣ ನೀಡುವುದನ್ನು ಮುಂದುವರಿಸಲು ತೀರ್ಮಾನಿಸಲಾಗಿದೆ' ಎಂದರು.

ಬೆಳಗಾವಿ: ಡಿಸೆಂಬರ್‌ನಲ್ಲಿ ಅಧಿವೇಶನ

'ವಿಧಾನಮಂಡಲದ ಉಭಯ ಸದನಗಳ ಅಧಿವೇಶನ ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. 10 ದಿನ ನಡೆಯಲಿರುವ ಈ ಅಧಿವೇಶನದ ದಿನಾಂಕವನ್ನು ನಿರ್ಧರಿಸುವ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿದೆ' ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಜೆಡಿಎಸ್ ರಾಜ್ಯ ಸಮಿತಿ ವಿಸರ್ಜನೆ ಕುಮಾರಸ್ವಾಮಿ ಹಂಗಾಮಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಕಾರ್ಯಕಾರಿ ಸಮಿತಿಯನ್ನು ವಿಸರ್ಜಿಸಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಗುರುವಾರ ಆದೇಶ ಹೊರಡಿಸಿದ್ದಾರೆ. ಬಿಜೆಪಿ ಜತೆಗಿನ ಮೈತ್ರಿಗೆ ಆಕ್ಷೇಪ ವ್ಯಕ್ತಪಡಿಸಿ ಸಿ.ಎಂ. ಇಬ್ರಾಹಿಂ ಅವರು ಪ್ರತ್ಯೇಕ ಸಭೆ ನಡೆಸಿದ ಬೆನ್ನಲ್ಲೇ ಈ ಆದೇಶ ಹೊರಬಿದ್ದಿದೆ.

ಪಕ್ಷದ ಕಾರ್ಯ ಚಟುವಟಿಕೆಯ ನಿರ್ವಹಣೆಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ದೇವೇಗೌಡ, 'ಗುರುವಾರ ನಡೆದ ಪಕ್ಷದ ಉನ್ನತ ನಾಯಕರು, ಶಾಸಕರು, ಜಿಲ್ಲಾ ಘಟಕಗಳ ಅಧ್ಯಕ್ಷರ ಸಭೆಯಲ್ಲಿ ಜೆಡಿಎಸ್ ರಾಜ್ಯ ಕಾರ್ಯಕಾರಿ ಸಮಿತಿಯನ್ನು ವಿಸರ್ಜಿಸಲು ಒಮ್ಮತದ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದರು.

9ನೇ ಪುಟ ನೋಡಿ

ರಾಜ್ಯ ಘಟಕಕ್ಕೆ ನಾನೇ ಅಧ್ಯಕ್ಷ: ಇಬ್ರಾಹಿಂ

ಬೆಂಗಳೂರು: 'ಜೆಡಿಎಸ್ ರಾಜ್ಯ ಘಟಕಕ್ಕೆ ನಾನೇ ಅಧ್ಯಕ್ಷ. ನನ್ನನ್ನು ಕೆಳಗಿಳಿಸುವ ಅಧಿಕಾರ ಪಕ್ಷದ ಉನ್ನತ ನಾಯಕರ ಸಮಿತಿ ಅಥವಾ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಗೆ ಇಲ್ಲ. ಅವರ ನಿರ್ಧಾರವನ್ನು ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇನೆ. ಚುನಾವಣಾ ಆಯೋಗಕ್ಕೂ ದೂರು ಸಲ್ಲಿಸುತ್ತೇನೆ' ಎಂದು ಸಿ.ಎಂ. ಇಬ್ರಾಹಿಂ ಹೇಳಿದರು. ಪಕ್ಷದ ರಾಜ್ಯ ಘಟಕ ವಿಸರ್ಜನೆ ಕುರಿತು ಗುರುವಾರ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

9ನೇ ಪುಟ ನೋಡಿ

ಪ್ರಜಾವಾಣಿ ನವವರ್ಣ
7ಬಿ ಮತ್ತು 7ಡಿ ಪುಟಗಳನ್ನು ನೋಡಿ

ಒಳ ಪುಟ



ವಿರಾಟ್ ಶತಕ: ಭಾರತಕ್ಕೆ ಜಯ 11

ತಸ್ತೀಕ್: ₹12 ಸಾವಿರಕ್ಕೆ ಹೆಚ್ಚಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವಸ್ಥಾನಗಳಿಗೆ ಸರ್ಕಾರ ನೀಡುವ ತಸ್ತೀಕ್ ಮೊತ್ತವನ್ನು ₹12 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಕರ್ನಾಟಕ ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ ಆಗಮಿಕರ ಮತ್ತು ನೌಕರರ ಸಂಘ ಒತ್ತಾಯಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶ್ರೀವತ್ಸ, 'ರಾಜ್ಯದಲ್ಲಿ 35 ಸಾವಿರ ದೇವಸ್ಥಾನಗಳು ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿವೆ. ಇದರಲ್ಲಿ 34,500ಕ್ಕೂ ಹೆಚ್ಚು ಸಿ ವರ್ಗದ ದೇವಸ್ಥಾನಗಳು ಗ್ರಾಮೀಣ ಪ್ರದೇಶದಲ್ಲಿವೆ. ಈ ದೇವಾಲಯಗಳಿಗೆ ಸರ್ಕಾರ ಪೂಜಾ ಸಾಮಗ್ರಿಗಳ ಖರೀದಿಗೆ ಮಾತ್ರ ₹5 ಸಾವಿರ ತಸ್ತೀಕ್ ಮೊತ್ತ ನೀಡುತ್ತಿದೆ. ಇವರಿಗೆ ಯಾವುದೇ ಸೌಲಭ್ಯಗಳಿಲ್ಲ. ಆದ್ದರಿಂದ, ಇಲ್ಲಿನ ಅರ್ಚಕರಿಗೆ ಮಾಸಿಕ ₹10 ಸಾವಿರ ಗೌರವ ಧನ ನೀಡಬೇಕು' ಎಂದು ಆಗ್ರಹಿಸಿದರು.

'ಸಿ ವರ್ಗದ ಮುಜರಾಯಿ ದೇವಾಲಯಗಳಲ್ಲಿ ಪೂಜೆ ಮಾಡುವ 65 ವರ್ಷದ ದಾಟಿದ ಅರ್ಚಕರಿಗೆ ₹5 ಸಾವಿರ ಗೌರವ ಧನ ನೀಡಬೇಕು. ಅರ್ಚಕರಿಗೆ ಅನುಕೂಲವಾಗುವಂತೆ ದೇವಸ್ಥಾನದ ಆವರಣದಲ್ಲಿ ವಸತಿ ಗೃಹಗಳನ್ನು ನಿರ್ಮಿಸಲು ಅನುದಾನ ನೀಡಬೇಕು. ಶಿಥಿಲಾವಸ್ಥೆಯಲ್ಲಿರುವ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಬೇಕು. ಒತ್ತುವರಿ ಮಾಡಿರುವ ಜಮೀನು ತೆರವುಗೊಳಿಸಬೇಕು. ಪ್ರತಿ ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲಿ ಅರ್ಚಕರ ಭವನ ನಿರ್ಮಿಸಬೇಕು' ಎಂದು ಒತ್ತಾಯಿಸಿದರು.

'ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ರಾಜ್ಯ ಧಾರ್ಮಿಕ ಪರಿಷತ್ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್‌ಗಳಿಗೆ 7 ಆಗಮಗಳ ಅರ್ಹ ಸದಸ್ಯರನ್ನು ನೇಮಿಸಬೇಕು. ದೇವಸ್ಥಾನಗಳ ಸಿಬ್ಬಂದಿಗೆ ವಾರದಲ್ಲಿ ಒಂದು ದಿನ ರಜೆ ನೀಡಬೇಕು. ಜೊತೆಗೆ 6ನೇ ವೇತನ ಆಯೋಗ ಜಾರಿಗೊಳಿಸಬೇಕು' ಎಂದು ಅವರು ಹೇಳಿದರು.

ಸೋಂಪುರ: ಕಾಡು ಪ್ರಾಣಿಗಳ ಉಪಟಳ, ಭೀತಿಯಲ್ಲಿ ರೈತರು

ಹಳ್ಳಿಗಳತ್ತ ಚಿರತೆ, ಕರಡಿಗಳ ವಲಸೆ

• ಸಿ.ಜಿ.ಮೋಹನ್ ಕುಮಾರ್

ದಾಬಸ್‌ಪೇಟೆ: ಕಾಡು ಪ್ರಾಣಿಗಳ ಉಪಟಳದಿಂದ ಸೋಂಪುರ ಹೋಬಳಿಯ ಹಲವು ಗ್ರಾಮಗಳಲ್ಲಿ ರೈತರು ಭಯಬೀತರಾಗಿದ್ದಾರೆ.

ಚಿರತೆಗಳು ಆಗಾಗ ದಾಳಿ ಮಾಡಿ ಕುರಿ, ಮೇಕೆ, ಕರು, ಕೋಳಿ, ಸಾಕು ನಾಯಿಗಳನ್ನು ಹೊತ್ತೊಯ್ಯುತ್ತಿವೆ. ರಾತ್ರಿ ವೇಳೆ ಗ್ರಾಮಗಳಿಗೂ ನುಗ್ಗುತ್ತಿವೆ.

ರಾಮದೇವರ ಬೆಟ್ಟ, ಸಿದ್ದರಬೆಟ್ಟ, ಕೆಂಗಲ್ ಅರಣ್ಯ, ಶಿವಗಂಗೆ ಅರಣ್ಯಗಳ ಕಾಡಂಚಿನ ರೈತರು, ಕುರಿ, ಮೇಕೆ ಹಾಗೂ ದನಕರುಗಳನ್ನು ರಾತ್ರಿಯಾದರೆ ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಬಂದಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

ಆಹಾರಕ್ಕಾಗಿ ವಲಸೆ: ಮಳೆ ಕೊರತೆ, ಮನುಷ್ಯನ ದುರಾಸೆ, ಗಣಿಗಾರಿಕೆ, ಕಾಡುಗಳ ಒತ್ತುವರಿ... ಹೀಗೆ ನಾನಾ ಕಾರಣಗಳಿಂದ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ. ಅಲ್ಲಿ ಕಾಡು ಪ್ರಾಣಿಗಳಿಗೆ ಸಿಗಬೇಕಾದ ಆಹಾರ ದೊರೆಯದ ಕಾರಣ ಹೋಬಳಿಯ ಕಾಡಿನಲ್ಲಿರುವ ಚಿರತೆ, ಕರಡಿಯಂತಹ ಪ್ರಾಣಿಗಳು ಹಳ್ಳಿಗಳತ್ತ ವಲಸೆ ಬರುತ್ತಿವೆ. ಜಾನುವಾರು ಮೇಯಿಸಲು ಮೀಸಲಾಗಿದ್ದ ಗೋಮಾಳಗಳು ಕಣ್ಮರೆ ಆಗುತ್ತಿರುವುದರಿಂದ ರೈತರು ಮೇವಿಗಾಗಿ ಕಾಡನ್ನು ಅವಲಂಬಿಸಬೇಕಾಗಿದೆ. ಕಾಡಿಗೆ ಹೋದ ವೇಳೆ ಪ್ರಾಣಿಗಳು ಕುರಿ ಮೇಕೆ ಎಳೆದೊಯ್ಯುತ್ತಿವೆ ಎನ್ನುತ್ತಾರೆ ರೈತರು.

ಇತ್ತೀಚೆಗಷ್ಟೇ ಹೋಬಳಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕರಡಿಯೊಂದು ಓಡಾಡುತ್ತಾ, ಜನರಲ್ಲಿ ಭೀತಿ ಉಂಟು ಮಾಡಿತ್ತು. ನಂತರ ಅರಣ್ಯ ಇಲಾಖೆ ಸಿಬ್ಬಂದಿ ಕರಡಿಯನ್ನು ಹಿಡಿದಿದ್ದರು. ಕೆಲ ದಿನಗಳ ಹಿಂದೆ ರಾಮದೇವರ ಬೆಟ್ಟಕ್ಕೆ ಮೇಯಲು ಹೋಗಿದ್ದ ಎರಡು ಮೇಕೆಗಳನ್ನು ಚಿರತೆಯೊಂದು ಹೊತ್ತೊಯ್ದಿತ್ತು ಎಂಬ ಸುದ್ದಿಯೂ ಕೇಳಿಬಂದಿತ್ತು.

ಪ್ರಾಣಿ ಸಂಕುಲ: ಸೋಂಪುರ ಹೋಬಳಿ ದೊಡ್ಡಬಳ್ಳಾಪುರ, ತುಮಕೂರು ಹಾಗೂ ಮಾಗಡಿ ತಾಲ್ಲೂಕಿನ ಗಡಿಯ ಕಾಡು, ಬೆಟ್ಟ ಗುಡ್ಡಗಳಿಂದ ಆವೃತವಾಗಿದೆ. ಈ ಅರಣ್ಯಗಳಲ್ಲಿ ಕರಡಿ, ಚಿರತೆ, ನರಿ, ದೊಡ್ಡ ನಾಯಿ, ಗೋಸುಂಬೆ, ಕಾಡು ಬೆಕ್ಕು, ಕಾಡು ಪಾಪ ನವಿಲು, ಕೋಟಿ, ರಣಹದ್ದು ಹೆಬ್ಬಾವು ಇನ್ನಿತರ ಸಣ್ಣಪುಟ್ಟ ಪ್ರಾಣಿ ಪಕ್ಷಿಗಳು ವಾಸಿಸುತ್ತಿವೆ.

ಸೋಂಪುರದಲ್ಲಿ ರಾಷ್ಟ್ರೀಯ ಹೆದ್ದಾರಿ 48, 207, ರಾಜ್ಯ ಹೆದ್ದಾರಿ 3 ಹಾಗೂ ರೈಲ್ವೆ ಟ್ರಾಕ್ ಹಾದು ಹೋಗಿದೆ. ನಿರಂತರ ವಾಹನ ಓಡಾಟ ಪ್ರಾಣಿಗಳಿಗೆ ಕಿರಿಕಿರಿ ಉಂಟು ಮಾಡುತ್ತದೆ. ಇದು ಕೂಡ ಊರುಗಳತ್ತ ಪ್ರಾಣಿಗಳು ಬರಲು ಕಾರಣ ಎನ್ನುತ್ತಾರೆ ಅರಣ್ಯ ವೀಕ್ಷಕರು.



ಕಾಡು ಪ್ರಾಣಿಗಳ ಬಗ್ಗೆ ಜನರಿಗೆ ಅರಿವು ಮೂಡಿಸುತ್ತಿರುವ ಅಧಿಕಾರಿಗಳು

3 ಚಿರತೆ ಸೆರೆ

ಕಾಡಂಚಿನ ಗ್ರಾಮಗಳಿಗೆ ತೆರಳಿ ವನ್ಯ ಪ್ರಾಣಿಗಳ ದಾಳಿ, ಅವುಗಳಿಂದ ತಮ್ಮ ದನಕರು ಮೇಕೆ ಕುರಿಗಳನ್ನು ರಕ್ಷಣೆ ಮಾಡಿಕೊಳ್ಳುವುದರ ಬಗ್ಗೆ ಅರಿವು ಮೂಡಿಸುತ್ತಿದ್ದೇವೆ. ಸಾರ್ವಜನಿಕರಿಂದ ದೂರು ಬಂದರೆ ಬೋನ್ ಇಟ್ಟು ಅವುಗಳನ್ನು ಹಿಡಿದು ದೂರದ ಕಾಡಿಗೆ ಬಿಡಲಾಗುತ್ತಿದೆ. ಇತ್ತೀಚೆಗೆ ಮೂರು ಚಿರತೆಗಳನ್ನು ಹಿಡಿಯಲಾಗಿದೆ.

ಶ್ರೀಧರ್ ಎಸ್., ತಾಲ್ಲೂಕು ವಲಯ ಅರಣ್ಯಾಧಿಕಾರಿ, ನೆಲಮಂಗಲ

ಗೋಮಾಳ ಕಣ್ಮರೆ

ಈಗ ಗೋಮಾಳಗಳು ಕಣ್ಮರೆಯಾಗಿದ್ದು, ಅನಿವಾರ್ಯವಾಗಿ ರೈತರು ಮೇಕೆ, ಕುರಿ ದನಗಳನ್ನು ಮೇಯಿಸಲು ಅರಣ್ಯಕ್ಕೆ ಹೋಗಬೇಕಿದೆ.

ರುದ್ರೇಶ್ ಎಚ್.ಕೆ.
ಸಾಮಾಜಿಕ ಕಾರ್ಯಕರ್ತ

ಬಿಎಂಟಿಸಿ: ಮೆಟ್ರೊ ಫೀಡರ್ ಮಾರ್ಗ ಪ್ರಕಟ

ಬೆಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ಇದೇ 23ರಿಂದ ಕೆಲವು ಮಾರ್ಗಗಳಲ್ಲಿ ಮೆಟ್ರೊ ಫೀಡರ್ ಬಸ್ ಸೇವೆ ಆರಂಭವಾಗಲಿದ್ದು ಬಿಎಂಟಿಸಿ ಗುರುವಾರ ಬಸ್ ಸಂಚರಿಸುವ ಮಾರ್ಗಗಳನ್ನು ಪ್ರಕಟಿಸಿದೆ.

ಹೂಡಿ ಮೆಟ್ರೊ ನಿಲ್ದಾಣದಿಂದ ಹೂಡಿ, ಅಯ್ಯಪ್ಪನಗರ, ದೇವಸಂದ್ರ ಮಾರ್ಗವಾಗಿ ಬಸ್‌ಗಳು ಸಂಚರಿಸಲಿವೆ. ಜೆ.ಪಿ.ನಗರ ಮೆಟ್ರೊ ನಿಲ್ದಾಣದಿಂದ ಆರ್‌ವಿ ಡೆಂಟಲ್ ಕಾಲೇಜು, ಪುಟ್ಟೇನ ಹಳ್ಳಿ ಕ್ರಾಸ್, ಬ್ರಿಗೇಡ್ ಮಿಲೆನಿಯಂ ಮಾರ್ಗವಾಗಿ ಬಸ್ ಸಂಚರಿಸಲಿವೆ.

ಜಯನಗರ 9ನೇ ಹಂತದಿಂದ ರಾಗಿಗುಡ್ಡ, ರಾಘವೇಂದ್ರ ಸ್ವಾಮಿ ಮಠ, ಆರ್‌ವಿ ರಸ್ತೆ ಮೆಟ್ರೊ ನಿಲ್ದಾಣ, ಜಯನಗರ ಮೆಟ್ರೊ ನಿಲ್ದಾಣ, ಸಂಜಯ ಗಾಂಧಿ ಆಸ್ಪತ್ರೆ ಮಾರ್ಗವಾಗಿ ಬಸ್ ಸಂಚರಿಸಲಿವೆ. ಬನಶಂಕರಿಯಿಂದ ಜೆ.ಪಿ. ನಗರ 6ನೇ ಹಂತ, ಆರ್.ವಿ.ಡೆಂಟಲ್ ಕಾಲೇಜು, ಡೆಲ್ಮಿಯಾ, ಜೆ.ಪಿ.ನಗರ 3ನೇ ಹಂತ, ಮಹದೇಶ್ವರ ಬಡಾವಣೆಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಸಭೆ ನ. 2ರಂದು

ಬೆಂಗಳೂರು: 'ಎಚ್. ಕಾಂತರಾಜ ಆಯೋಗದ ವರದಿ ಮತ್ತು ಮೀಸಲಾತಿ ಪ್ರಮಾಣ ಹೆಚ್ಚಿಸುವ ಕುರಿತಂತೆ ಚರ್ಚಿಸಲು ರಾಜ್ಯ ಒಕ್ಕಲಿಗರ ಸಂಘದ ಆವರಣದಲ್ಲಿ ನ. 2ರಂದು ಒಕ್ಕಲಿಗರ ಸಂಘ ಮತ್ತು ಮೀಸಲಾತಿ ಹೋರಾಟ ಸಮಿತಿಯ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಯಲಚವಾಡಿ ತಿಳಿಸಿದ್ದಾರೆ.

'ಈ ವಿಚಾರವಾಗಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನಿಧ್ಯದಲ್ಲಿ ಚರ್ಚೆ ನಡೆಸಲಾಗಿದೆ. 2ರಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಸಭೆಗೆ ಸಮಾಜದ ಸಚಿವರು, ಶಾಸಕರು ಮತ್ತು ಸಂಸದರನ್ನು ಆಹ್ವಾನಿಸಲಾಗುವುದು. ಈ ಸಭೆಯ ಸಾನ್ನಿಧ್ಯವನ್ನು ನಿರ್ಮಲಾನಂದನಾಥ ಸ್ವಾಮೀಜಿ ವಹಿಸಲಿದ್ದಾರೆ. ನಂಜಾವದೂತ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ ಕೂಡಾ ಸಭೆಯಲ್ಲಿ ಭಾಗವಹಿಸಲಿದ್ದಾರೆ' ಎಂದೂ ಅವರು ಹೇಳಿದ್ದಾರೆ.

ಕರಕುಶಲ ವಸ್ತುಗಳ ಪ್ರದರ್ಶನ ಇಂದಿನಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ಇದೇ 20ರಿಂದ 29ರವರೆಗೆ 'ಗಾಂಧಿ ಶಿಲ್ಪ ಬಜಾರ್' ಕರಕುಶಲ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಕತ್ರಿಗುಪ್ಪೆಯ ನ್ಯೂ ವೆಂಕಟಾದ್ರಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ.

ಪ್ರಧಾನ ಮಂತ್ರಿ ಭಾರತೀಯ ಜನೌಷಧ ಕೇಂದ್ರ ಉದ್ಘಾಟನೆ

'ಕಡಿಮೆ ಬೆಲೆಗೆ ಗುಣಮಟ್ಟದ ಔಷಧ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಬಡ ಹಾಗೂ ಮಧ್ಯಮ ವರ್ಗದ ವರಿಗೆ ಕಡಿಮೆ ಬೆಲೆಯಲ್ಲಿ ಔಷಧ ಲಭ್ಯವಾಗಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಜನೌಷಧ ಕೇಂದ್ರಗಳನ್ನು ಪ್ರಾರಂಭಿಸಿದೆ. ಇದರ ಲಾಭವನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕು' ಎಂದು ಸಂಸದ ಡಿ.ವಿ. ಸದಾನಂದ ಗೌಡ ತಿಳಿಸಿದರು.

ಅಬ್ಬಿಗೆರೆಯ ಬಿಬಿಎಂಪಿ ಕಚೇರಿ ಎದುರು ನಿರ್ಮಾಣವಾಗಿರುವ ಪ್ರಧಾನ ಮಂತ್ರಿ ಭಾರತೀಯ ಜನೌಷಧ ಕೇಂದ್ರ ಉದ್ಘಾಟಿಸಿ, ಮಾತನಾಡಿದರು.

'ಈ ಕೇಂದ್ರಗಳಲ್ಲಿ ಅತಿ ಕಡಿಮೆ ಬೆಲೆಯಲ್ಲಿ ಅತ್ಯಂತ ಗುಣಮಟ್ಟದ ಔಷಧಗಳು ದೊರೆಯುತ್ತವೆ. ಬಡವರು ದುಬಾರಿ ಬೆಲೆಯ ಔಷಧ ಖರೀದಿಸಲು ಆಗುವುದಿಲ್ಲ ಎಂಬ ಕಾರಣದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಜನೌಷಧ ಕೇಂದ್ರಗಳನ್ನು ಪ್ರಾರಂಭಿಸಿದ್ದಾರೆ. ಜನೌಷಧ ಕೇಂದ್ರದಲ್ಲಿ ಹಾಗೂ ಇತರ ಔಷಧ ಅಂಗಡಿಗಳಲ್ಲಿ ದೊರೆಯುವ ಔಷಧಿಗಳು ಒಂದೇ ಆಗಿರುತ್ತವೆ. ಬೇರೆ ಬೇರೆ ಹೆಸರು ಹೊಂದಿರುತ್ತವೆ. ಆದ್ದರಿಂದ ಔಷಧ ಅಗತ್ಯ ಇರುವವರು ಈ ಕೇಂದ್ರದ ಲಾಭ ಪಡೆದುಕೊಳ್ಳಬೇಕು' ಎಂದು ಹೇಳಿದರು.



ಜನೌಷಧ ಕೇಂದ್ರವನ್ನು ಡಿ.ವಿ. ಸದಾನಂದ ಗೌಡ ಉದ್ಘಾಟಿಸಿದರು. ಎಸ್. ಮುನಿರಾಜು, ಬಿಜೆಪಿ ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಜನೌಷಧ ಕೇಂದ್ರದ ಮಾಲೀಕ ಶ್ರೀಶೈಲ ಕುಮಾರ್, ಬಿಜೆಪಿ ಮುಖಂಡ ಚಿಕ್ಕಬೈಲಪ್ಪ ಇದ್ದಾರೆ.

ಶಾಸಕ ಎಸ್. ಮುನಿರಾಜು, 'ಜನಸಾಮಾನ್ಯರ ಆರ್ಥಿಕ ಹೊರೆ ಕಡಿಮೆ ಮಾಡಲು ವೈದ್ಯರು ಆದಷ್ಟು ಜನೌಷಧಗಳನ್ನು ಬರೆದು ಕೊಡಬೇಕು.ಕಡಿಮೆ ದರಕ್ಕೆ ಹಾಗೂ ಗುಣಮಟ್ಟದ ಔಷಧ ದೊರೆಯುವ ಜನೌಷಧಿ ಕೇಂದ್ರಗಳನ್ನು ಜನರು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಸದಾನಂದ ಗೌಡ ಅವರು ತಿಳಿಸಿದರು.











ಎಂಜಿನಿಯರಿಂಗ್: ಪ್ರವೇಶ ವಿಸ್ತರಣೆ

ಬೆಂಗಳೂರು: ಪ್ರಸಕ್ತ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಅವಧಿಯನ್ನು ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಅ. 30ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಿಳಿಸಿದೆ.

ಸೀಟು ಹಂಚಿಕೆಯಾಗಿ ಶುಲ್ಕ ಪಾವತಿಸದ ವಿದ್ಯಾರ್ಥಿಗಳು ನೇರವಾಗಿ ಕಾಲೇಜುಗಳಿಗೆ ತೆರಳಿ ಶುಲ್ಕಪಾವತಿಸಿ ಪ್ರವೇಶ ಪಡೆಯಬಹುದು. ಸರ್ಕಾರಿ ಕೋಟಾದ ಸೀಟುಗಳಿಗೆ ನಿಗದಿಪಡಿಸಿದ್ದ-ಕ್ಕಿಂತ ಹೆಚ್ಚು ಶುಲ್ಕವನ್ನು ಕಾಲೇಜುಗಳು ಪಡೆಯುವಂತಿಲ್ಲ ಎಂದು ಪರೀಕ್ಷಾ ಪ್ರಾಧಿಕಾರ ಸೂಚಿಸಿದೆ.

₹8,347 ಕೋಟಿ ಮೌಲ್ಯದ ಏಳು ಒಪ್ಪಂದಗಳಿಗೆ ಸಹಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮುಂಬೈನಲ್ಲಿ ನಡೆದ ಜಾಗತಿಕ ಕಡಲ ಭಾರತೀಯ ಶೃಂಗ- 2023ರಲ್ಲಿ (ಜಿಎಂಐಎಸ್ 2023) ನವಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ) ಒಟ್ಟು ಏಳು ಒಪ್ಪಂದಗಳಿಗೆ ಸಹಿ ಹಾಕಿದ್ದು ಇವುಗಳ ಒಟ್ಟು ಮೌಲ್ಯ ₹8,347 ಕೋಟಿ.

'ಮಂಗಳವಾರ ಆರಂಭವಾಗಿದ್ದ ಈ ಶೃಂಗವು ಗುರುವಾರ ಸಂಪನ್ನವಾಗಿದ್ದು, 71 ದೇಶಗಳ ಪ್ರತಿನಿಧಿಗಳು, ವಿವಿಧ ಉದ್ಯಮ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಶೃಂಗದಲ್ಲಿ ಎನ್‌ಎಂಪಿಎ ₹8,347 ಕೋಟಿ ಮೌಲ್ಯದ ಏಳು ಒಪ್ಪಂದಗಳಿಗೆ ಸಹಿ ಹಾಕಿದೆ. ಈ ಒಪ್ಪಂದಗಳು ನವಮಂಗಳೂರು ಬಂದರು ವಿಸ್ತರಿಸಲು ಹಾಗೂ ಮೂಲಸೌಕರ್ಯ ಹೆಚ್ಚಿಸಿ ಅಭಿವೃದ್ಧಿಪಡಿಸಲು ನೆರವಾಗಲಿವೆ' ಎಂದು ಎನ್‌ಎಂಪಿಎ ತಿಳಿಸಿದೆ.

'ಉದ್ಯಮ ವಹಿವಾಟು ಪ್ರಗತಿಗಾಗಿ ಬಂದರು ಆಧಾರಿತ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಮಂಗಳೂರು ರಿಫೈನರಿ ಮತ್ತು ಪೆಟ್ರೋ ಕೆಮಿಕಲ್ಸ್ (ಎಂಆರ್‌ಪಿಎಲ್) ಕಂಪನಿಯ ಜೊತೆ ₹5 ಸಾವಿರ ಕೋಟಿ ಮೌಲ್ಯದ ಒಪ್ಪಂದಕ್ಕೆ ಶೃಂಗದ ಮೊದಲ ದಿನ ಎನ್‌ಎಂಪಿಎ ಸಹಿ ಹಾಕಿತು. ನಂತರ ಉಪ್ಪುನೀರಿನಿಂದ ಲವಣಾಂಶ ಹೊರತೆಗೆಯುವ ಘಟಕ ಸ್ಥಾಪನೆ ಸಂಬಂಧ ₹1500 ಕೋಟಿ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

'ಎಚ್‌ಪಿಸಿಎಲ್, ಐಒಸಿಎಲ್, ಕರ್ನಾಟಕ ಜಲಸಾರಿಗೆ ಮಂಡಳಿ, ಮತ್ತು ಸೀಲಾರ್ಡ್ ಕಂಟೈನರ್ಸ್ ಲಿಮಿಟೆಡ್ ಕಂಪನಿಗಳ ಜೊತೆ ನಾಲ್ಕು ಒಪ್ಪಂದಗಳಿಗೆ 2ನೇ ದಿನ ಸಹಿ ಹಾಕಲಾಗಿದೆ. ಕೊನೆಯ ದಿನ, ಸಂಗ್ರಹಾಗಾರ/ಫಾರಮ್ ಸ್ಥಾಪನೆ ಸಂಬಂಧ ಪಿಎಚ್‌ಪಿಸಿ ಜೊತೆ ₹47 ಕೋಟಿ ಮೌಲ್ಯದ ಒಪ್ಪಂದವಾಗಿದೆ' ಎಂದು ಎನ್‌ಎಂಪಿಎ ಪ್ರಕಟಣೆ ತಿಳಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಎನ್‌ಎಂಪಿಎ ಅಧ್ಯಕ್ಷ ಎ.ವಿ.ರಮಣ, 'ಜಿಎಂಐ ಶೃಂಗದ 2023ರ ಆವೃತ್ತಿಯಲ್ಲಿ ನಮ್ಮ ಬಂದರಿನ ಪಾತ್ರ ಚೇತೋಹಾರಿಯಾಗಿತ್ತು. ಜಲಸಾರಿಗೆ ಕ್ಷೇತ್ರದಲ್ಲಿ ದೇಶದ ಸಾಮರ್ಥ್ಯ ವೃದ್ಧಿಗೆ ಈ ಶೃಂಗದ ಯಶಸ್ಸೇ ಸಾಕ್ಷಿ. ಈ ಕ್ಷೇತ್ರಕ್ಕೆ ತನ್ನಿಂದಾದ ಕೊಡುಗೆ ನೀಡಲು ಎನ್‌ಎಂಪಿಎ ಸದಾ ಬದ್ಧ. ನಾವು ಮಾಡಿಕೊಂಡಿರುವ ಎಲ್ಲ ಒಪ್ಪಂದಗಳು ಬಂದರಿನ ಅಭಿವೃದ್ಧಿಗೆ ಪೂರಕವಾಗಿವೆ' ಎಂದು ತಿಳಿಸಿದ್ದಾರೆ.

ವಿದ್ಯೆ: ಸತ್ತ್ವಗುಣದ ಬೆಳಕು

● ಎಸ್. ಸೂರ್ಯಪ್ರಕಾಶ ಪಂಡಿತ್



ಇಂದು ಸರಸ್ವತಿ ಪೂಜೆ

ಸರಸ್ವತಿ ವಿದ್ಯಾಧಿದೇವತೆ; ನಮಗೆ ಬೇಕಾದ ಎಲ್ಲ ವಿಧದ ವಿದ್ಯೆಗಳನ್ನೂ ದಯಪಾಲಿಸುವವಳು. ಅವಳು 'ಕಾಮರೂಪಿಣಿ'; ತನಗೆ ಬೇಕಾದ ರೂಪವನ್ನು ಧರಿಸಬಲ್ಲವಳು ಎಂದರ್ಥ. ಎಂದರೆ, ವಿದ್ಯೆ ನಮಗೆ ಯಾವ ರೂಪದಲ್ಲಿಯೂ ಒದಗಬಹುದು. ಬರಿ ವಿದ್ಯೆಯನ್ನಷ್ಟೆ ಗಳಿಸಿದರೆ ಪ್ರಯೋಜನವಿಲ್ಲ; ಅದನ್ನು ಸರಿಯಾಗಿ ಬಳಸಲು ಬುದ್ಧಿಯೂ ಬೇಕು. ಇಂಥ ಬುದ್ಧಿಯನ್ನು ಕೊಡುವವಳೂ ಸರಸ್ವತಿಯೇ.

ನವರಾತ್ರಿಯ ಪರ್ವಕಾಲದಲ್ಲಿ ಜಗನ್ಮಾತೆಯನ್ನು ಮೂರು ರೂಪಗಳಲ್ಲಿ ಆರಾಧಿಸಲಾಗುತ್ತದೆ; ಇವು ಶಕ್ತಿಯ ಮೂರು ತತ್ತ್ವಗಳೇ ಹೌದು. ಲಕ್ಷ್ಮಿ, ಸರಸ್ವತಿ ಮತ್ತು ದುರ್ಗೆ – ಇವೇ ಆ ಶಕ್ತಿತತ್ತ್ವಗಳ ವಿಗ್ರಹರೂಪಗಳು. ನಮಗೆ ಬೇಕಾದ ಶಕ್ತಿಯ ಎಲ್ಲ ಆಯಾಮಗಳನ್ನೂ ಇವು ಪ್ರತಿನಿಧಿಸುತ್ತವೆ. ಲಕ್ಷ್ಮಿ ನಮಗೆ ಬೇಕಾದ ಹೊರಗಿನ, ಎಂದರೆ ವಸ್ತುರೂಪದ ಶಕ್ತಿಗೆ ಸಂಕೇತ. ಸರಸ್ವತಿಯು ನಮಗೆ ಬೇಕಾದ ಒಳಗಿನ, ಎಂದರೆ ಬೌದ್ಧಿಕ ಸ್ವರೂಪದ ಶಕ್ತಿಗೆ ಸಂಕೇತ. ದುರ್ಗೆಯು ನಮಗೆ ಬೇಕಾದ ದೈಹಿಕ ಶಕ್ತಿಗೆ ಸಂಕೇತ.

ನಮ್ಮ ನಡೆ-ನುಡಿ, ಕಲೆ-ಸಾಹಿತ್ಯ, ಸಿದ್ಧಿ-ಬುದ್ಧಿ – ಇವೆಲ್ಲವೂ ಸರಸ್ವತಿಯ ಅಧೀನ. ಈ ಎಲ್ಲ ವಿವರಗಳನ್ನೂ 'ವಾಕ್‌ತತ್ತ್ವ' ಒಂದರಲ್ಲಿಯೇ ಒಂದಾಗಿಸಿ ಒಕ್ಕಣಿಸಲಾಗಿದೆ. ವಾಕ್, ಎಂದರೆ ಮಾತಿಲ್ಲದೆ ಜಗತ್ತಿನ ವ್ಯಾಪಾರವೇ ನಡೆಯದು. ಆದುದರಿಂದಲೇ ಯಾವುದೇ ವಿದ್ಯೆಯ ಆರಂಭದಲ್ಲಿ ಸರಸ್ವತಿಯನ್ನು ಪ್ರಾರ್ಥಿಸಿಕೊಳ್ಳುವುದು.

ಪರಂಪರೆಯಲ್ಲಿ ಸರಸ್ವತಿಯನ್ನು ಬಿಳಿಯ ಬಣ್ಣದವಳು ಎಂದು ಸ್ತುತಿಸಲಾಗಿದೆ. ಬಿಳಿಯ ಬಣ್ಣವು ಸತ್ತ್ವಗುಣಕ್ಕೆ ಸಂಕೇತ. ಶುಭ್ರತೆ, ಸ್ವಚ್ಛತೆ, ಪಾವಿತ್ರ್ಯ, ದೋಷರಹಿತ ಗುಣಗಳನ್ನು ಇದು ಎತ್ತಿಹಿಡಿಯುತ್ತದೆ. ವಿದ್ಯೆ ನಮಗೆ ಕೊಡಬೇಕಾದ ಹಾಗೂ ಕೊಡುವ ಸಂಸ್ಕಾರದ ಸ್ವರೂಪವನ್ನು ಇದು ಹೇಳುತ್ತಿದೆ. ವಿದ್ಯೆ ನಮಗೆ ವಿವೇಕವನ್ನು ಕೊಡಬೇಕು; ಅದೇ ಸ್ವಚ್ಛತೆ. ಅದೇ ರಾಗ ಮತ್ತು ದ್ವೇಷಗಳಿಂದ ಮುಕ್ತವಾದ ತಿಳಿವಳಿಕೆ; ಅದೇ ವಿವೇಕ. ಇಂಥ ವಿವೇಕವನ್ನು ದಕ್ಕಿಸಿಕೊಂಡವನು ಸ್ವಾರ್ಥದಿಂದಲೂ ಕ್ರೋಧದಿಂದಲೂ ನಡೆದುಕೊಳ್ಳಲಾರ; ಧರ್ಮ-ಅಧರ್ಮ, ಒಳಿತು-ಕೆಡಕು, ಬೆಳಕು-ಕತ್ತಲೆ, ವಿದ್ಯೆ-ಅವಿದ್ಯೆಗಳ ವ್ಯತ್ಯಾಸ ಅವನಿಗೆ ಸ್ಪಷ್ಟವಾಗಿರುತ್ತದೆ. ಹೀಗಾಗಿ ಅವನ ನಡೆವಳಿಕೆಯಲ್ಲಿ ಉದ್ವೇಗವೂ ಇರದು, ಉನ್ಮಾದವೂ ಇರದು; ಸಮಾಧಾನವೇ ಅವನ ಸ್ಥಾಯಿಭಾವ ಆಗಿರುತ್ತದೆ.

ಇಂದು ನಾವು ಹಲವು 'ವಿದ್ಯೆ'ಗಳನ್ನು ಸಂಪಾದಿಸುತ್ತಿದ್ದೇವೆ. ಆದರೆ ನೆಮ್ಮದಿಯನ್ನು ಮಾತ್ರ ಕಾಣುತ್ತಿಲ್ಲ. ಇಡಿಯ ಜಗತ್ತು ರಾಗ-ದ್ವೇಷಗಳಲ್ಲಿ ಮುಳುಗಿದೆ; ಎಲ್ಲೆಲ್ಲೂ ಅಶಾಂತಿ. ಇದಕ್ಕೆ ಕಾರಣವೇ ಅವಿದ್ಯೆ. ನಾವು ವಿದ್ಯೆಯ ದಿಟವಾದ ಅರ್ಥದಿಂದ ದೂರ ಸರಿದಿದ್ದೇವೆ. ಹೀಗಾಗಿ ನಾವು ಸಂಪಾದಿಸುತ್ತಿರುವ ವಿದ್ಯೆಯು ಸತ್ತ್ವಗುಣಪ್ರಧಾನ-ವಾಗಿಲ್ಲ; ರಜಸ್ಸು-ತಮಸ್ಸುಗಳೇ ಪ್ರಧಾನವಾಗುತ್ತಿವೆ. ವಿದ್ಯೆ ಎಂದರೆ ಕೇವಲ ಬಹಿರಂಗದ ವಿವರಗಳ ಮಾಹಿತಿ ಮಾತ್ರವೇ ಅಲ್ಲ; ಅಂತರಂಗದ ದ್ರವ್ಯದ ಸಂಪಾದನೆ ಕೂಡ. ಸರಸ್ವತಿಯು ಲೌಕಿಕ-ಅಲೌಕಿಕ – ಎರಡೂ ವಿದ್ಯೆಗಳಿಗೂ ಒಡತಿ. ನಾವಿಂದು ಲೌಕಿಕದಲ್ಲಿಯೇ ಮುಳುಗಿ, ನಮ್ಮ ಅಲೌಕಿಕ ಸ್ವರೂಪವನ್ನು ಮರೆಯುತ್ತಿದ್ದೇವೆ. ಹೀಗಾಗಿಯೇ ಪರಸ್ಪರ ಭೇದ, ವೈರ, ಕ್ರೌರ್ಯ. ಸರಸ್ವತಿಯ ಆರಾಧನೆ ಎಂದರೆ ಅಂತರಂಗ-ಬಹಿರಂಗದ ಸಾಮರಸ್ಯ. ಈ ಸಾಮರಸ್ಯದಿಂದಲೇ ಒಳಗೂ ಹೊರಗೂ ಸೌಹಾರ್ದವನ್ನು ಸಾಧಿಸಲಾದೀತು.

ಇಂದಿರಾ ಕ್ಯಾಂಟೀನ್‌ನಲ್ಲೂ ಕಮಿಷನ್!

ಬಿಲ್ ಪಾವತಿಗೆ ಅಧಿಕಾರಿಗಳಿಂದ ಲಂಚದ ಬೇಡಿಕೆ: ಗುತ್ತಿಗೆದಾರನ ಆರೋಪ

ಪ್ರಜಾವಾಣಿ ವಾರ್ತೆ

ಹಾವೇರಿ: ಮೈಸೂರು ದಸರಾ ಕಾರ್ಯ-ಕ್ರಮದಲ್ಲಿ 'ಕಮಿಷನ್' ಆರೋಪ ಕೇಳಿಬಂದ ಬೆನ್ನಲ್ಲೇ, ಜಿಲ್ಲೆಯ ಇಂದಿರಾ ಕ್ಯಾಂಟೀನ್‌ಗಳ ಬಿಲ್ ಪಾವತಿಗೆ ಅಧಿಕಾರಿಗಳು ಲಂಚದ ಬೇಡಿಕೆ ಇಟ್ಟಿರುವ ಗಂಭೀರ ಆರೋಪ ಕೇಳಿಬಂದಿದೆ.

'ಹಾವೇರಿ, ರಾಣೆಬೆನ್ನೂರು, ಹಿರೇ-ಕೆರೂರಿನಲ್ಲಿನ ಮೂರು ಇಂದಿರಾ ಕ್ಯಾಂಟೀನ್‌ಗಳಿಗೆ ಸಂಬಂಧಿಸಿದ ₹30 ಲಕ್ಷ ಬಿಲ್ ಪಾವತಿಗೆ ಅಧಿಕಾರಿಗಳು ಸತಾಯಿಸುತ್ತಿದ್ದಾರೆ. ಏಳೆಂಟು ತಿಂಗಳ ಬಿಲ್ ಪಾವತಿಯಾಗದ ಕಾರಣ ಇಂದಿರಾ ಕ್ಯಾಂಟೀನ್ ನಡೆಸಲು ತೊಂದರೆಯಾಗಿದೆ. ಹಳೆ ಬಾಕಿ ಪಾವತಿಸಿ, ಟೆಂಡರ್ ರದ್ದುಪಡಿಸ-ಬೇಕು ಎಂದು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದೇನೆ' ಎಂದು ಗುತ್ತಿಗೆದಾರ-ರಾದ ಯಾದಗಿರಿ ಜಿಲ್ಲೆ ಶಹಾಪುರದ ನಿರ್ಮಲಾದೇವಿ ಮಹಿಳಾ ಮಂಡಳದ ಕಾರ್ಯದರ್ಶಿ ವಿಶ್ವನಾಥ ರೆಡ್ಡಿ ಆರೋಪಿಸಿದರು.

'ಹಿರೇಕೆರೂರು ಪಟ್ಟಣ ಪಂಚಾಯಿತಿಯಲ್ಲೂ ಅಧಿಕಾರಿಯೊಬ್ಬರು ಇಂದಿರಾ ಕ್ಯಾಂಟೀನ್ ಬಿಲ್ ಪಾವತಿಗೆ ₹80 ಸಾವಿರ ಬೇಡಿಕೆ ಇಟ್ಟಿದ್ದರು. ₹40 ಸಾವಿರ ಕೊಡಲು ಹೋಗಿದ್ದ ನನ್ನ ಆಪ್ತರ ಮುಖಕ್ಕೆ ಹಣವನ್ನು ಬಿಸಾಡಿ, ಜೋರು ಮಾಡಿ ಕಳುಹಿಸಿದ್ದರು. ಹಾವೇರಿ ನಗರಸಭೆ ಅಧಿಕಾರಿಗಳೂ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ನಾನು ಕೊಟ್ಟಿರಲಿಲ್ಲ. ಅದಕ್ಕೆ ನನಗೆ ಬರಬೇಕಾದ ಹಣ ಬಿಡುಗಡೆ ಮಾಡಿಲ್ಲ' ಎಂದು ವಿಶ್ವನಾಥ ರೆಡ್ಡಿ ದೂರಿದರು.

ಒಂದು ವರ್ಷದ ಟೆಂಡರ್: 'ಜಿಲ್ಲೆಯ ಮೂರು ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಯನ್ನು ಗುತ್ತಿಗೆದಾರ ವಿಶ್ವನಾಥ ರೆಡ್ಡಿ ಅವರಿಗೆ 2022ರ ಆಗಸ್ಟ್‌ನಲ್ಲಿ ವಹಿಸಲಾಗಿತ್ತು. 2023ರ ಆಗಸ್ಟ್‌ಗೆ ಒಂದು ವರ್ಷದ ಟೆಂಡರ್ ಮುಕ್ತಾಯಗೊಂಡಿದೆ. ಇಂದಿರಾ ಕ್ಯಾಂಟೀನ್‌ನಲ್ಲಿ 'ಫುಡ್ ಮೆನು' ಬದಲಾದ ಕಾರಣ, ಸರ್ಕಾರದ ನಿರ್ದೇಶನದ ಮೇರೆಗೆ ಹಾಲಿ ಇರುವ ಗುತ್ತಿಗೆದಾರರನ್ನೇ ತಾತ್ಕಾಲಿಕವಾಗಿ ಮುಂದುವರಿಸಲಾಗಿತ್ತು. ಈ ವಾರದಲ್ಲಿ ಹೊಸ ಟೆಂಡರ್ ಪ್ರಕ್ರಿಯೆ ಆರಂಭಗೊಳ್ಳಲಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದುಬಾರಿ ಬಿಲ್: 'ಹಾವೇರಿಯ ಇಂದಿರಾ ಕ್ಯಾಂಟೀನ್ ಆರಂಭಗೊಂಡು ಮೂರು-ನಾಲ್ಕು ತಿಂಗಳಾದರೂ ಗುತ್ತಿಗೆದಾರ ಬಿಲ್ ಸಲ್ಲಿಸಿರಲಿಲ್ಲ. 2023ರ ಮಾರ್ಚ್‌ನಲ್ಲಿ ನೋಟಿಸ್ ಕೊಟ್ಟಿದ್ದೆವು. ನಂತರ ಏಪ್ರಿಲ್‌ನಲ್ಲಿ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಿಗೆ ಸಂಬಂಧಿಸಿದ ₹3.19 ಲಕ್ಷ ಮೊತ್ತದ ದುಬಾರಿ ಬಿಲ್ ಅನ್ನು ಹಾವೇರಿ ನಗರಸಭೆಗೆ ಸಲ್ಲಿಸಿದ್ದರು. ಬಿಲ್ ಜೊತೆ ಟೋಕನ್ ರಿಜಿಸ್ಟರ್ ಸಲ್ಲಿಸಿರಲಿಲ್ಲ. ಅವರು ಕೊಟ್ಟ ಬಿಲ್‌ಗೂ ಟೋಕನ್ ರಿಜಿಸ್ಟರ್‌ಗೂ ಹೊಂದಾಣಿಕೆಯಾಗುತ್ತಿರಲಿಲ್ಲ' ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ದಾಖಲೆ ಕೊಟ್ಟರೆ ಕ್ರಮ: ಜಿಲ್ಲಾಧಿಕಾರಿ



ರಘುನಂದನ ಮೂರ್ತಿ

'ಇಂದಿರಾ ಕ್ಯಾಂಟೀನ್ ಬಿಲ್ ಪಾವತಿಯಲ್ಲಿ ಕಮಿಷನ್ ಆರೋಪ ಕೇಳಿ ಬಂದಿರುವುದರಿಂದ ನಗರಸಭೆ, ಪುರಸಭೆ, ಜಿಲ್ಲಾ ನಗರಾಭಿವೃದ್ಧಿ ಕೋಶದ ಅಧಿಕಾರಿಗಳು, ಗುತ್ತಿಗೆದಾರನೊಂದಿಗೆ ಅ. 20ರಂದು ಸಭೆ ನಡೆಸುವೆ. ಎಲ್ಲ ದಾಖಲೆ ಪರಿಶೀಲಿಸುವೆ. ಅಧಿಕಾರಿಗಳು ಕಮಿಷನ್ ಕೇಳಿರುವ ಬಗ್ಗೆ ಗುತ್ತಿಗೆದಾರ ದಾಖಲೆ ನೀಡಿದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ. ಆರೋಪ ಸುಳ್ಳಾದರೆ ಗುತ್ತಿಗೆದಾರ ಕ್ಷಮೆ ಕೇಳಬೇಕು' ಎಂದು ಜಿಲ್ಲಾಧಿಕಾರಿ ರಘುನಂದನ ಮೂರ್ತಿ ತಿಳಿಸಿದ್ದಾರೆ.

ಬಾಕಿ ₹30 ಲಕ್ಷ ಹಣ ಕೊಟ್ಟರೆ, ನಮ್ಮ ಸಿಬ್ಬಂದಿಯ ಆರೇಳು ತಿಂಗಳ ಪಗಾರವನ್ನು ಕೊಟ್ಟು, ಇಂದಿರಾ ಕ್ಯಾಂಟೀನ್ ನಿರ್ವಹಣೆ ಕೈಬಿಡುವೆ

ವಿಶ್ವನಾಥ ರೆಡ್ಡಿ ದರ್ಶನಾಪುರ
ಇಂದಿರಾ ಕ್ಯಾಂಟೀನ್ ಗುತ್ತಿಗೆದಾರ

ಒಂದೇ ಸಲ 7 ತಿಂಗಳ ಬಿಲ್: ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಮಮತಾ ಮಾತನಾಡಿ, 'ಗುತ್ತಿಗೆದಾರ ಪ್ರತಿ ತಿಂಗಳು ಬಿಲ್ ಸಲ್ಲಿಸದೇ ಆರೇಳು ತಿಂಗಳ ಬಿಲ್ ಅನ್ನು ಒಂದೇ ಸಲ ಸಲ್ಲಿಸಿದ್ದಾರೆ. ಇಂದಿರಾ ಕ್ಯಾಂಟೀನ್‌ನಲ್ಲಿ ಊಟ ಮಾಡಿದವರ ಸಂಖ್ಯೆಗೂ, ಬಿಲ್‌ನಲ್ಲಿ ತೋರಿಸಿದ ಲೆಕ್ಕಕ್ಕೂ ತುಂಬಾ ವ್ಯತ್ಯಾಸವಿದೆ. ಸರ್ಕಾರದ ಹಣ ದುರುಪಯೋಗವಾಗಬಾರದು ಎಂಬ ಕಾರಣದಿಂದ ನೈಜ ಬಿಲ್ ಸಲ್ಲಿಸಿದ ನಂತರ ಹಣ ಪಾವತಿ ಮಾಡುತ್ತೇವೆ ಎಂದು ತಿಳಿಸಿದ್ದೆವು' ಎಂದರು.

'ಕ್ಯಾಂಟೀನ್ ಮೇಲ್ವಿಚಾರಣೆಗೆ ನಗರಸಭೆ ಅಧಿಕಾರಿಗಳು ಹೋಗಿದ್ದಕ್ಕೆ, ಗುತ್ತಿಗೆದಾರರು ಆಕ್ಷೇಪಿಸಿದ್ದರು. ಬಿಲ್ ಸಲ್ಲಿಸದಿದ್ದಕ್ಕೆ ಮತ್ತು ಬಿಲ್‌ನಲ್ಲಿ ವ್ಯತ್ಯಾಸ ಕಂಡು ಬಂದಿದ್ದಕ್ಕೆ ಮೂರು-ನಾಲ್ಕು ಬಾರಿ ನೋಟಿಸ್ ಕೊಟ್ಟಿದ್ದೇವೆ. ನೋಟಿಸ್‌ಗೆ ಉತ್ತರ ಕೊಡದೆ ಕಮಿಷನ್ ಆರೋಪ ಮಾಡಿದ್ದಾರೆ' ಎಂದರು.

ಗ್ರಾಮೀಣ ಸೇವೆ ಕಡ್ಡಾಯವಿಲ್ಲ

ಒಂದನೇ ಪುಟದಿಂದ

ಕಾಯ್ದೆಗೆ ತಿದ್ದುಪಡಿಯಿಂದಾಗಿ ಇನ್ನು ಮುಂದೆ ಆಸ್ಪತ್ರೆಗಳಲ್ಲಿ ಖಾಲಿ ಹುದ್ದೆಗಳಿಗೆ ಮಿತಿಗೊಳಿಸಿ ಅಭ್ಯರ್ಥಿಗಳು ಸರ್ಕಾರಿ ಸೇವೆಗೆ ಹೆಸರು ನೋಂದಾಯಿಸಬಹುದು ಎಂದು ಹೇಳಿದರು.

'2023-24ನೇ ಸಾಲಿನಲ್ಲಿ 3,251 ಎಂಬಿಬಿಎಸ್ ಅಭ್ಯರ್ಥಿಗಳು ಸರ್ಕಾರಿ ಸೇವೆಗೆ ಹೆಸರು ನೋಂದಾಯಿಸಿದ್ದಾರೆ. ಆದರೆ, 1,897 ಹುದ್ದೆಗಳು ಮಾತ್ರ ಖಾಲಿ ಇವೆ. ಎಲ್ಲರಿಗೂ ಅವಕಾಶ ಕಲ್ಪಿಸಲು 1,354 ಹೆಚ್ಚುವರಿ ಹುದ್ದೆಗಳನ್ನು ಸೃಜಿಸಬೇಕಾಗುತ್ತದೆ. ಇದರಿಂದ ₹ 101.82 ಕೋಟಿ ಹೆಚ್ಚುವರಿ ವೆಚ್ಚವಾಗುತ್ತದೆ. ಅಲ್ಲದೆ, 2023-24 ರ ಸಾಲಿನಲ್ಲಿ 3,515 ವೈದ್ಯಕೀಯ ಸ್ನಾತಕೋತ್ತರ ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದಾರೆ. ಆದರೆ, ಕೇವಲ 1,270 ಹುದ್ದೆಗಳು ಖಾಲಿ ಇವೆ. ಹೆಚ್ಚುವರಿ 2,245 ಹುದ್ದೆ ಸೃಜಿಸಲು ₹ 188.58 ಕೋಟಿ ಹೆಚ್ಚುವರಿ ವೆಚ್ಚವಾಗುತ್ತದೆ' ಎಂದು ಹೇಳಿದರು.

ಖಾಲಿ ಹುದ್ದೆಗಳ ಭರ್ತಿ: 'ರಾಜ್ಯದಲ್ಲಿ ಸದ್ಯ ಎಲ್ಲೂ ಕೊರತೆ ಇಲ್ಲ. ಗ್ರಾಮೀಣ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಎರಡು ತಿಂಗಳಲ್ಲಿ ಭರ್ತಿ ಮಾಡಲಾಗುವುದು. ಅಗತ್ಯವಿದ್ದಷ್ಟೇ ವೈದ್ಯರನ್ನು ನೇಮಕ ಮಾಡುತ್ತೇವೆ' ಎಂದು ತಿಳಿಸಿದರು.


ಸಿಬಿಐ ತನಿಖೆ ಮುಂದುವರಿಕೆಗೆ ಹೈಕೋರ್ಟ್ ಅಸ್ತು

ಒಂದನೇ ಪುಟದಿಂದ

'ಈ ತೀರ್ಪು ಸ್ವೀಕರಿಸಿದ ಮೂರು ತಿಂಗಳ ಒಳಗೆ ಸಿಬಿಐ ವಿಚಾರಣಾ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಬೇಕು. ತನಿಖಾಧಿಕಾರಿ ದೋಷಾರೋಪ ಪಟ್ಟಿ ಸಲ್ಲಿಸಿದರೆ ಆರೋಪ ಮುಕ್ತಿ ಕೋರಿ ಅಥವಾ ಆರೋಪ ಪಟ್ಟಿಯನ್ನು ವಜಾಗೊಳಿಸುವಂತೆ ಕೋರುವ ಸ್ವಾತಂತ್ರ್ಯ ಡಿ.ಕೆ.ಶಿವಕುಮಾರ್ ಅವರಿಗೆ ಇರಲಿದೆ' ಎಂದು ನ್ಯಾಯಪೀಠ ಹೇಳಿದೆ.

'ಅರ್ಜಿದಾರರು ಈಗಾಗಲೇ ತನಿಖಾಧಿಕಾರಿ ಮುಂದೆ ವಿಚಾರಣೆಗೆ ಹಾಜರಾಗಿ ಸಾಕಷ್ಟು ವಿವರಣೆ ನೀಡಿರುವುದಾಗಿ ತಿಳಿಸಿದ್ದಾರೆ. ಈ ಕುರಿತ ಸಂಪುಟಗಟ್ಟಲೆ ದಾಖಲೆಗಳೆಲ್ಲಾ ತನಿಖಾಧಿಕಾರಿಯ ಪರಿಶೀಲನೆಯಲ್ಲಿವೆ. ಸಿಬಿಐ ತನ್ನ ತನಿಖೆಯನ್ನು ಬಹುತೇಕ ಸಮಾಪ್ತಿಯ ಹಂತಕ್ಕೆ ತಂದು ನಿಲ್ಲಿಸಿದೆ. ಹೀಗಾಗಿ, ಅರ್ಜಿದಾರರು ಎಫ್‌ಐಆರ್ ರದ್ದುಪಡಿ-ಸುವಂತೆ ಕೋರುವಲ್ಲಿ ವಿಳಂಬವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ತನಿಖೆಯ ಈ ಹಂತದಲ್ಲಿ, ನ್ಯಾಯಾಲಯ ಎಫ್‌ಐಆರ್ ರದ್ದು ಕೋರಿದ ಮನವಿಯನ್ನು ಪುರಸ್ಕರಿಸಲು ಆಗದು. ಅಂತಿಮ ವರದಿ ಸಲ್ಲಿಸುವ ಮೊದಲೇ ಇಂತಹ ಮನವಿಯನ್ನು ಮಾನ್ಯ ಮಾಡಿದರೆ ಅದು ಮತ್ತೊಂದು ಮಿನಿ ವಿಚಾರಣೆಯೇ ಆಗಿಬಿಡುತ್ತದೆ. ಒಂದು ವೇಳೆ ಸಿಬಿಐ ತನಿಖೆ ವಿಳಂಬವಾಗು-ತ್ತಿದೆ ಎನ್ನಿಸಿದರೆ ಅರ್ಜಿದಾರರು ಅದಕ್ಕೆ ಕಾಲಮಿತಿ ಕೋರಿಕೆ ಸಲ್ಲಿಸಬಹುದು' ಎಂದು ತಿಳಿಸಿದೆ.



ಪ್ರೊ.ಎಂ.ಎಲ್. ಸಾಮಗ



ಬಿ.ಕೆ.ಸುಮತಿ ರಾವ್

ಪ್ರೊ.ಸಾಮಗ, ಸುಮತಿ ರಾವ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ: ಚಿಟ್ಟಾಣಿ ಅಭಿಮಾನಿ ಬಳಗದ ವತಿಯಿಂದ ಕೊಡಮಾಡುವ ಚಿಟ್ಟಾಣಿ ರಾಮಚಂದ್ರ ಹೆಗಡೆ ಪ್ರಶಸ್ತಿಗೆ ಹಿರಿಯ ಹವ್ಯಾಸಿ ಕಲಾವಿದರಾದ ಪ್ರೊ. ಎಂ.ಎಲ್.ಸಾಮಗ ಹಾಗೂ ಟಿ.ವಿ.ರಾವ್ ಪ್ರಶಸ್ತಿಗೆ ಕಲಾವಿದೆ ಬಿ.ಕೆ.ಸುಮತಿ ರಾವ್ ಆಯ್ಕೆಯಾಗಿದ್ದಾರೆ.

ನ.5ರಿಂದ 11ರವರೆಗೆ ನಡೆಯುವ ಚಿಟ್ಟಾಣಿ ಸಂಸ್ಮರಣ ಯಕ್ಷಗಾನ ಸಪ್ತಾಹದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಎರಡೂ ಪ್ರಶಸ್ತಿ ತಲಾ ₹10 ಸಾವಿರ ನಗದು ಒಳಗೊಂಡಿವೆ ಎಂದು ಚಿಟ್ಟಾಣಿ ಅಭಿಮಾನಿ ಬಳಗದ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ, ಕಾರ್ಯದರ್ಶಿ ಎಂ.ಗೋಪಿಕೃಷ್ಣ ರಾವ್ ತಿಳಿಸಿದ್ದಾರೆ.


ಶಿವರಾಜ್‌ಕುಮಾರ್

‘ಇದು ಆ್ಯಕ್ಷನ್ ಪ್ರಿಯರ ಕಾಲ’

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ನಟ ಶಿವರಾಜ್‌ಕುಮಾರ್, ಅನುಪಮ್ ಖೇರ್, ಜಯರಾಮ್ ಮೊದಲಾದ ದೊಡ್ಡ ತಾರೆಯರ ದಂಡನ್ನೇ ಹೊಂದಿರುವ ‘ಘೋಸ್ಟ್’ ಸಿನಿಮಾ ಅಕ್ಟೋಬರ್ 19ರಂದು ತೆರೆ ಕಂಡಿದೆ. ಈ ಸಂದರ್ಭದಲ್ಲಿ ಶಿವರಾಜ್‌ಕುಮಾರ್ ಮಾತಿಗೆ ಸಿಕ್ಕರು.

ವಿನಾಯಕ ಕೆ.ಎಸ್.

- **ಘೋಸ್ಟ್ ಸಿನಿಮಾದಲ್ಲಿ ಮತ್ತೆ ‘ಓಂ’ ಚಿತ್ರದ ಸತ್ಯನಾಗಿ ಕಾಣಿಸಿಕೊಳ್ಳುತ್ತಿದ್ದೀರಾ?**

‘ಓಂ’ ನಡೆಯುವ ಕಾಲದ ಅವಧಿಯ ಲುಕ್ ಬೇಕಾಗಿತ್ತು. ಹೀಗಾಗಿ ಚಿತ್ರದ ಒಂದು ಶೇಡ್‌ನಲ್ಲಿ ಆ ರೀತಿ ಕಾಣಿಸಿಕೊಂಡಿದ್ದೇನೆ. ಎಲ್ಲರೂ ಅದನ್ನು ಗ್ರಾಫಿಕ್ಸ್ ಎಂದು ಭಾವಿಸುತ್ತಾರೆ. ಆದರೆ ‘ಡಿ–ಏಜಿಂಗ್’ ತಂತ್ರಜ್ಞಾನ ಬಳಸಿ ಅದನ್ನು ಚಿತ್ರೀಕರಿಸಿದ್ದು. ಕಣ್ಣುಗಳು ಈಗಿನದ್ದು. ಮುಖಕ್ಕೆ ಮಾಸ್ಕ್ ಹಾಕಿ ಯುವಕನಂತೆ ತೋರಿಸುವ ತಂತ್ರಜ್ಞಾನವಿದು. ಹೀಗೆ ಮಾಡುವಾಗ ಮೊದಲಿಗೆ ನನಗೂ ಸ್ವಲ್ಪ ಭಯವಾಯ್ತು. ಯುವಕನಾಗಿ ಕಾಣುತ್ತಿದ್ದು, ಕಥೆಗೆ ಇದರ ಅಗತ್ಯವಿತ್ತು.

- **ನೀವು ಚಿತ್ರದಲ್ಲಿ ‘ಘೋಸ್ಟ್’ ಆಗಿರುತ್ತೀರಾ?**

ಹೌದು, ಇದು ಭಯಪಡಿಸುವ ಪಾತ್ರ. ಚಿತ್ರದ ಟ್ರೇಲರ್‌ನಲ್ಲಿ ನೋಡಿದರೆ ಜೈಲು ಹೈಜಾಕ್ ಆಗಿರುತ್ತದೆ. ಅದನ್ನು ಮಾಡಿದ್ದು ಯಾರು ಎಂಬ ಚರ್ಚೆ ಆಗುತ್ತದೆ. ನಾವೇ ನೋಡಿದ ವ್ಯಕ್ತಿ 10–15 ವರ್ಷಗಳ ನಂತರ ಕಾಣಿಸಿಕೊಂಡರೆ ‘ಘೋಸ್ಟ್’ ಆಗಿ ಬಂದಿರಬಹುದೆಂದು ಭಯಪಡುತ್ತೇವೆ. ಅದೇ ರೀತಿಯ ಪಾತ್ರ. ಜೀವನದಲ್ಲಿ ಭಯ, ಭಕ್ತಿ ಇದ್ದರೆ ಮುಂದುವರಿಯಬಹುದು ಎಂಬ ನಂಬಿಕೆ ಇದೆ. ಭಯಪಡಿಸಿ ವ್ಯವಸ್ಥೆಯನ್ನು ಸರಿಪಡಿಸಬಹುದೆಂಬ ನಂಬಿಕೆಯಲ್ಲಿರುವ ಪಾತ್ರ. 2 ಗಂಟೆ 10 ನಿಮಿಷದ ಸಿನಿಮಾ. ಬೇರೆ ರೀತಿಯ ಕಥೆಯ ನಿರೂಪಣೆ ಇದೆ. ಜನ ಹೇಗೆ ಸ್ವೀಕರಿಸುತ್ತಾರೆ ನೋಡಬೇಕು.

- **‘ಜೈಲರ್’ ನಂತರ ಬೇರೆ ಭಾಷೆಗಳ ಆಫರ್ ಹೆಚ್ಚಾಗಿದೆಯಾ?**

ಮಾತೃಭಾಷೆಗೆ ಮೊದಲ ಆದ್ಯತೆ. ಅವಕಾಶಗಳನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ತಮಿಳಿನ ‘ಕ್ಯಾಪ್ಟನ್ ಮಿಲ್ಲರ್’ ಚಿತ್ರೀಕರಣ ಮುಗಿದಿದೆ. ತೆಲುಗಿನ ‘ಕಣ್ಣಪ್ಪ’ದಲ್ಲಿ ನಟಿಸುತ್ತಿರುವೆ. ಎರಡು ತಮಿಳು ಸಿನಿಮಾಗಳಿಗೆ ಸದ್ಯದಲ್ಲೇ ಸಹಿ ಹಾಕುವೆ. ಮಲಯಾಳದಲ್ಲಿ ಒಂದು ಸಿನಿಮಾ ಮಾತುಕತೆ ನಡೆದಿದೆ. ಬಾಲಿವುಡ್‌ನಿಂದ ಆಫರ್ ಬಂದಿರುವುದು ನಿಜ. ಅದನ್ನು ಒಪ್ಪಿಕೊಳ್ಳುತ್ತಿದ್ದೇನೆ. ಅರ್ಜುನ್ ಜನ್ಯ ನಿರ್ದೇಶನದ ‘45’ ಚಿತ್ರೀಕರಣ ನಡೆಯುತ್ತಿದೆ. ‘ಭೈರತಿ ರಣಗಲ್’ ಚಿತ್ರೀಕರಣ ಪ್ರಗತಿಯಲ್ಲಿದೆ.

- **ಎಲ್ಲ ನಿರ್ದೇಶಕರು ಶಿವಣ್ಣನ ಹತ್ತಿರ ಲಾಂಗು, ಮಚ್ಚು ಹಿಡಿಸಲು ಇಷ್ಟಪಡುತ್ತಾರೆ ಎಂದು ಹಿಂದೊಮ್ಮೆ ಹೇಳಿದ್ರಿ?**

ಆ್ಯಕ್ಷನ್ ಸಿನಿಮಾಗಳು ಹೆಚ್ಚಾಗುತ್ತಿವೆ. ಆ್ಯಕ್ಷನ್ ಸಿನಿಮಾಪ್ರಿಯರ ಸಂಖ್ಯೆ ಹೆಚ್ಚುತ್ತಿರುವುದು ಇದಕ್ಕೆ ಕಾರಣ. ಎಲ್ಲರೂ ಅದೇ ರೀತಿಯ ಕಥೆ ತೆಗೆದುಕೊಂಡು ಬರುತ್ತಾರೆ. ‘45’ ಸಿನಿಮಾದಲ್ಲಿ ಅಚ್ಚರಿಯ ಬದಲಾವಣೆಯನ್ನು ನೋಡಬಹುದು. ಬೇರೆ ರೀತಿಯದೇ ಪಾತ್ರ. ಖಂಡಿತ ಜನ ಅದನ್ನು ಶ್ಲಾಘಿಸುತ್ತಾರೆಂಬ ನಂಬಿಕೆ ಇದೆ.

- **ಯಾಕೆ ಮಾಸ್ ಸಿನಿಮಾಗಳನ್ನೇ ಹೆಚ್ಚು ಆಯ್ಕೆ ಮಾಡಿಕೊಳ್ಳುವಿರಿ?**

ಸಾಕಷ್ಟು ಕಾದಂಬರಿ ಆಧಾರಿತ, ಪ್ರೇಮ ಕಥೆಗಳ ಸಿನಿಮಾಗಳನ್ನೂ ಮಾಡಿರುವೆ. ‘ಅಣ್ಣತಂಗಿ’, ‘ರಿಷಿ’, ‘ಚಿಗುರಿದ ಕನಸು’, ‘ಮಿಡಿದ ಶೃತಿ’ಯಂತಹ ಸಾಕಷ್ಟು ಭಾವಾನಾತ್ಮಕ, ಕಲಾತ್ಮಕ ಸಿನಿಮಾಗಳು ನನ್ನ ಸಿನಿಪಯಣದಲ್ಲಿವೆ. ಪೊಲೀಸ್ ಇನ್‌ಸ್ಪೆಕ್ಟರ್ ಆಗಿಯೂ ಸಾಕಷ್ಟು ಸಿನಿಮಾ ಮಾಡಿರುವೆ. ಹಾಗೆ ನೋಡಿದರೆ ಮಾಸ್ ಸಿನಿಮಾಗಳೇ ಕಡಿಮೆ. ಇತ್ತೀಚಿನ ದಿನಗಳಲ್ಲಿ ಆ್ಯಕ್ಷನ್ ಸಿನಿಮಾಗಳ ಸಂಖ್ಯೆ ಹೆಚ್ಚಾಗಿದೆ.

- **ಈ ವಯಸ್ಸಿನಲ್ಲಿಯೂ ಆ ರೀತಿಯ ಸಾಹಸಗಳನ್ನು ಮಾಡಲು ಹೇಗೆ ಸಾಧ್ಯ?**

ಹುಡುಗರು ಹುರಿದುಂಬಿಸಿ, ಓಲೈಸಿ ಈ ರೀತಿ ಸಾಹಸಗಳನ್ನು ಮಾಡಿಸಿಬಿಡುತ್ತಾರೆ. ಆ ಕ್ಷಣಕ್ಕೆ ಸೆಟ್‌ನಲ್ಲಿ ಇವೆಲ್ಲ ಆಗಿಬಿಡುತ್ತವೆ. ದಿನ 8–10 ಕಿಲೋಮೀಟರ್ ವಾಕ್ ಮಾಡುತ್ತೇನೆ. ಒಂದೂವರೆ ಗಂಟೆ ವ್ಯಾಯಾಮ ಮಾಡುತ್ತೇನೆ. ಹೀಗಾಗಿ ಫಿಟ್‌ನೆಸ್ ಒಂದು ಮಟ್ಟಕ್ಕೆ ಇದೆ.

- **ಮಗಳು ನಿವೇದಿತಾ ನಿರ್ಮಾಣದ ಸಿನಿಮಾದಲ್ಲಿ ನಟಿಸುತ್ತೀರಾ?**

ಸದ್ಯಕ್ಕೆ ನನ್ನನ್ನು ಕರೆದಿಲ್ಲ. ನಮ್ಮ ನಿರ್ಮಾಣ ಸಂಸ್ಥೆ ಮತ್ತು ಮಗಳ ನಿರ್ಮಾಣ ಸಂಸ್ಥೆಯಿಂದ ಕಂಟೆಂಟ್ ಆಧಾರಿತ ನಮ್ಮದೇ ಮತ್ತು ಹೊರಗಿನವರ ಸಿನಿಮಾಗಳನ್ನು ಮಾಡುವ ಆಲೋಚನೆ ಇದೆ. ಮುಂದಿನ ದಿನಗಳಲ್ಲಿ ಆ ನಿಟ್ಟಿನಲ್ಲಿ ಕೆಲಸಗಳು ನಡೆಯಲಿವೆ.

- **ನೀವು ಕುಟುಂಬ ಸಮೇತರಾಗಿ ಇತ್ತೀಚೆಗೆ ಇಷ್ಟಪಟ್ಟ ಸಿನಿಮಾ ಯಾವುದು?**

ಈ ನಡುವೆ ಫ್ಯಾಮಿಲಿ ಜೊತೆ ಸಿನಿಮಾ ನೋಡಲು ಸಮಯ ಸಿಗುತ್ತಿಲ್ಲ. ‘ಗದರ್–2’ ನೋಡಿದೆ. ಚೆನ್ನಾಗಿದೆ. ಒಳ್ಳೆ ಮನರಂಜನೆ ಇದೆ, ಇಷ್ಟವಾಯ್ತು. ❖


ಮಿಲನ ನಾಗರಾಜ್

ದಸರಾದಲ್ಲಿ ‘ಫಾರ್ ರಿಜಿಸ್ಟ್ರೇಷನ್’

ಪೃಥ್ವಿ ಅಂಬರ್ ಹಾಗೂ ಮಿಲನ ನಾಗರಾಜ್ ಜೊತೆಯಾಗಿ ನಟಿಸಿರುವ ‘ಫಾರ್ ರಿಜಿಸ್ಟ್ರೇಷನ್’ ಚಿತ್ರದ ‘ಲವ್‌ಗಳ್ ಸುಮಧುರ ಹಾರ್ಟ್‌ಗಳ್ ಗಿರಗಿರ’ ಎಂಬ ಹಾಡು ಮೈಸೂರು ದಸರಾ ವೇದಿಕೆಯಲ್ಲಿ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನವೀನ್ ದ್ವಾರಕಾನಾಥ್ ನಿರ್ದೇಶನದ ಚಿತ್ರಕ್ಕೆ ನವೀನ್ ರಾವ್ ಬಂಡವಾಳ ಹೂಡಿದ್ದಾರೆ. ‘ಚಿತ್ರದಲ್ಲಿ 6 ಹಾಡುಗಳಿದ್ದು, ದಸರಾಗಾಗಿ ಒಂದು ವಿಶೇಷ ಹಾಡನ್ನು ಬಿಡುಗಡೆ ಮಾಡಿದ್ದೇವೆ. ಸಿನಿಮಾ ಸೆನ್ಸಾರ್ ಹಂತದಲ್ಲಿದೆ. ನಟ ಪೃಥ್ವಿ ಅಂಬರ್ ವಿದೇಶ ಪ್ರವಾಸದಲ್ಲಿದ್ದು, ಮರಳಿ ಬಂದ ನಂತರ ಬಿಡುಗಡೆ ದಿನಾಂಕ ಘೋಷಿಸುತ್ತೇವೆ. ಈ ವರ್ಷವೇ ಸಿನಿಮಾ ತೆರೆಗೆ ಬರಲಿದೆ’ ಎಂದರು ನಿರ್ದೇಶಕ ನವೀನ್ ದ್ವಾರಕಾನಾಥ್. ನಾಗಾರ್ಜುನ ಶರ್ಮ ಈ ಹಾಡನ್ನು ಬರೆದಿದ್ದು, ಆರ್.ಕೆ.ಹರೀಶ್ ಸಂಗೀತ ನೀಡಿದ್ದಾರೆ. ಅಭಿಷೇಕ್ ಕಲ್ಲತ್ತಿ- ಅಭಿಷೇಕ್ ಕಾಸರಗೋಡು ಛಾಯಾಗ್ರಹಣ ಹಾಗೂ ಮನು ಶೆಡ್ಗಾರ್ ಅವರ ಸಂಕಲನ ಚಿತ್ರಕ್ಕಿದೆ. ರವಿಶಂಕರ್, ಬಾಬು ಹಿರಣ್ಣಯ್ಯ, ಸ್ವಾತಿ, ಸುಧಾ ಬೆಳವಾಡಿ, ತಬಲನಾಣಿ, ರಮೇಶ್ ಭಟ್, ಸಿಹಿಕಹಿ ಚಂದ್ರು ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

‘ಗ್ರಾಮಾಯಣ’ದಲ್ಲಿ ಲೂಸ್ ಮಾದ


ವಿನಯ್ ರಾಜ್‌ಕುಮಾರ್

ವಿನಯ್ ರಾಜ್‌ಕುಮಾರ್–ಮೇಘಾ ಶೆಟ್ಟಿ ಅಭಿನಯದ ‘ಗ್ರಾಮಾಯಣ’ದ ಚಿತ್ರೀಕರಣ ಭರದಿಂದ ಸಾಗಿದ್ದು, ಲೂಸ್ ಮಾದ ಯೋಗಿ ಚಿತ್ರತಂಡ ಸೇರಿಕೊಂಡಿದ್ದಾರೆ. ದೇವನೂರು ಚಂದ್ರು ಆ್ಯಕ್ಷನ್ ಕಟ್ ಹೇಳಿದ್ದ ಈ ಸಿನಿಮಾಕ್ಕೆ ನಿರ್ಮಾಪಕ ಕೆ.ಪಿ. ಶ್ರೀಕಾಂತ್, ಲಹರಿ ಫಿಲ್ಮ್ಸ್ ಮನೋಹರ್ ನಾಯ್ಡು ಜೊತೆಗೂಡಿ ಬಂಡವಾಳ ಹೂಡಿದ್ದಾರೆ. ‘ಯೋಗಿ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸದ್ಯ ಕಡೂರು ಬಳಿಯ ದೇವನೂರಿನಲ್ಲಿ ಚಿತ್ರೀಕರಣ ನಡೆಯುತ್ತಿದೆ. ಈಗಾಗಲೇ ಶೇ. 25ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಮೊದಲ ಹಂತದಲ್ಲಿ ಗ್ರಾಮೀಣ ಪರಿಸರದ ದೃಶ್ಯಗಳನ್ನು ಸೆರೆಹಿಡಿದಿದ್ದೇವೆ. ಮುಂದಿನ ದಿನಗಳಲ್ಲಿ ಕೋಲಾರ, ಕನಕಪುರ, ಗಾಜನೂರಿನಲ್ಲಿ ಚಿತ್ರೀಕರಿಸುವ ಯೋಜನೆಯಿದೆ. ಈ ವರ್ಷದ ಅಂತ್ಯದೊಳಗೆ ಚಿತ್ರ ಪೂರ್ತಿಗೊಳ್ಳಲಿದೆ’ ಎಂದು ನಿರ್ಮಾಪಕ ಕೆ.ಪಿ. ಶ್ರೀಕಾಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

ನಟ, ನಿರ್ದೇಶಕ ಬಿ.ಎಂ.ಗಿರಿರಾಜ್, ಗೋಪಾಲಕೃಷ್ಣ ದೇಶಪಾಂಡೆ, ಅಚ್ಯುತ್ ಕುಮಾರ್, ಅಪರ್ಣಾ ಮೊದಲಾದವರು ತಾರಾಗಣದಲ್ಲಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ, ಯಶಸ್ವಿನಿ, ವಿಶ್ವಜಿತ್ ರಾವ್ ಛಾಯಾಗ್ರಹಣ, ದೀಪು ಅವರ ಸಂಕಲನ ಚಿತ್ರಕ್ಕಿದೆ. ❖

‘ಟಗರು ಪಲ್ಯ’ಕ್ಕೆ ದರ್ಶನ್ ಬೆಂಬಲ

ಡಾಲಿ ಧನಂಜಯ ನಿರ್ಮಿಸಿ, ನಟ ನಾಗಭೂಷಣ್ ನಾಯಕನಾಗಿರುವ ‘ಟಗರು ಪಲ್ಯ’ ಚಿತ್ರ ಇದೇ ತಿಂಗಳ 27ಕ್ಕೆ ತೆರೆಗೆ ಬರುತ್ತಿದೆ. ಚಾಲೆಂಜಿಂಗ್ ಸ್ಟಾರ್ ದರ್ಶನ್ ಚಿತ್ರದ ಟ್ರೇಲರ್ ಅನ್ನು ಇತ್ತೀಚೆಗಷ್ಟೇ ಬಿಡುಗಡೆ ಮಾಡಿದರು. ನೆನಪಿರಲಿ ಪ್ರೇಮ್ ಪುತ್ರಿ ಅಮೃತ ಪ್ರೇಮ್ ನಾಯಕಿಯಾಗಿ ಸ್ಯಾಂಡಲ್‌ವುಡ್‌ಗೆ ಪ್ರವೇಶಿಸಿದ್ದಾರೆ.

‘ಟ್ರೇಲರ್ ನೋಡಿದಾಗ ಖುಷಿಯಾಯಿತು. 7 ಸ್ಟಾರ್ ಸುಲ್ತಾನ್ ಟಗರು ಚೆನ್ನಾಗಿ ನಟಿಸಿದೆ. ಅಮೃತಾ ಅವರಿಗೆ ಸ್ವಾಗತ. ಇದು ನಮ್ಮಮಣ್ಣಿನ ಸೊಗಡಿನ ಸಿನಿಮಾ. ಟ್ರೇಲರ್‌ನಿಂದ ಸಿನಿಮಾ ಏನು ಎಂಬುದನ್ನು ಹೇಳಬಹುದು. ಸಿನಿಮಾ ಚೆನ್ನಾಗಿ ಆಗಲಿ. ಹೀರೋಗಳು ಏನು ಮಾಡುತ್ತಿದ್ದಾರಯ್ಯ ಎಂದು ತುಂಬಾ ಜನ ಕೇಳುತ್ತಾರೆ. ನಾವು ಸಿನಿಮಾ ನಿರ್ಮಾಣ ಮಾಡುತ್ತಿದ್ದೇವೆ. ಈ ಸಾಲಿನಲ್ಲಿ ಡಾಲಿ ಅವರು ಮೊದಲು ನಿಲ್ಲುತ್ತಾರೆ. ಇದು ಧನಂಜಯ ನಿರ್ಮಾಣದ ಮೂರನೇ ಸಿನಿಮಾ. ಆತ ಕಷ್ಟಪಟ್ಟು ಮೇಲೆ ಬಂದಿದ್ದಾನೆ. ಬಡವರ ಮಕ್ಕಳು ದೊಡ್ಡವರಾಗಬೇಕು. ಡಾಲಿ ಪಿಕ್ಚರ್ಸ್ ದೊಡ್ಡ ಪ್ರೊಡಕ್ಷನ್ ಆಗಿ ಬೆಳೆಯಲಿ’ ಎಂದು ದರ್ಶನ್ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಶೀರ್ಷಿಕೆಯಿಂದಲೇ ಗಮನ ಸೆಳೆದ ಚಿತ್ರ ‘ಟಗರು ಪಲ್ಯ’. ಉಮೇಶ್ ಕೆ. ಕೃಪ ಆ್ಯಕ್ಷನ್, ಕಟ್ ಹೇಳಿದ್ದಾರೆ. ರಂಗಾಯಣ ರಘು, ತಾರಾ, ಶರತ್ ಲೋಹಿತಾಶ್ವ ಸೇರಿ ದೊಡ್ಡ ತಾರಾ ಬಳಗವೇ ಜೊತೆಯಾಗಿದೆ. ಚಿತ್ರಕ್ಕೆ ವಾಸುಕಿ ವೈಭವ್ ಸಂಗೀತ ನಿರ್ದೇಶನ ನೀಡಿದ್ದು, ಎಸ್. ಕೆ. ರಾವ್ ಛಾಯಾಗ್ರಹಣವಿದೆ.

ಡಾಲಿ ಧನಂಜಯ ಮಾತನಾಡಿ, “ಎಲ್ಲಾ ಸಂಬಂಧಗಳನ್ನು ನೆನಪಿಸುವ ಸಿನಿಮಾವೇ ‘ಟಗರು ಪಲ್ಯ’. ನಿರ್ದೇಶಕರು ಕಥೆ ಹೇಳಿದಾಗ ತುಂಬಾ ಇಷ್ಟವಾಯಿತು. ಒಳ್ಳೆ ಪ್ರತಿಭೆಗಳಿಗೆ ಬಂಡವಾಳ ಹಾಕಲು ಖುಷಿ ಇದೆ. ಅವರವರ ಪ್ರತಿಭೆಗಳು ಅವರನ್ನ ಮೇಲೆ ಕರೆದುಕೊಂಡು ಬರುತ್ತಿದೆ. ನಾಗಭೂಷಣ್ ಯಾವುದೇ ಪಾತ್ರ ಕೊಟ್ಟರು ತೂಗಿಸಿಕೊಂಡು ಹೋಗುವ ನಟ. ‘ಟಗರು ಪಲ್ಯ’ದಲ್ಲಿ ನೀವು ಬೇರೆ ನಾಗಭೂಷಣ್ ನೋಡಬಹುದು” ಎಂದರು. ❖




ನೆನಪಿರಲಿ ಪ್ರೇಮ್, ದರ್ಶನ್, ಡಾಲಿ ಧನಂಜಯ

‘ಸತ್ಯಂ ಶಿವಂ’ ಎಂದ ಯತಿರಾಜ್

ಪತ್ರಕರ್ತ ಹಾಗೂ ನಟ ಯತಿರಾಜ್ ನಿರ್ದೇಶನದ ‘ಸತ್ಯಂ ಶಿವಂ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ಸತ್ಯಂ ಶಿವಂ’ ಎಂದರೆ ಎರಡು ಪಾತ್ರಗಳ ಹೆಸರಲ್ಲ. ನಮ್ಮೊಳಗಿರುವ ಕೆಟ್ಟದ್ದನ್ನು ಹೊರಗೆ ಹಾಕಿ, ನಿಶ್ಕಲ್ಮಶವಾದಾಗ ಸತ್ಯದ ದರ್ಶನವಾಗಿ ಶಿವನ ಅನುಭೂತಿಯಾಗುತ್ತದೆ ಎಂಬುದು ಕಥೆಯ ಸಾರಾಂಶ. ಸಸ್ಪೆನ್ಸ್, ಥ್ರಿಲ್ಲರ್, ಸೆಂಟಿಮೆಂಟ್ ಎಲ್ಲವೂ ಇರುವ ಚಿತ್ರ. ನಿರ್ಮಾಪಕರೂ ಆಗಿರುವ ಬುಲೆಟ್ ರಾಜು ಈ ಚಿತ್ರದ ನಾಯಕನಾಗಿ ನಟಿಸಿದ್ದಾರೆ. ನಾನು ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದೇನೆ’ ಎಂದರು ನಿರ್ದೇಶಕರು.

‘ಬಿಗ್‌ಬಾಸ್ ಕನ್ನಡ ಸೀಸನ್ 10ರಲ್ಲಿ ಸ್ಪರ್ಧಿಯಾಗಿರುವ ತುಕಾಲಿ ಸಂತೋಷ್ ಬಗ್ಗೆ ಹಲವರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ನಮ್ಮ ಈ ಸಿನಿಮಾದಲ್ಲಿಯೂ ಮೊದಲಿಗೆ ಅವರು ನಟಿಸಿದ್ದರು. ಆದರೆ ಚಿತ್ರೀಕರಣಕ್ಕೆ ಬಹಳ ತೊಂದರೆ ಉಂಟುಮಾಡಿದರು. ಹೀಗಾಗಿ ಅವರನ್ನು ಚಿತ್ರದಿಂದ ಹೊರಗಿಡಲಾಯಿತು’ ಎಂದು ಯತಿರಾಜ್ ಬೇಸರ ತೋಡಿಕೊಂಡರು. ಚಿತ್ರಕ್ಕೆ ವಿ.ಮನೋಹರ್ ಸಂಗೀತ, ವಿದ್ಯಾ ನಾಗೇಶ್ ಛಾಯಾಗ್ರಹಣವಿದೆ. ಸಂಜನಾ ನಾಯ್ಡು, ಮೈಕೋ ನಾಗರಾಜ್, ಅರವಿಂದ್ ರಾವ್ ಮೊದಲಾದವರು ಚಿತ್ರದಲ್ಲಿದ್ದಾರೆ. ❖


ಸಂಜನಾ ನಾಯ್ಡು

ದಿವ್ಯಾ–ಅರವಿಂದ್ ಪ್ರೇಮಕಥೆಯ ಹಾಡು

ಬಿಗ್‌ಬಾಸ್ ಸ್ಪರ್ಧಿಗಳಾಗಿದ್ದ ದಿವ್ಯಾ ಉರುಡುಗ ಹಾಗೂ ಅರವಿಂದ್ ಕೆ.ಪಿ. ನಟಿಸಿರುವ ‘ಅರ್ದಂಬರ್ಧ ಪ್ರೇಮಕಥೆ’ ಚಿತ್ರದ ‘ಹುಚ್ಚುಮನಸಿನ ಹುಡುಗಿ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ‘ಹುಲಿರಾಯ’ ಖ್ಯಾತಿಯ ಅರವಿಂದ್ ಕೌಶಿಕ್ ಅವರ ನಿರ್ದೇಶನದ ಚಿತ್ರಕ್ಕೆ ಮೂಡಿಬರುತ್ತಿರುವ ಚಿತ್ರಕ್ಕೆ ಬಕ್ಸಾಸ್ ಮೀಡಿಯಾ ಬಂಡವಾಳ ಹೂಡಿದೆ.

‘ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳೆಲ್ಲ ಮುಗಿದಿದ್ದು, ಸೆನ್ಸಾರ್ ಪ್ರಕ್ರಿಯೆ ನಡೆಯುತ್ತಿದೆ. ನವೆಂಬರ್‌ನಲ್ಲಿ ತೆರೆಗೆ ತರುವ ಆಲೋಚನೆಯಿದೆ. ನಾನು ಈ ಕಥೆ ಶುರು ಮಾಡಿದಾಗಲೇ ನಾಯಕಿ ಪಾತ್ರಕ್ಕೆ ದಿವ್ಯಾ ಅವರನ್ನು ಆಯ್ಕೆ ಮಾಡಿದ್ದೆ. ಅವರನ್ನು ಒಪ್ಪಿಸಿದ ಮೇಲೆ ಅರವಿಂದ್ ನಾಯಕ ಪಾತ್ರ ಮಾಡಿದರೆ ಹೇಗೆ ಅನಿಸಿತು. ದಿವ್ಯಾ ಮೂಲಕ ಅವರನ್ನು ಕೇಳಿದಾಗ ಸಮಯ ತೆಗೆದುಕೊಂಡು ಒಪ್ಪಿಕೊಂಡರು’ ಎಂದರು ಅರವಿಂದ್ ಕೌಶಿಕ್.

ಈ ಗೀತೆಗೆ ನಿರ್ದೇಶಕರೇ ಸಾಹಿತ್ಯ ಬರೆದಿದ್ದು, ಅರ್ಜುನ್ ಜನ್ಯ ಸಂಗೀತವಿದೆ. ವಾಸುಕಿ ವೈಭವ್, ಪೃಥ್ವಿ ಭಟ್ ಹಾಡಿದ್ದಾರೆ. ನಾಯಕ ಅರವಿಂದ್ ಮಾತನಾಡಿ, ‘ಅಭಿನಯ ನಿಜವಾಗಿಯೂ ಕಷ್ಟದ ಕೆಲಸವೇ. ಒಂದಷ್ಟು ದಿನದ ವರ್ಕ್‌ಶಾಪ್ ನಂತರ ಬಣ್ಣ ಹಚ್ಚಿದೆ. ಆರಂಭದ 2-3 ದಿನ ಸ್ವಲ್ಪ ಕಷ್ಟವಾಗಿತ್ತು, ನಿರ್ದೇಶಕ ಅರವಿಂದ್ ಹಾಗೂ ದಿವ್ಯಾ ಇಬ್ಬರೂ ನನಗೆ ನಟನೆ ಹೇಳಿಕೊಟ್ಟರು’ ಎಂದರು.

ರ್‍ಯಾಪರ್ ಅಲೋಕ್, ಶ್ರೇಯಾ ಬಾಬು, ವೆಂಕಟಶಾಸ್ತ್ರಿ ಮೊದಲಾದವರು ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಹಿರಿಯ ನಟ ದ್ವಾರಕೀಶ್ ಪುತ್ರ ಅಭಿಲಾಷ್ ವಿಶೇಷ ಪಾತ್ರದ ಮೂಲಕ 25 ವರ್ಷಗಳ ನಂತರ ನಟನೆಗೆ ಮರಳಿದ್ದಾರೆ. ಸೂರ್ಯ ಅವರ ಛಾಯಾಗ್ರಹಣ, ಶಿವರಾಜ್ ಮೇಹು ಸಂಕಲನ ಈ ಚಿತ್ರಕ್ಕಿದೆ. ❖


ದಿವ್ಯಾ ಉರುಡುಗ ಅರವಿಂದ್ ಕೆ.ಪಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಮೂರ್ಖರೊಂದಿಗೆ ನಗುವುದಕ್ಕಿಂತ ವಿವೇಕಿಗಳ ಜೊತೆಗೆ ಅಳುವುದೇ ಲೇಸು.

-ಗೌತಮ ಬುದ್ಧ

ಸಲಿಂಗ ವಿವಾಹಕ್ಕೆ ಮಾನ್ಯತೆ ಬೇಡಿಕೆ ಸಮುದಾಯದ ನಿರೀಕ್ಷೆ ಹುಸಿ

ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿರುವುದು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ದೊಡ್ಡ ಹಿನ್ನಡೆಯಾಗಿ ಪರಿಣಮಿಸಿದೆ. ಮದುವೆಯ ಹಕ್ಕಿಗೆ ಮಾನ್ಯತೆ ನೀಡುವ ಮೂಲಕ ಪೂರ್ಣ ಪ್ರಮಾಣದ ಸಮಾನತೆಯನ್ನು ನ್ಯಾಯಾಲಯವು ನೀಡಬಹುದು ಎಂಬ ನಿರೀಕ್ಷೆ ಈ ಸಮುದಾಯಕ್ಕೆ ಇತ್ತು. ಮದುವೆಯ ಹಕ್ಕು ಮೂಲಭೂತ ಹಕ್ಕು ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಬದುಕುವ ಹಕ್ಕು, ಸಮಾನತೆಯ ಹಕ್ಕು, ಖಾಸಗಿತನದ ಹಕ್ಕು ಮತ್ತು ತಾರತಮ್ಯಕ್ಕೆ ಒಳಗಾಗದಿರುವ ಹಕ್ಕನ್ನು ನ್ಯಾಯಾಲಯವು ಈ ಹಿಂದೆ ಹಲವಾರು ಬಾರಿ ಎತ್ತಿಹಿಡಿದಿದೆ. ಅದೇ ರೀತಿಯಲ್ಲಿಯೇ ಈ ತೀರ್ಪು ಕೂಡ ಬರಬಹುದು ಎಂಬ ಭರವಸೆ ಇರಿಸಿಕೊಳ್ಳಲಾಗಿತ್ತು. ಖಾಸಗಿತನದ ಹಕ್ಕನ್ನು ಎತ್ತಿ ಹಿಡಿದು 2017ರಲ್ಲಿ ತೀರ್ಪು ನೀಡಲಾಗಿತ್ತು, ಸಲಿಂಗ ಲೈಂಗಿಕತೆಯನ್ನು ಅಪರಾಧಮುಕ್ತಗೊಳಿಸಿ 2018ರಲ್ಲಿ ತೀರ್ಪು ನೀಡಲಾಗಿತ್ತು. ಅದೇ ರೀತಿಯಲ್ಲಿ, ಲಿಂಗತ್ವ ಅಲ್ಪಸಂಖ್ಯಾತರಿಗೆ ಮದುವೆಯ ಹಕ್ಕನ್ನು ನ್ಯಾಯಾಲಯವು ನೀಡಲಿದೆ ಎಂಬ ನಿರೀಕ್ಷೆ ಇತ್ತು. ನ್ಯಾಯಾಲಯವು ಈ ಹಕ್ಕನ್ನು ನೀಡುವ ವಿಚಾರದಲ್ಲಿ ಸಹಾನುಭೂತಿಯಿಂದ ವರ್ತಿಸಿದೆ. ಆದರೆ ನಿರ್ಣಾಯಕವಾದ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ಈ ವಿಚಾರದಲ್ಲಿ ನಿರ್ಧಾರ ಕೈಗೊಳ್ಳುವ ಅವಕಾಶವನ್ನು ನ್ಯಾಯಾಲಯವು ಸಂಸತ್ತಿಗೆ ನೀಡಿದೆ. ಈ ಅವಕಾಶವನ್ನು ಸಂಸತ್ತಿಗೆ ನೀಡುವುದು ಎಂದರೆ, ಚರ್ಚೆಯು ಎಲ್ಲಿ ಆರಂಭವಾಗಿದೆಯೋ ಅಲ್ಲಿಗೇ ಒಯ್ದು ನಿಲ್ಲಿಸಿದಂತೆ.



ಮದುವೆಯ ಸುತ್ತ ಇರುವ ಸಾಮಾಜಿಕ ನಿಯಮಗಳು ಮತ್ತು ಕಾನೂನು ನಿರ್ಬಂಧಗಳಿಗಿಂತ ವ್ಯಕ್ತಿಗಳ ಆಯ್ಕೆಗಳಿಗೆ ಆಧಾರವಾಗಿರುವ ಹಕ್ಕುಗಳಿಗೆ ಮಹತ್ವ ನೀಡಬೇಕಾಗಿದೆ

ಐವರು ನ್ಯಾಯಮೂರ್ತಿಗಳು ಹಲವು ವಿಚಾರಗಳ ಬಗ್ಗೆ ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ, ಸಲಿಂಗ ಮದುವೆಗೆ ಮಾನ್ಯತೆ ಕೊಡುವುದಕ್ಕಾಗಿ ವಿಶೇಷ ವಿವಾಹ ಕಾಯ್ದೆಗೆ ತಿದ್ದುಪಡಿ ತರಬೇಕು ಎಂಬ ವಿಚಾರವನ್ನು ಎಲ್ಲರೂ ತಿರಸ್ಕರಿಸಿದ್ದಾರೆ. ನ್ಯಾಯಾಲಯವು ಕಾಯ್ದೆಯನ್ನು ರೂಪಿಸುವುದಿಲ್ಲ, ಬದಲಿಗೆ ಕಾಯ್ದೆಯನ್ನು ವ್ಯಾಖ್ಯಾನಿಸಿ, ಅದು ಯಾವ ರೀತಿಯಲ್ಲಿ ಅನ್ವಯವಾಗುತ್ತದೆ ಎಂಬುದನ್ನು ತಿಳಿಸುವ ಕೆಲಸವನ್ನಷ್ಟೇ ಮಾಡುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ. ವಿಶೇಷ ವಿವಾಹ ಕಾಯ್ದೆಯನ್ನು ರದ್ದುಪಡಿಸಬೇಕು ಎಂಬುದು ನ್ಯಾಯಾಲಯದ ಮುಂದೆ ಇದ್ದ ಅರ್ಜಿಗಳ ಕೋರಿಕೆ ಆಗಿರಲಿಲ್ಲ. ಈ ಕಾಯ್ದೆಯನ್ನು ರದ್ದು ಮಾಡಿದರೆ, ಅನಪೇಕ್ಷಿತ ಪರಿಣಾಮಗಳು ಉಂಟಾಗಬಹುದು ಎಂದು ನ್ಯಾಯಾಲಯವು ಹೇಳಿದ್ದು ಸರಿಯಾಗಿಯೇ ಇದೆ. ಆದರೆ, ಈ ಕಾಯ್ದೆಯನ್ನು ಮರುವ್ಯಾಖ್ಯಾನಗೊಳಿಸಬೇಕು ಎಂಬುದು ಅರ್ಜಿದಾರರ ಬೇಡಿಕೆಯಾಗಿತ್ತು. ಹಾಗೆ ಮಾಡಿದ್ದರೆ, ಆ ಕಾಯ್ದೆಯು ಅನ್ವಯ ಹೇಗೆ ಎಂಬುದು ಸ್ಪಷ್ಟವಾಗುತ್ತಿತ್ತು. ಆದರೆ, ಹಾಗೆ ಮಾಡುವುದರಿಂದ ನ್ಯಾಯಾಲಯವು ವಿಧಾಯಕ ಸ್ವರೂಪ ಹೊಂದಿದಂತಾಗುತ್ತದೆ. ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಸಲಿಂಗ ಜೋಡಿಗೆ ಇದೆ ಎಂದು ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಕಿಶನ್ ಕೌಲ್ ಹೇಳಿದ್ದಾರೆ. ಆದರೆ ಇಂತಹ ಮಾನ್ಯತೆಯು ಕಾನೂನಿನ ಮೂಲಕವಷ್ಟೇ ಸಾಧ್ಯ ಎಂದು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ, ರವೀಂದ್ರ ಭಟ್ ಮತ್ತು ಪಿ.ಎಸ್. ನರಸಿಂಹ ಹೇಳಿದ್ದಾರೆ. ಮದುವೆ ಎಂಬುದು ಸಾಮಾಜಿಕ ಸಂಸ್ಥೆ ಹೌದು. ಆದರೆ, ವ್ಯಕ್ತಿಗಳ ಆಯ್ಕೆ ಮೂಲಕ ಈ ಸಂಸ್ಥೆ ರೂಪುಗೊಳ್ಳುತ್ತದೆ. ಹಾಗಾಗಿಯೇ, ಮದುವೆಯ ಸುತ್ತ ಇರುವ ಸಾಮಾಜಿಕ ನಿಯಮಗಳು ಮತ್ತು ಕಾನೂನು ನಿರ್ಬಂಧಗಳಿಗಿಂತ ವ್ಯಕ್ತಿಗಳ ಆಯ್ಕೆಗಳಿಗೆ ಆಧಾರವಾಗಿರುವ ಅವರ ಹಕ್ಕುಗಳಿಗೆ ಮಹತ್ವ ನೀಡಬೇಕಾಗಿದೆ.

ಸಲಿಂಗ ಮದುವೆಯ ವಿಚಾರದಲ್ಲಿ ಸರ್ಕಾರದ ನಿಲುವನ್ನು ನ್ಯಾಯಾಲಯವು ಒಪ್ಪಿದೆ. ಸರ್ಕಾರವು ಯಾವ ನಿಲುವು ಹೊಂದಿದೆ ಎಂಬುದು ಗೊತ್ತೇ ಇದೆ. ಹಾಗಾಗಿ, ಸರ್ಕಾರವು ಸಲಿಂಗ ಮದುವೆಗೆ ಯಾವುದೇ ರೂಪದಲ್ಲಾದರೂ ಮಾನ್ಯತೆ ನೀಡುವ ಸಾಧ್ಯತೆ ಇಲ್ಲ. ಸಲಿಂಗ ಜೋಡಿಗೆ ಜೊತೆಯಾಗಿ ಬದುಕುವ, ಬೆದರಿಕೆ ಮತ್ತು ಕಿರುಕುಳಮುಕ್ತವಾಗಿ ಬದುಕುವ ಹಕ್ಕು ಇದೆ ಎಂದು ನ್ಯಾಯಾಲಯವು ಹೇಳಿದೆ. ಆದರೆ ಅವರು ಮಕ್ಕಳನ್ನು ದತ್ತು ತೆಗೆದುಕೊಳ್ಳಬಹುದೇ ಎಂಬ ವಿಚಾರದಲ್ಲಿ ಒಮ್ಮತ ಇಲ್ಲ. ಸಲಿಂಗ ಜೋಡಿಯ ಹಕ್ಕುಗಳು ಮತ್ತು ಸೌಲಭ್ಯಗಳ ಕುರಿತು ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಸರ್ಕಾರವು ಇದನ್ನು ಹೇಗೆ ತೆಗೆದುಕೊಳ್ಳಲಿದೆ ಮತ್ತು ಹೇಗೆ ಜಾರಿ ಮಾಡಲಿದೆ ಎಂಬುದಕ್ಕೆ ಯಾವುದೇ ಖಾತರಿ ಇಲ್ಲ. ತಮ್ಮ ಹಕ್ಕುಗಳಿಗೆ ಸ್ವೀಕೃತಿ ದೊರೆಯಲು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯವು ಸುದೀರ್ಘ ಹೋರಾಟ ನಡೆಸಬೇಕಾಗಿದೆ ಎಂಬುದನ್ನು ತೀರ್ಪು ತೋರಿಸಿಕೊಟ್ಟಿದೆ.

ದಿನದ ಟ್ವೀಟ್

ಏಕೈಕ ಪರಿಹಾರ, ಏಕೈಕ ಭರವಸೆ



ಪ್ಯಾಲೆಸ್ಟೀನ್– ಇಸ್ರೇಲ್ ಪರಿಸ್ಥಿತಿಗೆ ಗುಂಡು ಮತ್ತು ಬಾಂಬುಗಳು ಪರಿಹಾರವಲ್ಲ. ಯುದ್ಧವು ವಿನಾಶ ಹಾಗೂ ಭೀತಿಯನ್ನಲ್ಲದೆ ಬೇರೇನನ್ನೂ ತಂದುಕೊಡದು. ಪ್ರಾದೇಶಿಕವಾಗಿ ಇನ್ನಷ್ಟು ಭದ್ರತಾ ಭಾವ ತಂದುಕೊಡುವ ಬದಲು ಅದಕ್ಕೆ ವಿರುದ್ಧವಾದ ಸ್ಥಿತಿಯನ್ನು ನಿರ್ಮಿಸುತ್ತದೆ. ಇದಕ್ಕೆಲ್ಲ ಇರುವ ಏಕೈಕ ಪರಿಹಾರವೆಂದರೆ– ಏಕೈಕ ಭರವಸೆಯೆಂದರೆ– ಚರ್ಚೆ, ವಿವೇಚನೆ ಮತ್ತು ಶಾಂತಿ.

ಟೆಡ್ರೋಸ್ ಅಧನೋಮ್ ಗೆಬ್ರಿಯೇಸಸ್, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮುಖ್ಯಸ್ಥ

ಕಿಡಿನುಡಿ



ಅಭಿವೃದ್ಧಿಯ ನಾಗಾಲೋಟದಿಂದಾಗಿ ನಮ್ಮ ಶಾಲೆಯು ಆಟದ ಮೈದಾನವನ್ನೇ ಕಳೆದುಕೊಂಡಿದೆ. ನಾನು ಏಳನೇ ತರಗತಿಯಲ್ಲಿ ಇದ್ದಾಗ ಕೊಕ್ಕೊದಲ್ಲಿ ಗೆಲುವು ಸಾಧಿಸಿದ್ದೆವು, ನನ್ನ ಶಾಲೆಯು ಕ್ಲಸ್ಟರ್ ವ್ಯಾಪ್ತಿಯಲ್ಲಿ ಆ ಒಂದು ವರ್ಷದಲ್ಲಿ ಕಬಡ್ಡಿ, ಬ್ಯಾಡ್ಮಿಂಟನ್ ಮತ್ತು ಕೆಲವು ವೈಯಕ್ತಿಕ ಸ್ಪರ್ಧೆಗಳಲ್ಲೆಲ್ಲ ಗೆಲುವು ಸಾಧಿಸಿತ್ತು. ನನಗಿಂತ ಹಿರಿಯ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದಲ್ಲೂ ಆಟವಾಡಿದ್ದರು! ಈಗ ಆ ಶಾಲೆಯಲ್ಲಿ ಕ್ರೀಡೆಯು ದೈಹಿಕ ಶಿಕ್ಷಣ ತರಗತಿಗಷ್ಟೇ ಸೀಮಿತವಾಗಿದೆ.

ಯಶವಂತ, ಎಂಜಿನಿಯರ್

50 ವರ್ಷಗಳ ಹಿಂದೆ

ಶನಿವಾರ, 20-10-1973

● **ಬಡವರ ಆಸ್ತಿ, ಬಡವರ ಸರ್ಕಾರ, ಅರಸು ಕೈಲಿ ಬಡವರ ರೊಟ್ಟಿ**

ಬೆಂಗಳೂರು, ಅ. 19– ‘ಇದು ಬಡವರ ಆಸ್ತಿ. ಇದು ಬಡವರ ಸರ್ಕಾರ’– ಇಂದು ವಿಧಾನ ಪರಿಷತ್ತಿನಲ್ಲಿ ಮುಖ್ಯಮಂತ್ರಿ ಶ್ರೀ ಅರಸು ಅವರು ಈ ಮಾತನ್ನು ಹೇಳಿ ಕುಳಿತಾಗ ಕೈಯಲ್ಲಿ ಜೋಳದ ರೊಟ್ಟಿ ಹಿಡಿದಿದ್ದರು.

ನಿನ್ನೆ ವಿರೋಧ ಪಕ್ಷದ ನಾಯಕ ಶ್ರೀ ರಾಮಕೃಷ್ಣ ಹೆಗಡೆ ಅವರು ಕಸವಿದ್ದ ಜೋಳ, ಒಣಗಿದ್ದ ಜೋಳದ ತೆನೆಗಳನ್ನು ಸಭೆಯಲ್ಲಿ ತೋರಿಸಿ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದರು. ಜೋಳ ಕೆಟ್ಟಿದೆ ಎಂಬುದನ್ನು ಮುಖ್ಯಮಂತ್ರಿ ಒಪ್ಪಲಿಲ್ಲ. ರೊಟ್ಟಿ ಮಾಡಿ ಹೆಗಡೆ ಅವರನ್ನು ಕರೆಯುವುದಾಗಿ ಭರವಸೆ ನೀಡಿದ್ದರು. ಇಂದು ಮುಖ್ಯಮಂತ್ರಿ ಆ ಜೋಳದಿಂದ ರೊಟ್ಟಿ ಮಾಡಿಸಿ ಸಭೆಗೆ ತಂದಿದ್ದರು.

ಸರ್ಕಾರದಿಂದ 3 ಕೋಟಿ ರೂ. ಮೊತ್ತದ ಬಿತ್ತನೆ ಬೀಜ ಹಂಚಲಾಗಿದೆ. ನಾನಾ ಕಡೆಗಳಿಂದ ತರಿಸಿದ ಈ ಬಿತ್ತನೆ ಬೀಜ ನೂರಕ್ಕೆ ನೂರರಷ್ಟು ಸರಿಯಾಗಿರಲು ಸಾಧ್ಯವಿಲ್ಲ. ಶೇಕಡ 5ರಿಂದ 15ರಷ್ಟು ಕೆಟ್ಟಿರಬಹುದೆಂದು ಮುಖ್ಯಮಂತ್ರಿ ಒಪ್ಪಿಕೊಂಡರು. ಮಾರುಕಟ್ಟೆಯಲ್ಲಿ ಕೊಂಡ ಜೋಳದಲ್ಲಿ ಕಸವಿರಬಹುದು, ಆದರೆ ಜೋಳ ತಿನ್ನಲಿಕ್ಕೆ ಅರ್ಹವಾದುದಲ್ಲ ಅಂತ ನಿನ್ನೆ ಸದಸ್ಯರು ಹೇಳಿದುದನ್ನು ಮಾತ್ರ ಒಪ್ಪಲಿಲ್ಲ.

● **ಮೈಸೂರು ಸಾಬೂನು ಕಾರ್ಖಾನೆ ವಿಸ್ತರಣೆ: ಇಟಲಿ ಜೊತೆ ಒಪ್ಪಂದ**

ಬೆಂಗಳೂರು ಅ. 19– ಗಂಧದ ಸಾಬೂನು ತಯಾರಿಸುವ ಪ್ರಸಿದ್ಧ ಮೈಸೂರು ಸರ್ಕಾರಿ ಸಾಬೂನು ಕಾರ್ಖಾನೆಯ 50 ವರ್ಷಗಳ ಇತಿಹಾಸದಲ್ಲಿ ಇಂದಿನಿಂದ ನೂತನ ಅಧ್ಯಾಯ ಆರಂಭ.

1975ನೇ ಜನವರಿ 31ರಂದು ವರ್ಷಕ್ಕೆ 10 ಸಾವಿರ ಟನ್‌ನಷ್ಟು ಬಿಲ್ಲೆ ಹಾಗೂ ಪುಡಿ ರೂಪದ ಸಾಬೂನು ತಯಾರಿಸುವ ವಿಸ್ತರಣೆ ಯೋಜನೆಗೆ ಕೈಗಾರಿಕಾ ಸಚಿವ ಶ್ರೀ ಎಸ್.ಎಂ. ಕೃಷ್ಣ ಅವರು ಸಹಿ ಹಾಕಿದರು.

● **ಪಶ್ಚಿಮ ಏಷ್ಯಾ ಶಾಂತಿಗೆ ಕೊಸಿಗಿನ್ ಸೂತ್ರ**

ಕೈರೋ, ಅ. 19– ಸೋವಿಯತ್ ಪ್ರಧಾನಿ ಕೊಸಿಗಿನ್ ಅವರು ಈ ವಾರ ಇಲ್ಲಿ ಈಜಿಪ್ಟ್ ಅಧ್ಯಕ್ಷ ಅನ್ವರ್ ಸಾದತ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಸಂದರ್ಭದಲ್ಲಿ, ಪಶ್ಚಿಮ ಏಷ್ಯಾ ಶಾಂತಿ ಯೋಜನೆಯೊಂದನ್ನು ಸಾದತ್ ಅವರಿಗೆ ಸಲ್ಲಿಸಿದರೆಂದು ಇಲ್ಲಿಯ ರಾಜತಾಂತ್ರಿಕ ಮೂಲಗಳು ತಿಳಿಸಿವೆ.

ಅವರಿಬ್ಬರ ಮಾತುಕತೆಯ ಬಗ್ಗೆ ನೀಡಿರುವ ಅಧಿಕೃತ ಪ್ರಕಟಣೆಯಲ್ಲಿ, ‘ಇಸ್ರೇಲಿಗಳು 1967ರ ಜೂನ್ ಐದರಂದು ಇದ್ದ ಸ್ಥಾನಗಳಿಗೆ ವಾಪಸಾಗಬೇಕು’ ಎಂಬ ಸಲಹೆ ಇದೆ ಎಂದು ಮೂಲಗಳು ತಿಳಿಸಿವೆ.

● **ವಿಜಯನಗರ ಉಕ್ಕು ಕಾರ್ಖಾನೆ: ಶೀಘ್ರವೇ ಕಂಪನಿ ರಿಜಿಸ್ಟರ್**

ಬೆಂಗಳೂರು, ಅ. 19– ವಿಜಯನಗರ ಉಕ್ಕಿನ ಕಾರ್ಖಾನೆ ಆಗುತ್ತದೆ ಎಂಬ ವಿಶ್ವಾಸವನ್ನು ಕೈಗಾರಿಕಾ ಸಚಿವ ಶ್ರೀ ಎಸ್.ಎಂ.ಕೃಷ್ಣ ಅವರು ವಿಧಾನ ಪರಿಷತ್ತಿನಲ್ಲಿ ವ್ಯಕ್ತಪಡಿಸಿದರು.

ಈ ಕಾರ್ಖಾನೆಯನ್ನು ಸ್ಥಾಪಿಸಲು 12ರಿಂದ 15 ಸಾವಿರ ಎಕರೆ ಜಮೀನು ಬೇಕಾಗುವುದೆಂದೂ, ಈಗಾಗಲೇ 4,500 ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದ್ದು, ಇನ್ನೂ 1,500 ಎಕರೆ ಜಮೀನನ್ನು ವಶಪಡಿಸಿಕೊಳ್ಳಬೇಕಾಗಿದೆ, ಜಮೀನು ವಶಪಡಿಸಿಕೊಳ್ಳಲು ಕೇಂದ್ರ ಸರ್ಕಾರ 1 ಕೋಟಿ ರೂ. ನೀಡಿದೆ ಎಂದೂ ಸಚಿವರು ಹೇಳಿದರು.

ನೇರ ನಗದಿನ ಬದಲು ಪೌಷ್ಟಿಕಧಾನ್ಯ ವಿತರಣೆ ‘ಕರ್ನಾಟಕ ಮಾದರಿ’ಯಾಗಲಿ!

ಪಡಿತರ ಮತ್ತು ಪೌಷ್ಟಿಕ ಆಹಾರಧಾನ್ಯ



ವಿಶ್ಲೇಷಣೆ

ಶಾರದಾ ಗೋಪಾಲ

ಕಾಂಗ್ರೆಸ್ ಪಕ್ಷವು ವಚನ ನೀಡಿದ್ದಂತೆ, ಅಧಿಕಾರಕ್ಕೆ ಬಂದ ನಂತರ ಪಡಿತರ ವಿತರಿಸಲು ಸಾಧ್ಯವಾಗದೇ ಇದ್ದಾಗ, ಅದರ ಬದಲು ನೇರ ನಗದು ಪಾವತಿ ವ್ಯವಸ್ಥೆಯ ಮೂಲಕ ಹಣ ನೀಡಲು ಆರಂಭಿಸಿ ಎರಡು ತಿಂಗಳಾಗಿದೆ. ಇದು ಬರೀ ತಾತ್ಕಾಲಿಕ ವ್ಯವಸ್ಥೆ ಎಂದು ಸರ್ಕಾರ ಹೇಳಿದ್ದರೂ ಧಾನ್ಯ ಖರೀದಿ, ಸಂಗ್ರಹ ಮತ್ತು ವಿತರಣೆಯಂತಹ ಜಂಜಾಟಗಳಿಗಿಂತ ಹಣ ವಿತರಣೆಯೇ ಸುಲಭ ಮಾರ್ಗ. ಆಹಾರ ಭದ್ರತಾ ಕಾನೂನಿನಲ್ಲಿ ಇದಕ್ಕೆ ಅವಕಾಶ ಕೂಡ ಇರುವುದರಿಂದ ಸರ್ಕಾರ ಇದನ್ನು ಮುಂದುವರಿಸಿಕೊಂಡು ಹೋಗುವ ಎಲ್ಲ ಸಾಧ್ಯತೆಗಳೂ ಇದ್ದೇ ಇವೆ. ಇದು, ಜನರ ಪೌಷ್ಟಿಕಾಂಶದ ಬಗ್ಗೆ ಚಿಂತಿಸುವ ಎಲ್ಲರಿಗೂ ಕಳವಳ ಮತ್ತು ಆತಂಕದ ವಿಚಾರವೇ ಆಗಿದೆ.

ಬಿಪಿಎಲ್ ಕಾರ್ಡ್‌ದಾರರಿಗೆ ತಲಾ ಐದು ಕೆ.ಜಿ. ಅಕ್ಕಿಯನ್ನು ಹೆಚ್ಚುವರಿಯಾಗಿ ಕೊಡುತ್ತೇವೆ ಎಂಬುದು ಚುನಾವಣೆ ವೇಳೆ ‘ಗ್ಯಾರಂಟಿ’ ಹೆಸರಿನಲ್ಲಿ ಕಾಂಗ್ರೆಸ್ ಪಕ್ಷ ನೀಡಿದ ಭರವಸೆಗಳಲ್ಲಿ ಒಂದು. ‘ಅಕ್ಕಿಯೆಂದರೆ ಪಿಷ್ಟ ಮಾತ್ರ. ಅಕ್ಕಿಯ ಬದಲಿಗೆ ಒಬ್ಬ ವ್ಯಕ್ತಿಗೆ ಕೊಡುತ್ತಿರುವ ₹ 170 ಸಹ ಆಹಾರಕ್ಕೇ ಖರ್ಚಾಗುತ್ತದೆ ಎಂಬುದರ ಬಗೆಗೂ ಗ್ಯಾರಂಟಿ ಇಲ್ಲ. ನೇರವಾಗಿ ನಗದು ನೀಡುವುದನ್ನು ಆದಷ್ಟು ಬೇಗ ರದ್ದುಗೊಳಿಸಬೇಕು. ಅಕ್ಕಿ ಸಲುವಾಗಿ ವ್ಯಯಿಸುವ ₹ 9,000 ಕೋಟಿಯಷ್ಟು ಬೃಹತ್ ಮೊತ್ತವನ್ನು ಪೌಷ್ಟಿಕಾಂಶಯುಕ್ತ ಇತರ ಆಹಾರ ಪದಾರ್ಥಗಳನ್ನು ಕೊಡಲು ಬಳಸಬೇಕು’ ಎಂದು ರೈತ ಸಂಘದ ಬಡಗಲಪುರ ನಾಗೇಂದ್ರ, ಚಾಮರಸ ಪಾಟೀಲ ಅವರೊಂದಿಗೆ ಹತ್ತು ಹಲವು ಚಿಂತಕರು ಇತ್ತೀಚೆಗೆ ಕೃಷಿ ಸಚಿವರನ್ನು ಭೇಟಿ ಮಾಡಿ ಒತ್ತಾಯಿಸಿದ್ದಾರೆ. ಜೊತೆಗೆ ಅದನ್ನು ಹೇಗೆ ಸಾಧಿಸಬಹುದು ಎಂಬುದನ್ನು ಸಹ ವಿವರಿಸಿದ್ದಾರೆ.

ಹಣ ಅಥವಾ ಅಕ್ಕಿಯ ಬದಲಿಗೆ ಇತರ ಪೌಷ್ಟಿಕ ಆಹಾರಪದಾರ್ಥವನ್ನು ಕೊಡುವತ್ತ ಸರ್ಕಾರ ಮನಸ್ಸು ಮಾಡಿದರೆ ಅದು ಗ್ರಾಮೀಣ ಉದ್ಯೋಗಗಳ ಪುನಃಶ್ಚೇತನಕ್ಕೆ ಕಾರಣವಾಗುತ್ತದೆ. ಅತಿ ಹೆಚ್ಚು ನೀರು ಬೇಡುವ ಭತ್ತದ ಬದಲು ಮಳೆಯಾಶ್ರಿತ ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹ ನೀಡುವುದೆಂದರೆ ಅದು, ಸಣ್ಣ ಹಿಡುವಳಿದಾರರನ್ನು ಪ್ರೋತ್ಸಾಹಿಸಿದಂತೆಯೇ ಸರಿ. ಪಾಲಿಷ್ ಮಾಡಿದ ಅಕ್ಕಿಯ ಬದಲು, ಜೋಳ ಮತ್ತು ರಾಗಿ ತಿನ್ನುವ ಜನರಿಗೆ ಅವನ್ನೇ ಪೂರೈಸಿದರೆ ಪ್ರಾದೇಶಿಕ ಆಹಾರ ವೈವಿಧ್ಯವನ್ನು ಪೋಷಿಸಿದಂತೆಯೂ ಆಗುತ್ತದೆ.

ಅಕ್ಕಿಯನ್ನು ಹೊಂದಿಸುವುದು ಸರ್ಕಾರಕ್ಕೆ ಕಷ್ಟವಾದ ಪಕ್ಷದಲ್ಲಿ ಜೋಳ ಅಥವಾ ರಾಗಿಯನ್ನು ಪೂರೈಸಬಹುದು. ಇದಕ್ಕಾಗಿ, 1.1 ಕೋಟಿ ಕುಟುಂಬಗಳಿಗೆ ರಾಗಿ ಮತ್ತು ಜೋಳವನ್ನು ಅದು ತನ್ನ ಗೋದಾಮಿನಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳಬೇಕಾಗುತ್ತದೆ. ಇಂತಿಷ್ಟು ಪ್ರಮಾಣದಲ್ಲಿ ನೀಡುತ್ತೇವೆ ಎಂದು ಹಿಂಗಾರಿ ಬಿತ್ತನೆಗೆ ಮೊದಲೇ ಸರ್ಕಾರ ಘೋಷಿಸಿದರೆ ರೈತರು ಆ ಬೆಳೆ ಬೆಳೆಯುವತ್ತ ಗಮನಹರಿಸಬಹುದು. ರಾಜ್ಯದಲ್ಲಿ ರಾಗಿಯ ಉತ್ಪಾದನೆ ವರ್ಷಕ್ಕೆ 11 ಲಕ್ಷ ಟನ್ ಇದ್ದು, ಅದರಲ್ಲಿ ಅರ್ಧ ಭಾಗವನ್ನು ರೈತರು ತಮಗಾಗಿ ತೆಗೆದಿಟ್ಟುಕೊಂಡು ಉಳಿದುದನ್ನು ಮಾರುತ್ತಾರೆ ಎಂದುಕೊಂಡರೂ 5.5 ಲಕ್ಷ ಟನ್ ರಾಗಿ ಲಭ್ಯವಾಗುತ್ತದೆ. ಜೋಳದ ಉತ್ಪಾದನೆ 7 ಲಕ್ಷ ಟನ್ ಇದೆ. ಇದರ ಜೊತೆಗೆ ಒಂದು ಕೆ.ಜಿ. ತೊಗರಿಬೇಳೆಯನ್ನು ಸರ್ಕಾರವು ರೈತರಿಂದ ಖರೀದಿಸಿ ಪಡಿತರದಾರರಿಗೆ ಕೊಡಬಹುದು. ಹಾಗೆ ನೀಡಿದಲ್ಲಿ ವರ್ಷಕ್ಕೆ 11,000 ಟನ್ ತೊಗರಿಬೇಳೆ ಬೇಕಾಗುತ್ತದೆ.

ಪಡಿತರದಲ್ಲಿ ಬಹುಕಾಲದಿಂದ ಬೇಡಿಕೆ ಇರುವ ಮೂರನೆಯ ವಸ್ತುವೆಂದರೆ ಅಡುಗೆ ಎಣ್ಣೆ. ಕುಟುಂಬಕ್ಕೆ ಒಂದು ಲೀಟರ್ ಅಡುಗೆ ಎಣ್ಣೆಯನ್ನು ಕೊಡಬೇಕೆಂದರೆ, ವರ್ಷಕ್ಕೆ ಸರ್ಕಾರದ ಬಳಿ 1.3 ಲಕ್ಷ ಟನ್ ಎಣ್ಣೆಯ ಸಂಗ್ರಹ ಬೇಕಾಗುತ್ತದೆ. ಇದಕ್ಕೆ ಬೇಕಾದ ಎಣ್ಣೆಕಾಳುಗಳನ್ನು ಸರ್ಕಾರವು ಖರೀದಿಸಿ, ಅದರ ಎಣ್ಣೆ ಮಾಡಲು ಪಂಚಾಯಿತಿಗೊಂದು ಎಣ್ಣೆಯ ಗಾಣವನ್ನು ಇಟ್ಟರೂ ಒಟ್ಟು ಖರ್ಚು ₹ 2,700 ಕೋಟಿಯನ್ನು ಮೀರುವುದಿಲ್ಲ ಎಂಬುದು ಕೃಷಿ ಕ್ಷೇತ್ರದ ತಜ್ಞರ ಲೆಕ್ಕಾಚಾರ. ಚಿತ್ರದುರ್ಗ, ತುಮಕೂರು, ಧಾರವಾಡ, ಬಳ್ಳಾರಿ ಭಾಗದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ಗಣನೀಯವಾಗಿ ಹೆಚ್ಚುತ್ತದೆ. ಅಲ್ಲದೆ ಎಣ್ಣೆಗಾಣಗಳನ್ನು ಪಂಚಾಯಿತಿಗೆ ಒಂದರಂತೆ ನೆಲೆಗೊಳಿಸುವುದರ ಪರಿಣಾಮವಾಗಿ ಸ್ಥಳೀಯವಾಗಿ ಉದ್ಯೋಗಕ್ಕೆ ಪ್ರೋತ್ಸಾಹ ಸಿಗುತ್ತದೆ. ಪಡಿತರದಲ್ಲಿ ಹೀಗೆ ಭಿನ್ನ ಭಿನ್ನ ಧಾನ್ಯಗಳನ್ನು ಸೇರಿಸಿದಾಗ ಕುಟುಂಬಗಳಿಗೆ ಪೌಷ್ಟಿಕಾಂಶಯುಕ್ತ ಆಹಾರಪದಾರ್ಥಗಳ ಪೂರೈಕೆ ಆಗುತ್ತದೆ.

ಇಂದು ಜೋಳದ ಜಾಗವನ್ನು ನಾವ್ಯಾರೂ ತಿನ್ನದ ಮೆಕ್ಕೆಜೋಳವು ಆಕ್ರಮಿಸಿಕೊಂಡಿದೆ. ವರ್ಷದಿಂದ ವರ್ಷಕ್ಕೆ ಬಯಲುಸೀಮೆಯಲ್ಲೆಲ್ಲ ಅಡಿಕೆಯ ಗದ್ದೆಗಳು ವ್ಯಾಪಿಸುತ್ತಿವೆ. ಅಡಿಕೆ ಕೂಡ ನಮ್ಮ ಆಹಾರವಲ್ಲ. ನಮ್ಮದಲ್ಲದ ಬೆಳೆಗಳು ಕೃಷಿ ವಲಯದ ಪ್ರಧಾನ ಭಾಗವನ್ನು ಆಕ್ರಮಿಸಲು ಕಾರಣ, ಸರ್ಕಾರವು ಆಹಾರದ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆಯನ್ನು ಘೋಷಿಸದಿರುವುದು. ‘ನಮ್ಮೂರ ಭೂಮಿ ನಮಗಿರಲಿ’ ಸಂಘಟನೆಯ ವಿ.ಗಾಯತ್ರಿ ಅವರು ಹೇಳುವಂತೆ, ರಾಗಿಗೆ ಬೆಂಬಲ ಬೆಲೆ ಘೋಷಿಸಿದ ಪರಿಣಾಮವಾಗಿ, ಈಗಾಗಲೇ ವರ್ಷದಿಂದ ವರ್ಷಕ್ಕೆ ರಾಗಿ ಬೆಳೆಯುವ ಪ್ರದೇಶ ವೃದ್ಧಿಯಾಗುತ್ತಿದೆ. ಜೋಳ, ತೊಗರಿಬೇಳೆ, ಎಣ್ಣೆಕಾಳುಗಳಿಗೂ ಯೋಗ್ಯ ಬೆಂಬಲ ಬೆಲೆ ಘೋಷಿಸಿ ಅವುಗಳ ಕೃಷಿ ಕ್ಷೇತ್ರ ವರ್ಧನೆ ಆಗುವಂತೆ ಸರ್ಕಾರ ಮಾಡಬೇಕು.

ವೈವಿಧ್ಯಮಯ ಆಹಾರಧಾನ್ಯಗಳನ್ನು ಕೊಡಲು ಸಾಧ್ಯವಿರುವ ಯೋಜನೆಯನ್ನು ರೈತಸಂಘದವರು ಸರ್ಕಾರದ ಮುಂದೆ ಇಟ್ಟಿದ್ದಾರೆ. ಜನಸಮುದಾಯದ ಪೌಷ್ಟಿಕಾಂಶದ ಬಗ್ಗೆ ಚಿಂತಿಸುವವರೂ ಪ್ರಾದೇಶಿಕವಾಗಿ ಬಳಕೆಯಲ್ಲಿರುವ ಆಹಾರಪದಾರ್ಥಗಳನ್ನು ಕೊಡಿ ಎಂದು ಬೇಡಿಕೆ ಇಟ್ಟಿದ್ದಾರೆ. ‘ಆಹಾರದ ಹಕ್ಕಿಗಾಗಿ ಆಂದೋಲನ’, ಕೃಷಿ ಕೂಲಿಕಾರ ಸಂಘಟನೆಗಳಲ್ಲಿರುವ ಜನಸಾಮಾನ್ಯರು, ಆದ್ಯತಾ ಪಡಿತರ ಚೀಟಿಯುಳ್ಳವರು ತಮಗೆ ರಾಗಿ, ಜೋಳ, ಬೇಳೆ-ಕಾಳು, ಎಣ್ಣೆ ಮತ್ತು ಬೆಲ್ಲವನ್ನು ನೀಡುವಂತೆ ಬೆಳಗಾವಿ, ಕೋಲಾರ, ಬೆಂಗಳೂರು, ಬಾಗಲಕೋಟೆ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಮನವಿಗಳನ್ನು ಕೊಡುತ್ತಲೇ ಬಂದಿದ್ದಾರೆ. ಪತ್ರಿಕಾಗೋಷ್ಠಿಗಳ ಮೂಲಕವೂ ಒತ್ತಾಯಿಸಿದ್ದಾರೆ.



ಬೆಳೆಯುವವರಿಂದಲೂ ಅದೇ ಬೇಡಿಕೆ ಮತ್ತು ಕೊಳ್ಳುವವರಿಂದಲೂ ಅದೇ ಬೇಡಿಕೆ ಇರುವಾಗ ಸರ್ಕಾರ ಇನ್ನೂ ಹಿಂದುಮುಂದು ನೋಡುತ್ತಿರುವುದು ಯೋಗ್ಯವಲ್ಲ. ಅಕ್ಕಿಗಾಗಿ ಅಂಗಲಾಚುವ ಅಗತ್ಯವೂ ಇಲ್ಲ. ಈ ಬಗ್ಗೆ ಸಾರ್ವಜನಿಕವಾಗಿ ಚರ್ಚಿಸಿ ನಿರ್ಧಾರ ಪ್ರಕಟಿಸಬೇಕು. ರೈತರಿಂದ ಖರೀದಿಸುವತ್ತ ಮುಂದಾಗಬೇಕು. ಎಣ್ಣೆಗಾಣಗಳು, ರಾಗಿ ಸ್ವಚ್ಛತಾ ಯಂತ್ರಗಳನ್ನು ಅವಶ್ಯಕತೆ ಇರುವೆಡೆಯೆಲ್ಲ ಸ್ಥಾಪಿಸುವತ್ತ ಹೆಜ್ಜೆ ಹಾಕಬೇಕು. ಇದರಿಂದ ರೈತರೂ ಬದುಕಿಕೊಳ್ಳುತ್ತಾರೆ. ನೆಲದ ಜೀವಿವೈವಿಧ್ಯ, ಪರಿಸರ ಉಳಿಯುತ್ತವೆ. ಗ್ರಾಮೀಣ ಉದ್ಯೋಗಾವಕಾಶ ಹೆಚ್ಚುತ್ತದೆ. ಪಡಿತರ ಪಡೆಯುವವರಲ್ಲಿ ಪೌಷ್ಟಿಕತೆ ಹೆಚ್ಚಿ, ರಾಜ್ಯದ ಅಪೌಷ್ಟಿಕತೆಯ ಪ್ರಮಾಣ ಕೆಳಕ್ಕೆ ಇಳಿಯುತ್ತದೆ. ಹಸಿವಿನ ಸೂಚ್ಯಂಕದಲ್ಲಿ ಕರ್ನಾಟಕದ ತಕ್ಕಡಿ ಮೇಲಕ್ಕೇರುತ್ತದೆ. ಹೀಗೆ, ಒಂದು ಕ್ರಮದಿಂದ ಐದು ಲಾಭಗಳು ಸಾಧ್ಯ.

ರಾಜ್ಯದ ಬೊಕ್ಕಸಕ್ಕೆ ಹೆಚ್ಚುವರಿ ಹೊರೆ ಇಲ್ಲದೆ, ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಸಾಧ್ಯವಿರುವ ಮತ್ತು ಜನರ ಆರೋಗ್ಯದ ದೃಷ್ಟಿಯಿಂದ ಹಿತಕರವೂ ಆದ ಯೋಜನೆಗಳಿವು. ಒಮ್ಮೆಗೇ ಕಷ್ಟಸಾಧ್ಯ ಎಂದು ಅನ್ನಿಸಿದರೆ, ಹಂತಹಂತವಾಗಿ ಜಾರಿಗೊಳಿಸಬಹುದು. ಇಚ್ಛಾಶಕ್ತಿ ಪ್ರದರ್ಶಿಸುವುದೇ ಸರ್ಕಾರ?

ಚುರುಮುರಿ



ಕೋಟಿಯ ಕೊರಗು

● ಸಿ.ಎನ್.ರಾಜು

‘ನೂರು, ಸಾವಿರಗಳು ನಗುವಂತೆ ಕೋಟಿಗಳು ಸುಲಭವಾಗಿ ನಗುವುದಿಲ್ಲ ಅಲ್ವೇನ್ರೀ?’ ಅನು ಕೇಳಿದಳು.

‘ಹೌದು, ನೂರು, ಸಾವಿರದಂತೆ ಚಿಲ್ಲರೆ ನಗು ನಕ್ಕರೆ ಕೋಟಿಯ ಗತ್ತು, ಗಾತ್ರ, ಘನತೆಗೆ ಧಕ್ಕೆಯಾಗುತ್ತದೆ. ಕೋಟಿಗಳು ಬೇಕಾಬಿಟ್ಟಿ ನಗದೆ ಗಾಂಭೀರ್ಯ ಕಾಪಾಡಿಕೊಳ್ಳಬೇಕು’ ಅಂದ ಗಿರಿ.

‘ನೂರು, ಸಾವಿರಗಳಂತೆ ಜನಸಾಮಾನ್ಯರ ಜೊತೆ ಸಹಜವಾಗಿ ಬೆರೆಯಲು ಹೆದರುವ ಕೋಟಿಗಳು ವಿವಿಐಪಿಗಳಂತೆ ಅಂಗರಕ್ಷಕರ ರಕ್ಷಣೆಯಲ್ಲಿರುತ್ತವೆ, ಕೋಟಿಗಳು ಮಹಾ ಪುಕ್ಕಲು!’

‘ಕೋಟಿಗಳ ಬಗ್ಗೆ ಹಗುರವಾಗಿ ಮಾತನಾಡಬೇಡ, ಅವಕ್ಕೆ ರಾಜಮರ್ಯಾದೆ ಇದೆ’.

‘ವ್ಯಾಪಾರ, ವ್ಯವಹಾರದಲ್ಲಿ ದುಡಿಯುವ ಶ್ರಮಜೀವಿ ಕೋಟಿಗಳಿಗೆ ಸಮಾಜದಲ್ಲಿ ಗೌರವವಿದೆ. ಆದರೆ ಎಲ್ಲವಕ್ಕೂ ಇಂಥಾ ಭಾಗ್ಯವಿಲ್ಲ. ಕೆಲವು ಕೋಟಿಗಳು ಕತ್ತಲೆ ಕೋಣೆಯಲ್ಲಿ, ಬೀಗ ಹಾಕಿದ ಪೆಟ್ಟಿಗೆಯಲ್ಲಿ ಬೆಳಕು, ಬದುಕು ಕಾಣದೆ ಸೆರೆಯಾಳಿನಂತೆ ನರಳುತ್ತಿವೆ, ಪಾಪ!...’

‘ಹೌದು, ಕೋಟಿ ವಿದ್ಯೆಗಿಂತ ಲೂಟಿ ವಿದ್ಯೆ ಮೇಲು ಎಂದುಕೊಂಡಿರುವ ಕೆಲವು ಲೂಟಿ ವಿದ್ಯಾ ಪಾರಂಗತರು ಸಿಕ್ಕಸಿಕ್ಕಲ್ಲಿ ಕೋಟಿಗಳನ್ನು ಸೆರೆಹಿಡಿದು ತಂದು ಬಂಧಿಸಿ ಇಟ್ಟುಕೊಳ್ಳುತ್ತಾರೆ. ಕೋಟಿಯ ಘನತೆಗೆ ಮಸಿ ಬಳಿದು ಕಪ್ಪುಹಣವೆಂಬ ಕಳಂಕ ಅಂಟಿಸುತ್ತಾರೆ’.

‘ಕಪ್ಪುಕೋಟಿ ಕೂಡಿಡುವುದು ಮಡಿಲಲ್ಲಿ ಕೆಂಡ ಕಟ್ಟಿಕೊಂಡಂತೆ. ಯಾವಾಗ ಯಾವ ಗ್ರಹಚಾರ ವಕ್ಕರಿಸುವುದೋ ಎಂದು ಇಂತಹ ಕೋಟಿ ಕುಳಗಳು ಸುಖಶಾಂತಿ, ನಿದ್ರೆನೆಮ್ಮದಿ ಇಲ್ಲದೆ ಸದಾ ಆತಂಕದಲ್ಲಿರುತ್ತಾರೆ. ಆದರೂ ಕೋಟಿ ಕೂಡಿಸುವುದನ್ನು ಬಿಡುವುದಿಲ್ಲ’.

‘ಒತ್ತೆಯಾಳಾಗಿರುವ ಕೋಟಿಗಳ ಬಿಡುಗಡೆಗೆ ದೇವರೇ ಕರುಣೆ ತೋರಬೇಕು’.

‘ಕೋಟಿಯನ್ನು ಕೊರಗಿಸಿದವರ ಪಾಪದ ಕೊಡ ತುಂಬಿದಾಗ ಆದಾಯ ತೆರಿಗೆ ಅಧಿಕಾರಿಗಳು ದಾಳಿ ಮಾಡಿ, ಕೋಟಿಗಳನ್ನು ಬಂಧಮುಕ್ತಗೊಳಿಸಿ ಬೆಳಕಿಗೆ ತರುತ್ತಾರೆ’.

‘ಕಪ್ಪುಕೋಟಿಗಳ ಕಷ್ಟ ಯಾರಿಗೂ ಬೇಡ. ಕತ್ತಲಿನಲ್ಲಿ ನರಳುತ್ತಿರುವ ಅದೆಷ್ಟು ಕೋಟಿಗಳು ಬೆಳಕಿಗೆ ಬರಲು ಹಾತೊರೆಯುತ್ತಿವೆಯೋ ಅಯ್ಯೋ ಪಾಪ!’ ಅನು ಸಂಕಟಪಟ್ಟಳು.

ಸಂಗತ

ಬಡತನ: ಕನಸಿನ ಅಪಹರಣಕಾರ

ಬದುಕಿನ ಸಿರಿತನದ ಹಣರಹಿತ ಮಗ್ಗುಲು ನಮಗೆ ಕಾಣಬೇಕು

● ಬಿ.ಎಸ್.ಭಗವಾನ್

ಬಡತನವೆಂದರೆ ವ್ಯಕ್ತಿಯು ದುಡಿಮೆಯಿಂದ ತನ್ನ ಮೂಲ ಅಗತ್ಯಗಳನ್ನು ಭರಿಸುವಷ್ಟು ಹಣ ಗಳಿಸಲು ಆಗದೇ ಇರುವುದು. ವಾಸಿಸಲು ತಕ್ಕ ಮನೆ, ಶುದ್ಧ ನೀರು ಮತ್ತು ಆರೋಗ್ಯಯುತ ಆಹಾರ, ಶಿಕ್ಷಣ ಸೌಲಭ್ಯ, ವೈದ್ಯಕೀಯ ಸೌಕರ್ಯ ಇವುಗಳಿಗೆ ಸಂಬಂಧಿಸಿದಂತೆ ಇರುವ ಕೊರತೆಗಳು ಬಡತನದ ಮುಖ್ಯ ಮಜಲುಗಳು. ಶಕ್ತಿಹೀನತೆ ಮತ್ತು ಧ್ವನಿಹೀನತೆಯು ಗರೀಬರನ್ನು ಕಾಡುವ ಗಂಭೀರ ನ್ಯೂನತೆಗಳು. ಶಪಿಸಬೇಕಾದದ್ದು ಬಡತನವನ್ನಲ್ಲ, ಕೊರತೆಯನ್ನು.

ಬಡತನ ಸ್ವಾಭಾವಿಕವಲ್ಲ, ಮನುಷ್ಯಕೃತ ಎಂದರು ನೆಲ್ಸನ್ ಮಂಡೇಲಾ. ಜನಸಂಖ್ಯೆಯ ಏರಿಕೆಯು ದೇಶದ ಸಂಪನ್ಮೂಲಗಳು ಮತ್ತು ಆಯವ್ಯಯದ ಮೇಲೆ ಒತ್ತಡ ಹೇರುತ್ತದೆ. ಬಡತನವನ್ನು ಕ್ರಾಂತಿ ಮತ್ತು ಅಪರಾಧದ ಜನಕ ಎಂದು ಅರಿಸ್ಟಾಟಲ್ ವಿಶ್ಲೇಷಿಸಿದರು. ಹವಾಮಾನ ಬದಲಾವಣೆಯಿಂದ ಮುಂದಿನ ದಶಕದಲ್ಲಿ 10 ಕೋಟಿಗೂ ಅಧಿಕ ಜನ ಕಡುಬಡತನಕ್ಕೆ ಗುರಿಯಾಗುವ ಆತಂಕವಿದೆ. ಏತನ್ಮಧ್ಯೆ, ಶೇಕಡ ಶೂನ್ಯದಷ್ಟು ಬಡತನದ ದೇಶ ಐಸ್‌ಲ್ಯಾಂಡ್ ಎಂದು ವಿಶ್ವಬ್ಯಾಂಕ್ ಸಾರಿದೆ!

ಬಡತನಕ್ಕೆ ಒಂದು ನಿರ್ದಿಷ್ಟ ವ್ಯಾಖ್ಯಾನವಿಲ್ಲ. ಒಬ್ಬ ವ್ಯಕ್ತಿ ತನ್ನ ಅಪೇಕ್ಷೆಯಂತೆ ಏನನ್ನೂ ಮಾಡಲಾಗದ ಸ್ಥಿತಿಯೇ ಬಡತನ ಎನ್ನಬಹುದು. ಬಡತನವು ವ್ಯಕ್ತಿಗತ ಸಾಮಾಜಿಕ ಜೀವನವನ್ನೇ ಕಸಿಯುವಷ್ಟು ಘೋರ. 1992ರಲ್ಲಿ ವಿಶ್ವಸಂಸ್ಥೆಯು ಅಕ್ಟೋಬರ್ 17ನೇ ತೇದಿಯನ್ನು ‘ಅಂತರರಾಷ್ಟ್ರೀಯ ಬಡತನ ನಿರ್ಮೂಲನ ದಿನ’ ಎಂದು ಘೋಷಿಸಿದ್ದು ಬಹು ಮಹತ್ವದ್ದಾಗಿದೆ. ವರಮಾನ ಹಾಗೂ ಉತ್ಪಾದಕ ಸಂಪನ್ಮೂಲಗಳಿಗೂ ಹೆಚ್ಚಾಗಿ ಸುಸ್ಥಿರ ಜೀವನೋಪಾಯವನ್ನು ಪರಿಗಣಿಸಬೇಕಿದೆ. ಎಲ್ಲರ ಕಿಸೆ ತುಂಬಿಸುವುದರಿಂದ ಬಡತನ ನಿವಾರಣೆಯಾಗದು. ಅನ್ಯೋನ್ಯ ಸಂಬಂಧ, ಕುಟುಂಬ, ಗೆಳೆತನ, ಪರಸ್ಪರ ಪ್ರೀತಿ, ವಿಶ್ವಾಸವು ಐಹಿಕ ಸವಲತ್ತುಗಳಿಗಿಂತಲೂ ನಮ್ಮನ್ನು ಶ್ರೀಮಂತರನ್ನಾಗಿಸುತ್ತವೆ. ದುಡ್ಡು ತೆತ್ತು ಖರೀದಿಸಿಯೇ ಉಳ್ಳವರಾಗಬೇಕಿಲ್ಲ. ಬದುಕಿನ ಸಿರಿತನದ ಹಣರಹಿತ ಮಗ್ಗುಲು ನಮಗೆ ಕಾಣಬೇಕು.

ನಿರ್ಗತಿ ಒಂದು ಮನಃಸ್ಥಿತಿ. ಕನ್ನಡದ ರತ್ನ ಜಿ.ಪಿ. ರಾಜರತ್ನಂ ಅವರ ‘ರತ್ನನ ಪದಗಳು’ ಕೃತಿಯಲ್ಲಿ ಬರುವ ‘ಇಳ್ಕೊಳ್ಳೋಕೊಂದೂರು ತಲೆಮ್ಯಾಗೆ ಒಂದ್ ಸೂರು…’ ಸರಳತೆಯಲ್ಲಿ ಹುದುಗಿರುವ ಸಮೃದ್ಧಿಯನ್ನು ಪ್ರಚುರಪಡಿಸುತ್ತದೆ. ಬಡತನದಿಂದ ಹೊರಬರಲು ಶಿಕ್ಷಣವೇ ಬ್ರಹ್ಮಾಸ್ತ್ರ. ಬಡತನವೆಂದರೆ ಹಣದ ಅಭಾವವಲ್ಲ, ಜ್ಞಾನ, ಕೌಶಲದ ಅಭಾವ.

ದೊಡ್ಡ ನೌಕರಿ, ಅಂತಸ್ತು, ಅಧಿಕಾರವೇ ಸಿರಿವಂತರನ್ನಾಗಿಸುವ ಸಂಗತಿಗಳಾಗಬೇಕಿಲ್ಲ. ಸಂಕಲ್ಪಿಸಿದರೆ ವಿದ್ಯುತ್ ಪರಿಕರ ದುರಸ್ತಿಯವ, ಬಡಗಿ, ಪ್ಲಂಬರ್, ವಾಹನ ಮೆಕ್ಯಾನಿಕ್, ಪೇಂಟರ್, ಕಟ್ಟಡ ಕಾರ್ಮಿಕರಂತಹವರಿಂದ ಕಲಿತು ಉಳ್ಳವರಾಗುವ ಅವಕಾಶಗಳು ಇಲ್ಲವೇ? ಅಂದಹಾಗೆ ಶಿಕ್ಷಣವು ಕೈತುಂಬ ಸಂಬಳದ ಉದ್ಯೋಗಕ್ಕಲ್ಲ, ಉತ್ತಮ ಬದುಕಿಗೆ. ಬ್ರಿಟನ್ನಿನ ಪ್ರಧಾನಿಯಾಗಿದ್ದ ಮಾರ್ಗರೆಟ್ ಥ್ಯಾಚರ್ ‘ಬಡತನ ಎನ್ನುವುದೇ ಹುಸಿ. ಅದು ವ್ಯಕ್ತಿತ್ವದ ಲೋಪ’ ಎನ್ನುತ್ತಿದ್ದರು.

ಬಡತನ ಇಲ್ಲದಿರುವುದು ಸವಲತ್ತಲ್ಲ, ಅದೊಂದು ಹಕ್ಕು. ಅಪೌಷ್ಟಿಕತೆ, ಅನಾರೋಗ್ಯ, ನೈಸರ್ಗಿಕ ಪ್ರಕೋಪ, ಲಿಂಗತ್ವ ಭೇದ, ನಿರಕ್ಷರತೆ, ಅಂಗವೈಕಲ್ಯ… ಇವು ಬಡತನವನ್ನು ಪೋಷಿಸುವ ನ್ಯೂನತೆಗಳು. 2012ರಲ್ಲಿ ‘ಟೆಕ್ನೊಸರ್ವ್’ ಇತರೆ ಮೊಬೈಲ್ ಸೇವಾ ಸಂಸ್ಥೆಗಳೊಂದಿಗೆ ಜೊತೆಯಾಗಿ ಜಾಗತಿಕವಾಗಿ ‘ಕನೆಕ್ಟೆಡ್ ಫಾರ್ಮರ್ ಅಲಯನ್ಸ್’ (ಸಿಎಫ್‌ಸಿ) ಅಂತರರಾಷ್ಟ್ರೀಯ ಜಾಲ ಪ್ರಾರಂಭಿಸಿತು. ಲಕ್ಷಾಂತರ ಸಣ್ಣ ರೈತರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ತಂತ್ರಜ್ಞಾನವು ಬಡತನ ನಿವಾರಣೆಗೆ ನೀಡಿರುವ ಕೊಡುಗೆ ದೊಡ್ಡದು. ಕೃಷಿ ಮಾರ್ಗದರ್ಶನ, ಬೆಳೆ ಇಳುವರಿಯ ಗುಣಮಟ್ಟ, ಬೆಲೆ, ಮಾರುಕಟ್ಟೆ ಕುರಿತ ಮಾಹಿತಿ ವಿನಿಮಯವು ಮಿಂಚಿನ ವೇಗದಲ್ಲಿ ಸಾಧ್ಯವಾಗಿದೆ. ದೂರದ ಊರಿನಲ್ಲಿದ್ದರೂ ಮೊಬೈಲ್ ಒತ್ತಿ ತಮ್ಮ ಹೊಲಕ್ಕೆ ನೀರು ಹಾಯಿಸಬಹುದು. ರೈತರಿಗೆ ನಗದುರಹಿತ ವಹಿವಾಟಂತೂ ವರಸದೃಶವಾಗಿದೆ. ರೈತರು ತಮ್ಮ ಜಾನುವಾರುಗಳ ಆರೋಗ್ಯಕ್ಕೆ ಕುಳಿತಲ್ಲೇ ಅಗತ್ಯ ಸಲಹೆ ಪಡೆಯಬಲ್ಲರು. ಆಫ್ರಿಕಾದ ದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಸೊಮಾಲಿಯಾದಲ್ಲಿ ನಾಗರಿಕ ಯುದ್ಧವೇ ನಿರ್ಗತಿಕತನಕ್ಕೆ ಕಾರಣವಾಯಿತು.



ಆಯವ್ಯಯದ ಪಟ್ಟಿಯಲ್ಲಿ ಜನಕಲ್ಯಾಣ ಇರಬೇಕೇ ವಿನಾ ಸಮರವಲ್ಲ! ಮಹಾತ್ಮ ಗಾಂಧಿ ‘ಬಡತನವು ಹಿಂಸೆಯ ಅತ್ಯುಗ್ರ ರೂಪ’ ಎಂದರು. ಬಡತನಜನ್ಯ ನಿತ್ರಾಣವು ಕಸುಬನ್ನೂ ಮಾಡಗೊಡದು. ವಿಶ್ವಸಂಸ್ಥೆಗೆ 2030ರ ವೇಳೆಗೆ ಜಗತ್ತಿನ ಸರ್ವರನ್ನೂ ಬಡತನದ ಎಲ್ಲ ರೂಪಗಳಿಂದಲೂ ಮುಕ್ತಗೊಳಿಸುವ ಪ್ರಮುಖ ಗುರಿಯಿದೆ. ಹಾಗೆಯೇ ಜಗತ್ತಿನ ಎಲ್ಲ ಪ್ರಜೆಗಳಿಗೂ ಬಡತನ ನಿರ್ಮೂಲನದ ಬಗ್ಗೆ ಬದ್ಧತೆ ಇರಬೇಕು. ಪರಿಸರ ಸಂರಕ್ಷಣೆ, ಮಹಿಳಾ ಸಬಲೀಕರಣಕ್ಕೆ ಒತ್ತು, ಬಾಲ್ಯ ವಿವಾಹಕ್ಕೆ ತಡೆ, ಸಂಪನ್ಮೂಲಗಳ ಹಿತಮಿತ ಬಳಕೆ ಜೊತೆಗೆ ಇವೆಲ್ಲಕ್ಕಿಂತಲೂ ಮುಖ್ಯವಾಗಿ ಸರಳ ಜೀವನವು ಬಡತನವನ್ನು ಸಂಹರಿಸುವ ದಿವ್ಯಾಸ್ತ್ರ.

ಭಾರತದಲ್ಲಿ ಕನಿಷ್ಠ 10 ಕೋಟಿ ಮಂದಿ ಪ್ರತಿದಿನ ಉಪವಾಸ ಮಲಗುತ್ತಾರೆ. ಹಾಗಾಗಿ, ಶ್ರಮವಹಿಸಿ ಬೆಳೆದ ಆಹಾರಪದಾರ್ಥ ಯಾವುದೇ ಕಾರಣಕ್ಕೆ ಪೋಲಾಗದಂತೆ ನಿಗಾ ವಹಿಸಬೇಕು. ಮಾನವನ ಇತಿಹಾಸದಲ್ಲೇ ಸಮರಗಳಿಂದ ಗೆದ್ದು ಸುಖ, ಶಾಂತಿ ಗಿಟ್ಟಿಸಿಕೊಂಡ ನಿದರ್ಶನವಿಲ್ಲ. ಭಾಗಿಯಾದ ದೇಶಗಳಿಗೆಲ್ಲ ಸಂಕಷ್ಟಗಳೇ. ಹಾಗಾಗಿ, ಆಗಬೇಕಾದ ಸಮರವು ಮನುಷ್ಯ ಮನುಷ್ಯರ ನಡುವೆಯಲ್ಲ, ಮನುಷ್ಯ ಮತ್ತು ಬಡತನದ ನಡುವೆ.

ವಾಚಕರ ವಾಣಿ

ಎಪಿಎಲ್ ಕಾರ್ಡ್‌ದಾರರ ಕಡೆಗಣನೆ?

ಪ್ರತಿ ತಿಂಗಳು ಎಪಿಎಲ್ ಕಾರ್ಡ್‌ದಾರರಿಗೆ ನೀಡುತ್ತಿದ್ದ 10 ಕೆ.ಜಿ. ಪಡಿತರವು ಸೆಪ್ಟೆಂಬರ್ ತಿಂಗಳಿನಿಂದ ಮಾಯವಾಗಿದೆ. ಇಷ್ಟು ವರ್ಷ ನೀಡುತ್ತಿದ್ದ ಪಡಿತರವನ್ನು ಈಗ ಇದ್ದಕ್ಕಿದ್ದಂತೆ ನಿಲ್ಲಿಸಿರುವುದಕ್ಕೆ ಕಾರಣ ತಿಳಿಯುತ್ತಿಲ್ಲ. ಪಡಿತರ ಕೇಂದ್ರಕ್ಕೆ ಹೋಗಿ ಕೇಳಿದರೆ, ‘ನಿಮಗೆ ಬಂದಿಲ್ಲ, ಸ್ಟಾಕ್ ಇಲ್ಲ’ ಎಂದು ಹೇಳುತ್ತಾರೆ. ಎಪಿಎಲ್ ಕಾರ್ಡ್‌ದಾರರು ಒಂದು ಕೆ.ಜಿ.ಗೆ ₹15 ಕೊಟ್ಟು ಪಡೆಯುತ್ತಿದ್ದರೂ ಪಡಿತರ ಇಲ್ಲ ಎಂದರೆ ಹೇಗೆ? ಅದರ ಬದಲು ಎಪಿಎಲ್ ಕಾರ್ಡ್‌ದಾರರಿಗೆ ಪಡಿತರ ಇಲ್ಲ ಎಂದು ಘೋಷಿಸಿಬಿಟ್ಟರೆ ಅಲೆಯುವುದಾದರೂ ತಪ್ಪುತ್ತದೆ. ಸಂಬಂಧಪಟ್ಟವರು ಇತ್ತ ಗಮನಹರಿಸಿ ಸರಿಯಾದ ಮಾಹಿತಿ ನೀಡಲಿ.

ಪುಷ್ಪಲತಾ, ಮಂಡ್ಯ

ಸಾಂಸ್ಕೃತಿಕ ಸಂಸ್ಥೆಗಳಿಗೆ ನೇಮಕ: ವಿಳಂಬ ಸಲ್ಲ

ಸಿದ್ದರಾಮಯ್ಯ ನೇತೃತ್ವದಲ್ಲಿ ಈಗಿನ ಸರ್ಕಾರ ರಚನೆಯಾಗಿ ಐದು ತಿಂಗಳಾಗಿದೆ. ಆಳುವವರಿಗೆ ಎಲ್ಲರಿಗೂ ಅವರದೇ ಆದ ಆದ್ಯತೆಗಳು ಇರುತ್ತವೆ. ಸಂಪುಟ ರಚನೆ, ಖಾತೆಗಳ ಹಂಚಿಕೆ, ತೃಪ್ತ- ಅತೃಪ್ತರ ನಡುವೆ ಹೊಂದಾಣಿಕೆ, ಚುನಾವಣಾ ಆಶ್ವಾಸನೆಗಳ ಪೂರೈಕೆಯಂತಹ ಅನೇಕ ವಿಷಯಗಳ ಬಗ್ಗೆ ಮೊದಲು ಗಮನಹರಿಸುವುದು ಸಹಜ. ಇಂದಿನ ಸರ್ಕಾರ ತಾನು ನೀಡಿದ ಗ್ಯಾರಂಟಿ ಭಾಗ್ಯಗಳಿಗೆ ಒಂದು ನಿರ್ಣಾಯಕ ಕಾರ್ಯಯೋಜನೆ ರೂಪಿಸುವ ಒತ್ತಡ ನಿವಾರಿಸಿಕೊಂಡು, ಸ್ವಲ್ಪ ಸುಧಾರಿಸಿಕೊಂಡು ಮುಂದೆ ಸಾಗಬಹುದು ಎನ್ನುವಷ್ಟರಲ್ಲಿ ಮಳೆಯ ಅಭಾವ, ಕಾವೇರಿ ಸಮಸ್ಯೆ, ಬರಗಾಲದ ಛಾಯೆ ಎದುರು ನಿಂತಿತು. ಬರದ ನಡುವೆಯೇ ವೈಭವದ ದಸರೆಗೂ ಚಾಲನೆ ದೊರಕಿತು. ಈಗ ‘ಕರ್ನಾಟಕ’ ನಾಮಕರಣದ ಸುವರ್ಣ ಉತ್ಸವಕ್ಕೆ ಸರ್ಕಾರ ಮುಂದಾಗಿದೆ.

ಈ ಬಗ್ಗೆ ಮುಖ್ಯಮಂತ್ರಿ, ಸಂಸ್ಕೃತಿ ಇಲಾಖೆಯ ಸಚಿವರು ಮಾತನಾಡಿದ್ದಾರೆ. ಸಚಿವರು ಈಗಾಗಲೇ ನಾಲ್ಕು ವಲಯಗಳ ಮಟ್ಟದಲ್ಲಿ ಸಾಹಿತಿ, ಕಲಾವಿದರು, ವಿವಿಧ ಕ್ಷೇತ್ರದ ಗಣ್ಯರೊಂದಿಗೆ ಸಮಾಲೋಚನೆ ನಡೆಸಿ ಸಲಹೆ ಪಡೆದಿದ್ದಾರೆ. ಬಹುಶಃ ಇಲಾಖೆಯ ಅಧಿಕಾರಿಗಳ ಹಂತದಲ್ಲಿ ಯೋಜನೆಯೂ ಸಿದ್ಧಗೊಂಡಿರಬಹುದು. ಪ್ರತಿ ವಿಭಾಗದ ಸಭೆಯಲ್ಲಿ ಸಚಿವರಿಗೆ ಎದುರಾದ ಒಂದು ಸಾಮಾನ್ಯ ಪ್ರಶ್ನೆಯೆಂದರೆ, ಅಕಾಡೆಮಿಗಳು, ಪ್ರಾಧಿಕಾರ, ರಂಗಾಯಣಗಳಿಗೆ ನೇಮಕಾತಿ ಯಾವಾಗ ಮಾಡುತ್ತೀರಿ ಎನ್ನುವುದು. ಅದಕ್ಕೆ ಸಚಿವರ ಸಿದ್ಧ ಉತ್ತರ, ‘ಒಂದು ಸಮಿತಿ ಮಾಡುತ್ತೇವೆ. ಸಮಿತಿಯ ಶಿಫಾರಸು ಬಂದಮೇಲೆ ತೀರ್ಮಾನಿಸುತ್ತೇವೆ. ಪ್ರಕ್ರಿಯೆ ಶುರುವಾಗಿದೆ…’ ನೇಮಕ ಆಗಿದ್ದಿದ್ದರೆ, ಕರ್ನಾಟಕ ನಾಮಕರಣದ ಸುವರ್ಣ ಉತ್ಸವವನ್ನು ರಾಜ್ಯದ ಈ ಎಲ್ಲಾ ಸಾಂಸ್ಕೃತಿಕ ಸಂಸ್ಥೆಗಳು ಸೇರಿ ಅರ್ಥಪೂರ್ಣವಾಗಿ ಮಾಡಲು ಅವಕಾಶವಿತ್ತು, ಅಲ್ಲವೇ?

ಶಶಿಧರ ಭಾರಿಘಾಟ್, ಬೆಂಗಳೂರು

ಹಿಂಜರಿಕೆ ಏಕೆ?

ಫಾರ್ಟಿ ಪರ್ಸೆಂಟ್ ಕಮಿಷನ್
ಸರ್ಕಾರವೆಂದು ದೂರಿದ್ದರು
ಹಿಂದಿನ ಸರ್ಕಾರವನು
ಗುತ್ತಿಗೆದಾರರ ಸಂಘದ ಅಧ್ಯಕ್ಷರು,
ಈ ಸರ್ಕಾರದಲೂ ಭ್ರಷ್ಟಾಚಾರವಿದೆ
ಎಂಬುದನೇಕೊ ಅವರು ತಡವಾಗಿ ಹೇಳುತಿಹರು,
ಭ್ರಷ್ಟತೆ ನಿಂತಿಲ್ಲ, ಸರಾಗವಾಗಿ ಮುಂದುವರಿದಿದೆ
ಎಂಬುದನು ಜನರೇ ಅರಿಯಬಲ್ಲರು,
ಇಂದಿನ ಸರ್ಕಾರದ ಪರ್ಸೆಂಟೇಜ್
ಎಷ್ಟೆಂದು ಮಾತ್ರ ಹೇಳಲು
ಹಿಂಜರಿಯುತ್ತಿರುವಂತಿದೆ ಗುತ್ತಿಗೆದಾರರ
ಸಂಘದ ಸರದಾರರ ನಡೆ!

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಎಲ್ಲರ ಸಂವೇದನಾಶೀಲತೆಗೆ ಸವಾಲು

ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ಇದೇ 7ರಂದು ಬೃಹತ್ ಪ್ರಮಾಣದಲ್ಲಿ ಹಠಾತ್ ದಾಳಿ ನಡೆಸಿ 1,300ಕ್ಕೂ ಹೆಚ್ಚು ಜನರನ್ನು ಕೊಂದು, ವಿವಿಧ ರಾಷ್ಟ್ರಗಳ ಇನ್ನೂರಕ್ಕೂ ಹೆಚ್ಚು ವ್ಯಕ್ತಿಗಳನ್ನು ಒತ್ತೆಯಾಗಿ ಇರಿಸಿಕೊಂಡಿದ್ದು ವಿಶ್ವವನ್ನೇ ತಲ್ಲಣಗೊಳಿಸಿತು. ಈಗ ಪ್ರತೀಕಾರದ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೆ 2,800ಕ್ಕೂ ಹೆಚ್ಚು ಜನ ಮೃತರಾಗಿ ಸುಮಾರು ಹತ್ತು ಸಾವಿರ ಜನ ಗಾಯಗೊಂಡಿದ್ದಾರೆ. ಅದಾದ ನಂತರ ಗಾಜಾದ ಆಸ್ಪತ್ರೆಯಲ್ಲಿ ಆಶ್ರಯ ಪಡೆದಿದ್ದ ಐನೂರಕ್ಕೂ ಹೆಚ್ಚು ಮಂದಿ ಸಿಡಿಮದ್ದು ಸ್ಫೋಟಕ್ಕೆ ಬಲಿಯಾಗಿದ್ದಾರೆ. ಒಂದು ಧರ್ಮ, ಮತಕ್ಕೆ ಮೂಲ ದೇಶವೊಂದು ಇರಬೇಕೆ? ಝಿಯಾನಿಸ್ಟ್ ಚಿಂತನೆ ಯಹೂದಿಗಳಿಗೆ ಅಂಥದ್ದೊಂದು ರಾಷ್ಟ್ರ ಬೇಕೆಂದು ಪ್ರತಿಪಾದಿಸಿತು. ಆದರೆ ಆ ಧರ್ಮದ ಸನಾತನಿಗಳೂ (ಅಲ್ಟ್ರಾ ಆರ್ಥೊಡಾಕ್ಸ್) ಹಾಗಿದೆ ಎಂದು ಒಪ್ಪುವುದಿಲ್ಲ. ವಿಪರ್ಯಾಸವೆಂದರೆ, ಸುದೀರ್ಘ ಕಾಲ ಇಸ್ರೇಲ್‌ನ ಪ್ರಧಾನಿಯಾಗಿರುವ ನೆತನ್ಯಾಹು ಒಂದು ಹಂತದಲ್ಲಿ ಪ್ಯಾಲೆಸ್ಟೀನ್ ರಾಷ್ಟ್ರದ ಸ್ಥಾಪನೆಯನ್ನು ವಿರೋಧಿಸುತ್ತ ‘ಈಗಾಗಲೇ ಆ ಧರ್ಮಕ್ಕೆ ಒಂದು ದೇಶ ಇದೆಯಲ್ಲ’ ಎಂದಿದ್ದರು! ವಿವಿಧ ದೇಶಗಳಿಂದ ಯಹೂದಿಗಳು ಇಸ್ರೇಲ್‌ಗೆ ಹಿಂತಿರುಗಿದ ಮೇಲೆ ಅಲ್ಲಿದ್ದ ಬೇರೆ ಜನಾಂಗದವರನ್ನು ಹತ್ತಿಕ್ಕಲು ಆರಂಭಿಸಿದ್ದು ಸಮಸ್ಯೆ ಈಗಿನಷ್ಟು ಗಂಭೀರ ಸ್ಥಿತಿ ತಲುಪಲು ಕಾರಣವಾಗಿದೆ.

ಇನ್ನೊಂದೆಡೆ, ಪ್ಯಾಲೆಸ್ಟೀನ್ ಅಥಾರಿಟಿ (ಪಿಎಲ್‌ಒದ ಮುಂದುವರಿದ ರೂಪ) ಗುಂಪುಗಾರಿಕೆಗೆ ತುತ್ತಾಗಿ ದುರ್ಬಲಗೊಂಡಿದೆ. ಹಮಾಸ್ ಮತ್ತಿತರ ಗುಂಪುಗಳು ಆ ‘ಸರ್ಕಾರ’ದ ಮಾತು ಕೇಳದೆ ಆಗಾಗ ರಾಕೆಟ್ ದಾಳಿ ನಡೆಸುತ್ತಲೇ ಇರುತ್ತವೆ. ಅಮೆರಿಕದಂಥ ದೇಶಗಳು ಇಸ್ರೇಲ್‌ಗೆ ಬೆಂಬಲ ನೀಡುವಾಗ ಅದು ಯುದ್ಧದ ನಿಯಮಗಳನ್ನು ಪಾಲಿಸದಾಗ ಸುಮ್ಮನಿರುತ್ತವೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸ್ಥಾನ ಬಯಸುತ್ತಿರುವ ಭಾರತ ಕೂಡ ಈಚೆಗೆ ಇದೇ ಹಾದಿ ಹಿಡಿದಿದೆ. ವಿಶ್ವಸಂಸ್ಥೆಯ ಸದಸ್ಯರಲ್ಲಿ ಎರಡೂ ದೇಶಗಳಿಗೆ ಮಾನ್ಯತೆ ನೀಡಿದ ದೇಶಗಳಿವೆ. ಆದರೆ ಸಮಸ್ಯೆಯ ಇತ್ಯರ್ಥಕ್ಕೆ ಮಾತುಕತೆ ಮುಂದುವರಿದಿಲ್ಲ. ನಾವು ನಮ್ಮ ದೇಶದ, ರಾಜ್ಯದ ಜನ ಇಸ್ರೇಲ್‌ನಿಂದ ಸುರಕ್ಷಿತವಾಗಿ ಹಿಂತಿರುಗಿದ್ದಾರೆ ಎಂದು ಈ ದುರಂತದ ಪರಿಸ್ಥಿತಿಯ ಬಗೆಗೆ ಉಪೇಕ್ಷೆ ತಾಳಬಾರದು. ಗಾಜಾ ಪಟ್ಟಿಯಲ್ಲಿ ಹಮಾಸನ್ನು ಇಸ್ರೇಲ್ ನಾಶಪಡಿಸಿದ ಮೇಲೆ ಅಲ್ಲಿಯೇ ಇರುವುದೇ ಅಥವಾ ಹಿಂತಿರುಗುವುದೇ (ಹಿಂದೆ ಎರಡು ಬಾರಿ ಹಾಗಾಗಿದೆ) ಎಂಬುದನ್ನು ಕಾದು ನೋಡಬೇಕಾಗಿದೆ. ಒಟ್ಟಿನಲ್ಲಿ ಇದು ಎಲ್ಲರ ಸಂವೇದನಾಶೀಲತೆಗೆ ಒಂದು ಸವಾಲು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಲಿಂಗ ವಿವಾಹ

ಮಾನ್ಯತೆ ಬದಲು ಮಮತೆಯ ಹೊನಲು

• ಜಯಸಿಂಹ ಆರ್., ಸುಕೃತ ಎಸ್.



'ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಲು ನಮ್ಮ ಕಾನೂನಿನಲ್ಲಿ ಅವಕಾಶವಿಲ್ಲ' ಎಂದು ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಸಂವಿಧಾನ ಪೀಠವು ಮಂಗಳವಾರವಷ್ಟೇ 3:2ರ ಬಹುಮತದ ತೀರ್ಪು ನೀಡಿದೆ. ಆದರೆ, ಸಲಿಂಗ ಜೋಡಿಗಳು ಒಟ್ಟಿಗೇ ಬದುಕುವುದನ್ನು ಯಾವುದೇ ಕಾನೂನು ನಿರ್ಬಂಧಿಸುವುದಿಲ್ಲ ಎಂದು ಈ ಪೀಠದಲ್ಲಿದ್ದ ಐವರು ನ್ಯಾಯಮೂರ್ತಿಗಳೂ ಒಪ್ಪಿಕೊಂಡಿದ್ದಾರೆ. ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ಇಲ್ಲದೇ ಇರುವುದು ದೊಡ್ಡ ತೊಡಕು ಎಂದು ಐವರು ನ್ಯಾಯಮೂರ್ತಿಗಳೂ ಅಭಿಪ್ರಾಯಪಟ್ಟಿದ್ದಾರೆ. ಇವುಗಳ ಜತೆಯಲ್ಲಿ ದೇಶದ ಎಲ್ಲಾ ನಾಗರಿಕರಿಗೆ ದತ್ತವಾಗಿರುವ ಹಕ್ಕುಗಳು ಸಲಿಂಗ ಜೋಡಿಗಳಿಗೂ ಅನ್ವಯವಾಗುತ್ತವೆ, ಅವುಗಳಿಂದ ಅವರು ವಂಚಿತರಾಗಬಾರದು ಎಂಬ ಅಭಿಪ್ರಾಯವೂ ಈ ತೀರ್ಪುಗಳಲ್ಲಿ ಸ್ಪಷ್ಟವಾಗಿದೆ.

ಸಲಿಂಗ ವಿವಾಹ, ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳು, ವಿಶೇಷ ವಿವಾಹ ಕಾಯ್ದೆ ಸೇರಿದಂತೆ 20 ಅಂಶಗಳ ಕುರಿತಾದ 20 ಅರ್ಜಿಗಳು ಈ ಪೀಠದ ಮುಂದೆ ಇತ್ತು. ಈ ಸಂಬಂಧ 10 ತಿಂಗಳ ದೀರ್ಘ ವಿಚಾರಣೆಯನ್ನು ಪೀಠವು ನಡೆಸಿತ್ತು. ಈ ಎಲ್ಲಾ ಅರ್ಜಿಗಳಿಗೆ ಸಂಬಂಧಿಸಿದಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು 247 ಪುಟಗಳ ದೀರ್ಘ ತೀರ್ಪನ್ನು ನೀಡಿದ್ದಾರೆ. ನ್ಯಾಯಮೂರ್ತಿ ಎಸ್.ಕೆ.ಕೌಲ್ ಅವರು ಮುಖ್ಯನ್ಯಾಯಮೂರ್ತಿಯ ತೀರ್ಪನ್ನೇ ಒಪ್ಪಿಕೊಂಡು ಪ್ರತ್ಯೇಕ ತೀರ್ಪು ನೀಡಿದ್ದಾರೆ. ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಬೇಕು ಎಂದು ಈ ಇಬ್ಬರೂ ತಮ್ಮ ತೀರ್ಪಿನಲ್ಲಿ ಹೇಳಿದ್ದರು. ಆದರೆ ಇದಕ್ಕೆ ಅಸಮ್ಮತಿ ಸೂಚಿಸಿ ನ್ಯಾಯಮೂರ್ತಿ ರವೀಂದ್ರ ಭಟ್ ಮತ್ತು ಹಿಮಾ ಕೊಹ್ಲಿ ಅವರು ಪ್ರತ್ಯೇಕ ತೀರ್ಪು ನೀಡಿದ್ದರು. ಈ ಮೂರನೇ ತೀರ್ಪನ್ನು ಬೆಂಬಲಿಸಿ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರು ನಾಲ್ಕನೇ ಪ್ರತ್ಯೇಕ ತೀರ್ಪು ನೀಡಿದ್ದರು.

ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಬೇಕು ಎಂದು ಇಬ್ಬರು ಹೇಳಿದರೆ, ಮೂವರು ಈಗಿನ ಸಂವಿಧಾನ ಚೌಕಟ್ಟಿನಲ್ಲಿ ಅದಕ್ಕೆ ಮಾನ್ಯತೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಬಹುಮತದ ತೀರ್ಪಿನ ಆಧಾರದಲ್ಲಿ, 'ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲಾಗುವುದಿಲ್ಲ' ಎಂಬುದು ಕಾರ್ಯಗತಗೊಳಿಸಬೇಕಾದ ತೀರ್ಪಾಯಿತು.

ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ಇಲ್ಲದೇ ಇರುವ ಕಾರಣಕ್ಕೇ ಸಲಿಂಗ ಜೋಡಿಗಳು ತಾರತಮ್ಯಕ್ಕೆ ಗುರಿಯಾಗಿದ್ದಾರೆ. ಲಿಂಗದ ಆಧಾರದಲ್ಲೂ ತಾರತಮ್ಯ ಮಾಡಬಾರದು ಎಂದು ಸಂವಿಧಾನ ಹೇಳುತ್ತದೆ. ಆದರೆ ಸಲಿಂಗ ಜೋಡಿಗಳು ಮತ್ತು ಲಿಂಗ ಪರಿವರ್ತಿತರು ತಮ್ಮ ಲಿಂಗತ್ವ ಒಲವಿನ ಕಾರಣಕ್ಕೇ ತಾರತಮ್ಯವನ್ನು ಎದುರಿಸಬೇಕಾಗುತ್ತದೆ. ಜತೆಗೆ ಅರ್ಹ ಸೌಕರ್ಯಗಳಿಂದ ವಂಚಿತರಾಗಬೇಕಾಗುತ್ತದೆ. ಈ ವಿಚಾರದಲ್ಲಿ ಶಾಸಕಾಂಗವು ಜಡವಾಗಿದ್ದ ಕಾರಣಕ್ಕೇ ಈ ಸಮಸ್ಯೆ ದೊಡ್ಡದಾಗಿದೆ. ಈ ತಾರತಮ್ಯ ಮತ್ತು ವಂಚಿತರಾಗುವುದನ್ನು ತಪ್ಪಿಸುವ ಹೊಣೆಗಾರಿಕೆ ಸರ್ಕಾರದ್ದು ಎಂದು ಐವರು ನ್ಯಾಯಮೂರ್ತಿಗಳೂ ಹೇಳಿದ್ದಾರೆ.



'ಸಲಿಂಗ ಸಂಬಂಧಕ್ಕೆ ಅಡ್ಡಿಯಿಲ್ಲ'

ಯಾವುದೇ ಮದುವೆಯನ್ನು ಮಾನ್ಯ ಮಾಡಬೇಕಾಗಿದ್ದು ಕಾನೂನು ರಚನೆಯ ಮೂಲಕ ಮಾತ್ರ. ಹಾಗೆಂದ ಮಾತ್ರಕ್ಕೆ ಸಲಿಂಗ ಸಂಬಂಧದಲ್ಲಿ ಇರುವವರು ಒಟ್ಟಿಗೆ ಇರಬಾರದು ಎಂದು ನಿಷೇಧ ಹೇರಬೇಕಾಗಿಲ್ಲ. ಲಿಂಗತ್ವ ಅಲ್ಪಸಂಖ್ಯಾತರು ತಮ್ಮಿಚ್ಛೆಯ ಸಂಬಂಧದಲ್ಲಿ ಇರಬಹುದು ಮತ್ತು ಅದರಂತೆ ಬದುಕನ್ನು ಸಂಭ್ರಮಿಸಬಹುದು ಎಂದು ನ್ಯಾಯಮೂರ್ತಿ ರವೀಂದ್ರ ಭಟ್ ಮತ್ತು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ನ್ಯಾಯಮೂರ್ತಿ ಪಿ.ಬಿ.ಎಸ್. ನರಸಿಂಹ ಸಹ ಇದನ್ನು ತಮ್ಮ ಪ್ರತ್ಯೇಕ ತೀರ್ಪಿನಲ್ಲಿ ಬೆಂಬಲಿಸಿದ್ದಾರೆ.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ಹಿಂದೆ ಹಲವು ತೀರ್ಪುಗಳನ್ನು ನೀಡಿದೆ. ಸಂವಿಧಾನದ 12ನೇ ವಿಧಿಯು ನೀಡುವ ಖಾಸಗಿತನದ ಹಕ್ಕು, ಆಯ್ಕೆಯ ಸ್ವಾತಂತ್ರ್ಯದ ಆಧಾರದಲ್ಲಿ ಮಾನಸಿಕ, ಭಾವನಾತ್ಮಕ ಮತ್ತು ಲೈಂಗಿಕವಾಗಿ ಸಲಿಂಗಿಗಳು ಸಂಬಂಧದಲ್ಲಿ ಇರಲು ಅವಕಾಶವಿದೆ ಎಂದು ಆ ತೀರ್ಪುಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಇಲ್ಲೂ ಆ ತೀರ್ಪುಗಳು ಅನ್ವಯವಾಗುತ್ತವೆ. ಆದರೆ ಅವು, ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಿ ಎಂದು ಆಗ್ರಹಿಸುವುದಕ್ಕೆ ಇದು ಆಸ್ಪದ ಕೊಡುವುದಿಲ್ಲ ಎಂದು ಆ ತೀರ್ಪಿನಲ್ಲಿ ಹೇಳಲಾಗಿದೆ.

ಸಲಿಂಗ ಸಂಬಂಧ ಹೊಂದಬಯಸುವವರು ಒಟ್ಟಿಗೇ ಇರಲು ಅಡ್ಡಿಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಸರ್ಕಾರದ್ದು. ಅಂತಹ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಸರ್ಕಾರ ನಿಷ್ಕ್ರಿಯವಾದರೆ ಅದು ಅನ್ಯಾಯಕ್ಕೆ ಕಾರಣವಾಗುತ್ತದೆ ಎಂದೂ ಆ ತೀರ್ಪಿನಲ್ಲಿ ವಿವರಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರೂ ತಮ್ಮ ತೀರ್ಪಿನಲ್ಲಿ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯವನ್ನು ನ್ಯಾಯಮೂರ್ತಿ ಎಸ್.ಕೆ.ಕೌಲ್ ಸಹ ಬೆಂಬಲಿಸಿದ್ದಾರೆ.

'ಉನ್ನತಮಟ್ಟದ ಸಮಿತಿ ರಚಿಸಬೇಕು'

ಲಿಂಗತ್ವ ಅಲ್ಪಸಂಖ್ಯಾತರು ಎದುರಿಸುವ ತಾರತಮ್ಯ ನಿವಾರಣೆಯನ್ನು ಕಾರ್ಯಗತಗೊಳಿಸಲು ಸರ್ಕಾರವು ಉನ್ನತಮಟ್ಟದ ಸಮಿತಿ ರಚಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ನ್ಯಾಯಮೂರ್ತಿ ಕೌಲ್ ಇದನ್ನು ಬೆಂಬಲಿಸಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರು ತಮ್ಮ ಲೈಂಗಿಕ ಅಸ್ಮಿತೆಯ ಕಾರಣಕ್ಕೇ ಸಮಾಜದಲ್ಲಿ ತಾರತಮ್ಯಕ್ಕೆ ಗುರಿಯಾಗುತ್ತಾರೆ. ಅವರು ಎದುರಿಸುವ ತಾರತಮ್ಯ ಮತ್ತು ಅವುಗಳನ್ನು ತಪ್ಪಿಸಲು ನೀತಿಮಟ್ಟದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರವು ವಿಸ್ತೃತ ಅಧ್ಯಯನ ನಡೆಸಬೇಕಾದ ಅಗತ್ಯವಿದೆ. ಇದನ್ನು ಕಾರ್ಯಗತಗೊಳಿಸಲು ಸರ್ಕಾರವು ಉನ್ನತಮಟ್ಟದ ಸಮಿತಿಯನ್ನು ರಚಿಸಬಹುದು. ಕೇಂದ್ರ ಸಂಪುಟ ಕಾರ್ಯದರ್ಶಿಯು ಈ ಸಮಿತಿಯ ಮುಖ್ಯಸ್ಥರಾಗಿರಬೇಕು ಎಂದು ನ್ಯಾಯಮೂರ್ತಿಗಳಾದ ರವೀಂದ್ರ ಭಟ್ ಮತ್ತು ಹಿಮಾ ಕೊಹ್ಲಿ ಅವರು ತಮ್ಮ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಇದನ್ನು ನ್ಯಾಯಮೂರ್ತಿ ನರಸಿಂಹ ಅವರೂ ಬೆಂಬಲಿಸಿದ್ದಾರೆ.

ಆಧಾರ: ಸುಪ್ರೀಂ ಕೋರ್ಟ್ ತೀರ್ಪು

'ಸಂವೇದನೆ ಇಲ್ಲದಿರುವುದೇ ಸಮಸ್ಯೆ'

ಕ್ವಿಯರ್ ಸಮುದಾಯದ ಬಗ್ಗೆ ಜನರಲ್ಲಿ ಸೂಕ್ಷ್ಮ ಸಂವೇದನೆ ಇಲ್ಲದಿರುವುದೇ ಈ ಸಮುದಾಯದವರು ತಮ್ಮ ಅಸ್ಮಿತೆಯನ್ನು ಮುಕ್ತ ಧ್ವನಿಯಲ್ಲಿ ಹೇಳಿಕೊಳ್ಳಲು ಸಾಧ್ಯವಾಗದಂತೆ ಮಾಡಿದೆ. ಲಿಂಗತ್ವ ಒಲವು ಮತ್ತು ಲೈಂಗಿಕ ಅಸ್ಮಿತೆಯನ್ನು ಹೇಳಿಕೊಳ್ಳುವುದೇ ಪ್ರತಿಭಟನಾತ್ಮಕ ಕ್ರಿಯೆಯಾಗಿದೆ. ಇದಕ್ಕೆ ಅತೀವವಾದ ಧೈರ್ಯ ಮತ್ತು ಶಕ್ತಿ ಬೇಕಾಗುತ್ತದೆ. ಮನೆಯವರಿಂದ ಹಿಡಿದು ಇಡೀ ಸಮಾಜದಿಂದ ಇವರು ಬಹಿಷ್ಕಾರಕ್ಕೆ ಒಳಗಾಗಬೇಕಾಗುತ್ತದೆ. ಇವರ ಮೇಲೆ ಸಾಮಾಜಿಕ ಮೌಲ್ಯವನ್ನು ಹೇರಲಾಗುತ್ತದೆ.

ಈ ಸಮುದಾಯದವರು ಮೊದಲು ದೌರ್ಜನ್ಯಕ್ಕೆ ಒಳಗಾಗುವುದು ತಮ್ಮ ಕುಟುಂಬದಿಂದಲೇ ಆಗಿದೆ. ಲಿಂಗವನ್ನು ಗುರುತಿಸಲು ಸಾಧ್ಯವಾಗದ ಸ್ಥಿತಿಯಲ್ಲಿ ಮಗು ಜನಿಸಿದಾಗ, ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಲು ಒಪ್ಪಿಕೊಳ್ಳದಿರುವುದರಿಂದ ದೌರ್ಜನ್ಯ ಆರಂಭವಾಗುತ್ತದೆ. ಬಹಳ ಸಣ್ಣ ವಯಸ್ಸಿಗೆ ಕುಟುಂಬದವರ ನಿರಾಕರಣೆಯನ್ನು ಅನುಭವಿಸಬೇಕಾಗುತ್ತದೆ. ವಿರುದ್ಧ ಲಿಂಗಿಗಳೊಂದಿಗೆ ಒತ್ತಾಯದ ಮದುವೆ, ಒತ್ತಾಯದ ಮನೋವೈಜ್ಞಾನಿಕ ಚಿಕಿತ್ಸೆ, ಪುನರ್ವಸತಿ ಕೇಂದ್ರಗಳಿಗೆ ದೂಡುವುದು... ಇಂಥ ಹಲವಾರು ದೌರ್ಜನ್ಯಗಳಿಗೆ ಒಳಗಾಗುತ್ತಾರೆ. 'ಬಾಗಿಲು ಇಲ್ಲದ ಶೌಚಾಲಯ, ವೈಯಕ್ತಿಕವಲ್ಲದ ಬದುಕು. ನನ್ನ ಜೀವಮಾನದಲ್ಲಿ ನಾನು ಜೈಲನ್ನು ಕಂಡಿಲ್ಲ. ಆದರೆ, ಈ ಪುನರ್ವಸತಿ ಕೇಂದ್ರಕ್ಕಿಂತ ಜೈಲು ಉತ್ತಮವಾಗಿರುತ್ತದೆ ಎಂಬುದನ್ನು ಕೇಳಿ ತಿಳಿದಿದ್ದೇನೆ' ಎನ್ನುತ್ತಾರೆ ಕ್ವಿಯರ್ ಸಮುದಾಯದವರು.

> ಅವರು ಎಲ್ಲರಂತೆಯೇ ಸ್ವತಂತ್ರರು. ಅವರ ಆಯ್ಕೆಗಳನ್ನು ಹೇಳಿಕೊಳ್ಳುವ ಹಕ್ಕು ಅವರಿಗಿದೆ. ಹಕ್ಕಗಳನ್ನು ಚಲಾಯಿಸುವ ಕಾರಣಕ್ಕಾಗಿ ಅವರ ಮೇಲೆ ಹಿಂಸೆ ನಡೆದರೆ ಅವರಿಗೆ ರಕ್ಷಣೆ ಕೊಡಬೇಕಾದ್ದು ಸರ್ಕಾರದ ಹೊಣೆ
>
> **ನ್ಯಾಯಮೂರ್ತಿ ಹಿಮಾ ಕೊಹ್ಲಿ, ನ್ಯಾಯಮೂರ್ತಿ ರವೀಂದ್ರ ಭಟ್**

ಸಾಮಾಜಿಕ ನೈತಿಕತೆಯ ಕಾರಣಕ್ಕಾಗಿ ಹಲವು ವಿಧಗಳಲ್ಲಿ ಈ ಸಮುದಾಯದವರು ದೌರ್ಜನ್ಯ, ತಾರತಮ್ಯವನ್ನು ಅನುಭವಿಸುತ್ತಿದ್ದಾರೆ. ಜನರಲ್ಲಿ ಈ ಸಮುದಾಯದ ಬಗ್ಗೆ ಸೂಕ್ಷ್ಮತೆ ಬೆಳೆಸಿಕೊಳ್ಳುವಂತೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳದ ಕಾರಣಕ್ಕಾಗಿಯೇ ಇಂಥ ನೈತಿಕತೆಗಳು ದೌರ್ಜನ್ಯಕ್ಕೆ ಕಾರಣವಾಗುತ್ತಿವೆ.

ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿಯೂ ದೌರ್ಜನ್ಯ ನಡೆಯುತ್ತಿದೆ. ಕೆಲವು ಕಣ್ಣಿಗೆ ಕಾಣುತ್ತವೆ. ಕೆಲವು ಕಾಣುವುದಿಲ್ಲ.

ಕ್ವಿಯರ್ ಸಮುದಾಯದವರು ಸಾರ್ವಜನಿಕವಾಗಿ ತಮ್ಮ ಸಂಗಾತಿಯೊಂದಿಗೆ ಇದ್ದರೂ ಜನರು ಅವರ ಮೇಲೆ ಹಿಂಸೆಗೆ ಇಳಿಯುತ್ತಾರೆ. ಮಹಿಳೆಯೊಬ್ಬರು ಇನ್ನೊಬ್ಬ ಮಹಿಳೆಯೊಂದಿಗೆ ಇದ್ದಾರೆ ಎಂದು ತಿಳಿದ ಜನ, ಮಹಿಳೆಯೊಬ್ಬರನ್ನು ಬಡಿದು, ಮುಖಕ್ಕೆ ಮಸಿ ಬಳಿದು, ಕುತ್ತಿಗೆಗೆ ಚಪ್ಪಲಿ ಹಾರ ಹಾಕಿ ಗ್ರಾಮದ ತುಂಬೆಲ್ಲಾ ಮೆರವಣಿಗೆ ಮಾಡಿದ್ದ ಪ್ರಕರಣ ನಡೆದಿದೆ. ಸಾಮಾಜಿಕ ಹಾಗೂ ಆರ್ಥಿಕ ಕಾರಣಕ್ಕಾಗಿಯೇ ಈ ಸಮುದಾಯದವರ ಹೆಚ್ಚು ಪ್ರಮಾಣದ ದೌರ್ಜನ್ಯಕ್ಕೆ ಗುರಿಯಾಗುತ್ತಾರೆ.

ಸರ್ಕಾರವೇ ಒದಗಿಸುವ ಸೌಲಭ್ಯಗಳಲ್ಲೂ ದೌರ್ಜನ್ಯ ನಡೆಯುತ್ತದೆ. ಲಿಂಗ ಪರಿವರ್ತಿತ ಮಹಿಳೆ ಎಂದು ತಿಳಿಯುತ್ತಿದ್ದರೂ ಪುರುಷರು ಭದ್ರತಾ ಪರೀಕ್ಷೆ ನಡೆಸುತ್ತಾರೆ. ಸಾರ್ವಜನಿಕ ಶೌಚಾಲಯಗಳಲ್ಲಿ ಒತ್ತಾಯಪೂರ್ವಕವಾಗಿ ಪುರುಷ ಶೌಚಾಲಯಗಳಿಗೆ ದೂಡಲಾಗುತ್ತದೆ. ಇಂಥ ಘಟನೆಗಳು ಅವರ ಮಾನಸಿಕ ಅಸ್ವಸ್ಥತೆಗೆ ಕಾರಣವಾಗುತ್ತವೆ. ಮತ್ತು ಅವರ ಇರುವಿಕೆಯನ್ನೇ ಪ್ರಶ್ನಿಸಿಕೊಳ್ಳುವಂತೆ ಮಾಡುತ್ತವೆ.

ಲಿಂಗತ್ವ ಅಸ್ಮಿತೆಯ ಕಾರಣಕ್ಕಾಗಿಯೇ ವಿದ್ಯೆ ಹಾಗೂ ಉದ್ಯೋಗದಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ. ತಮ್ಮ ಅಸ್ಮಿತೆಯು ಎಲ್ಲರಿಗೂ ತಿಳಿದ ತಕ್ಷಣವೇ ಅವರು ಶಾಲೆಯನ್ನೂ ಉದ್ಯೋಗವನ್ನೂ ಬಿಟ್ಟುಬಿಡಬೇಕಾದ ಸ್ಥಿತಿ ಇದೆ. ಉದ್ಯೋಗದಲ್ಲಿ ಅವರಿಗೆ ಬಡ್ತಿಯನ್ನು, ಅವಕಾಶವನ್ನು ನಿರಾಕರಿಸಲಾಗುತ್ತದೆ. ಇದು ಅವರಿಗೆ ಸಮಾನ ಅವಕಾಶ ಇಲ್ಲದಿರುವುದನ್ನು ಸ್ಪಷ್ಟಪಡಿಸುತ್ತದೆ. ಲಿಂಗತ್ವ ಅಲ್ಪಸಂಖ್ಯಾತರಿಗೆ ಕೆಲಸ ಮಾಡಲು ಇಷ್ಟವಿಲ್ಲದ ಕಾರಣಕ್ಕೆ ಅವರು ಭಿಕ್ಷೆ ಬೇಡುವುದಿಲ್ಲ. ಅವರಿಗೆ ಯಾರೂ ಉದ್ಯೋಗವನ್ನೇ ಕೊಡುವುದಿಲ್ಲ.

ಪೊಲೀಸರಿಂದಲೇ ದೌರ್ಜನ್ಯ ಹೆಚ್ಚು

ಒಬ್ಬ ಲಿಂಗ ಪರಿವರ್ತಿತ ಮಹಿಳೆಯನ್ನು ಎರಡು ಸಾವಿರ ಪುರುಷರು ಇರುವ ಜೈಲಿಗೆ ಹಾಕಲಾಗಿತ್ತು. ಈ ವೇಳೆ ಆಕೆಯ ಮೇಲೆ ಪುರುಷ ಕೈದಿಗಳು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಆಕೆಗೆ ಮಾನಸಿಕವಾಗಿ ಕಿರುಕುಳ ನೀಡಿದ್ದಾರೆ. ಜನರ ಮಾನವ ಹಕ್ಕುಗಳನ್ನು ಕಾಪಾಡುವುದು ಮತ್ತು ಹಿಂಸೆಯನ್ನು ತಡೆಗಟ್ಟುವುದು ಸರ್ಕಾರದ ಕೆಲಸ. ಆದರೆ, ಪೊಲೀಸರು ಹಾಗೂ ಜೈಲು ಅಧಿಕಾರಿಗಳೇ ಕ್ವಿಯರ್ ಸಮುದಾಯದವರ ಮೇಲೆ ಹೆಚ್ಚು ಹಿಂಸೆ ಹಾಗೂ ದೌರ್ಜನ್ಯವನ್ನು ಎಸಗುತ್ತಿದ್ದಾರೆ.

ಸೆಕ್ಷನ್ 377 ಎನ್ನುವ ಗುಮ್ಮ

ಸಲಿಂಗ ಸಂಬಂಧವು ಅಪರಾಧವಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ಅವರ ಮೇಲಿನ ದೌರ್ಜನ್ಯ ನಿಂತಿಲ್ಲ. ಪ್ರತಿ ದಿನ ಅವರು ಹಿಂಸೆ ಅನುಭವಿಸುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣಗಳಲ್ಲಿ ಐಪಿಸಿ ಸೆಕ್ಷನ್ 377 ಕೂಡ ಒಂದು.

ಯಾವುದೇ ಪುರುಷ, ಮಹಿಳೆ ಅಥವಾ ಪ್ರಾಣಿಯ ಜೊತೆಗೆ ಅಸಹಜ ಸಂಭೋಗ ನಡೆಸಿದವರನ್ನು ಜೀವಾವಧಿ ಅಥವಾ ಹತ್ತು ವರ್ಷವರೆಗಿನ ಶಿಕ್ಷೆಗೆ ಒಳಪಡಿಸಬಹುದು ಮತ್ತು ದಂಡವನ್ನೂ ವಿಧಿಸಬಹುದು– ಹೀಗೆಂದು ಸೆಕ್ಷನ್ 377 ಹೇಳುತ್ತಿತ್ತು. ಇದನ್ನು ರದ್ದುಪಡಿಸಿದ್ದರೂ,ಈ ಸೆಕ್ಷನ್‌ನ ಗುಮ್ಮ ಇನ್ನೂ ಕಾಡುತ್ತಲೇ ಇದೆ. ಇದರಿಂದಾಗಿಯೇ ಸಲಿಂಗಿಗಳ ಮೇಲೆ ಸಾಮಾಜಿಕ ನೈತಿಕತೆಯನ್ನು ಹೊರಿಸಲಾಗುತ್ತಿದೆ.

ಡಿ.ವೈ. ಚಂದ್ರಚೂಡ್, ಮುಖ್ಯ ನ್ಯಾಯಮೂರ್ತಿ

ನಾವು ನೋಡಿದ ಸಿನಿಮಾ



ಶಿವರಾಜ್‌ಕುಮಾರ್

'ಘೋಸ್ಟ್' ಎಂಬ ಸ್ವರ್ಣಬೇಟೆ

ಘೋಸ್ಟ್

- ನಿರ್ದೇಶನ: ಶ್ರೀನಿ
- ನಿರ್ಮಾಣ: ಸಂದೇಶ್ ಪ್ರೊಡಕ್ಷನ್
- ತಾರಾಗಣ:ಶಿವರಾಜ್‌ಕುಮಾರ್,ಜಯರಾಮ್, ಅನುಪಮ್ ಖೇರ್,ಅರ್ಚನಾ ಜೋಯಿಸ್ ಮುಂತಾದವರು

ಸೆಂಟ್ರಲ್ ಜೈಲ್ ಒಂದರ ಹೈಜಾಕ್‌ನೊಂದಿಗೆ 'ಘೋಸ್ಟ್' ಚಿತ್ರದ ಕಥೆ ಪ್ರಾರಂಭವಾಗುತ್ತದೆ. ಜೈಲನ್ನು ಹೈಜಾಕ್ ಮಾಡುವುದು 'ಘೋಸ್ಟ್' ಪಾತ್ರಧಾರಿಯಾಗಿರುವ ಶಿವರಾಜ್‌ಕುಮಾರ್. ಆ ಕ್ಷಣಕ್ಕೆ 'ನಿಷ್ಕರ್ಷ' ಸಿನಿಮಾ ನೆನಪಾಗುತ್ತದೆ. ಭರ್ಜರಿ ಫೈಟ್‌ನೊಂದಿಗೆ ಶಿವರಾಜ್‌ಕುಮಾರ್ ಪ್ರವೇಶಿಸುತ್ತಾರೆ. ಕೈದಿಗಳನ್ನು ಒತ್ತೆಯಾಳುಗಳಾಗಿಸಿಕೊಂಡ ಶಿವಣ್ಣ ತಂಡ ಜೈಲಿನ ಟವರ್–1ಗೆ ಶಿಫ್ಟ್ ಆಗುತ್ತದೆ. ಅಲ್ಲಿಂದ ನಂತರ ಸಿನಿಮಾದ ಮುಕ್ಕಾಲು ಭಾಗ ಇದೇ ಜೈಲಿನೊಳಗೆ ಸುತ್ತುತ್ತದೆ. ಇಡೀ ಕಥೆ 48 ಗಂಟೆಗಳಲ್ಲಿ ನಡೆಯುವ ಒಂದು ಘಟನೆಯನ್ನು ಆಧರಿಸಿದೆ.

ಶಿವರಾಜ್‌ಕುಮಾರ್ ಅಭಿಮಾನಿಗಳನ್ನೇ ಗಮನದಲ್ಲಿಟ್ಟುಕೊಂಡು ಕಥೆ ಹೆಣೆದಿರುವ ನಿರ್ದೇಶಕರು ತಮ್ಮ ಉದ್ದೇಶ ಈಡೇರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಶಿವರಾಜ್‌ಕುಮಾರ್ ಪೂರ್ತಿ ಸಿನಿಮಾ ಆವರಿಸಿಕೊಳ್ಳುತ್ತಾರೆ. ಈಗಷ್ಟೇ ಸಿನಿಮಾರಂಗಕ್ಕೆ ಪ್ರವೇಶಿಸಿದ ಯುವನಟರಷ್ಟೇ ಹುಮ್ಮಸ್ಸಿನಲ್ಲಿ ಶಿವಣ್ಣ ಕಾಣಿಸಿಕೊಂಡಿದ್ದಾರೆ. ಅವರಿಗೆ ನೀಡಿರುವ ಬಿಲ್ಡಪ್, ಅದಕ್ಕೆ ತಕ್ಕ ಹಿನ್ನೆಲೆ ಸಂಗೀತ, 'ಎಲ್ಲ ಗನ್‌ನಿಂದ ಕೊಂದರೆ ನಾನು ಕಣ್ಣಿನಿಂದಲೇ ಕೊಲ್ಲುತ್ತೇನೆ' ಎನ್ನುವ ಮೊನಚಾದ ಡೈಲಾಗ್‌ಗಳೊಂದಿಗೆ ವ್ಯಗ್ರ ನೋಟ ಬೀರುವ ಶಿವರಾಜ್‌ಕುಮಾರ್... ಒಟ್ಟಿನಲ್ಲಿ ಶಿವರಾಜ್‌ಕುಮಾರ್ ಮೆರವಣಿಗೆಯ ಸಿನಿಮಾ ಇದು. ಆ್ಯಕ್ಷನ್ ಇದ್ದರೂ ರಕ್ತ ಅಷ್ಟಾಗಿ ಹರಿದಿಲ್ಲ. ಫೈಟ್‌ಗಳಲ್ಲಿ ಹೊಸತನವಿದೆ. ಹಾಡಿಗೆ ಜಾಗವಿಲ್ಲದಿದ್ದರೂ ಫೈಟ್‌ಗಳಿಗೆ ಹಾಡುಗಳಂತೆ ಭಾಸವಾಗುವ ಹಿನ್ನೆಲೆ ಸಂಗೀತ ನೀಡುವಲ್ಲಿ ಅರ್ಜುನ್ ಜನ್ಯ ಯಶಸ್ವಿಯಾಗಿದ್ದಾರೆ. ಜೈಲಿನ ಹೊರಗಡೆಯಿಂದ ಒಳಗೆ ಇಲಿ ಬಾಯಿಯಲ್ಲಿ ಸಂದೇಶದ ಚೀಟಿ ಕಳುಹಿಸುವುದರಿಂದ ಹಿಡಿದು ಚಿತ್ರದ ಮೊದಲಾರ್ಧದಲ್ಲಿ ಕನ್ನಡಕ್ಕೆ ಹೊಸತೆನ್ನಬಹುದಾದ ಸಾಕಷ್ಟು ಅಂಶಗಳನ್ನು ನಿರ್ದೇಶಕರು ಪ್ರತಿ ದೃಶ್ಯದಲ್ಲಿಯೂ ತರುವ ಯತ್ನ ಮಾಡಿದ್ದಾರೆ. ಪೊಲೀಸ್ ಅಧಿಕಾರಿಯಾಗಿ ಮಲಯಾಳ ನಟ ಜಯರಾಂ ಅಭಿನಯ ಚೆನ್ನಾಗಿದೆ. ಆದರೆ ಅವರ ಡಬ್ಬಿಂಗ್‌ನಲ್ಲಿ ಸಾಕಷ್ಟು ಕನ್ನಡ ಪದಗಳ ಉಚ್ಚಾರಣೆ ಸರಿಯಾಗಿಲ್ಲ. ಅನುಪಮ್ ಖೇರ್ ಅವರಿಗೆ ಈ ಸಿನಿಮಾದಲ್ಲಿ ಹೆಚ್ಚು ಕೆಲಸವಿಲ್ಲ. 'ಘೋಸ್ಟ್–2'ಗೆ ಲೀಡ್ ಕೊಡುವ ಪಾತ್ರ ಅವರದ್ದು. ಆ ಭಾಗದಲ್ಲಿ ಮತ್ತೊಬ್ಬ ಹೆಸರಾಂತ ನಟನ ಪ್ರವೇಶವಾಗುತ್ತದೆ ಎಂಬ ಸುಳಿವನ್ನು ಚಿತ್ರದ ಕೊನೆಯಲ್ಲಿ ನಿರ್ದೇಶಕರು ನೀಡಿದ್ದಾರೆ.

ಕಥೆಯಲ್ಲಿ ಸಾಕಷ್ಟು ಗೊಂದಲಗಳಿವೆ. ಜೈಲಿನಲ್ಲಿ ಹುದುಗಿಸಿಟ್ಟ ಚಿನ್ನ, ಅದರ ಹುಡುಕಾಟ ಕೆಜಿಎಫ್ ಕಥೆಯ ಟ್ರ್ಯಾಕ್ ಅನ್ನು ನೆನಪಿಸುತ್ತದೆ. ಹಲವೆಡೆ ಮೇಕಿಂಗ್ ಕೂಡ ಅದಕ್ಕೆ ಇಂಬು ನೀಡುತ್ತದೆ. ನೋಡುಗನ ಬುದ್ಧಿಗೆ ಕಸರತ್ತು ನೀಡುವ ನಿರ್ದೇಶಕರ ಯತ್ನದಿಂದಾಗಿ ಲಾಜಿಕ್ ಎಂಬ ಪದಕ್ಕೆ ಚಿತ್ರದಲ್ಲಿ ಅರ್ಥ ಸಿಗುವುದು ಕಷ್ಟ. 'ಓಂ' ಸಿನಿಮಾದ ಸತ್ಯನನ್ನು ನೆನಪಿಸುವ ಶಿವರಾಜ್‌ಕುಮಾರ್ ಲುಕ್ ಸಿನಿಮಾದ ದ್ವಿತೀಯಾರ್ಧದ ಹೈಲೈಟ್. ಮಹೇಂದ್ರ ಸಿಂಹ ಛಾಯಾಗ್ರಹಣವು ಕೂಡ ಸಿನಿಮಾದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ವಿಶ್ವಕಪ್ ಕ್ರಿಕೆಟ್ ಪಂದ್ಯದ ಗೆಲುವನ್ನು ನಾನು ಇಸ್ರೇಲ್‌ನ ಸೋದರ ಸೋದರಿಯರಿಗೆ ಅರ್ಪಿಸುತ್ತೇನೆ' ಎಂದು ಭಾರತೀಯ ಕ್ರಿಕೆಟಿಗ ಮೊಹಮ್ಮದ್ ಸಿರಾಜ್ ಹೇಳಿದ್ದಾರೆ ಎನ್ನಲಾದ 'ಎಕ್ಸ್' ಪೋಸ್ಟ್‌ನ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ವಿಶ್ವಕಪ್ ಕ್ರಿಕೆಟ್ ಪಂದ್ಯದ ಗೆಲುವನ್ನು ನಾನು ಇಸ್ರೇಲ್‌ನ ಸೋದರ ಸೋದರಿಯರಿಗೆ ಅರ್ಪಿಸುತ್ತೇನೆ' ಎಂದು ಅಫ್ಗನ್ ಕ್ರಿಕೆಟಿಗ ರಶೀದ್ ಖಾನ್ ಸಹ ಮಾಡಿದ್ದಾರೆ ಎನ್ನಲಾದ 'ಎಕ್ಸ್' ಪೋಸ್ಟ್‌ನ ಸ್ಕ್ರೀನ್‌ಶಾಟ್ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ನೋಡಿ ಮುಸ್ಲಿಮರೂ ಇಸ್ರೇಲ್ ಅನ್ನೇ ಬೆಂಬಲಿಸುತ್ತಿದ್ದಾರೆ' ಎಂಬ ಬರಹದೊಂದಿಗೆ ಈ ಸ್ಕ್ರೀನ್‌ಶಾಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ ಇವು, ನಕಲಿ ಖಾತೆಗಳಿಂದ ಮಾಡಿರುವ 'ಎಕ್ಸ್' ಪೋಸ್ಟ್‌ನ ಸ್ಕ್ರೀನ್‌ಶಾಟ್‌ಗಳು.

'@iamMohdsiirajj ಎಂಬ ಹ್ಯಾಂಡಲ್‌ನಿಂದ ಸಿರಾಜ್ ಅವರದ್ದು ಎನ್ನಲಾದ ಪೋಸ್ಟ್ ಮಾಡಲಾಗಿದೆ. ಆದರೆ ಸಿರಾಜ್ ಅವರ ಅಧಿಕೃತ ಖಾತೆಯ ಹ್ಯಾಂಡಲ್ ಹೆಸರು @mdsirajofficial. ಹೀಗಾಗಿ ಸಿರಾಜ್ ಅವರು ಇಂತಹ ಪೋಸ್ಟ್ ಮಾಡಿದ್ದಾರೆ ಎಂಬುದು ಸುಳ್ಳು. ಜತೆಗೆ ರಶೀದ್ ಖಾನ್ ಅವರೂ ಅಂತಹ 'ಎಕ್ಸ್' ಪೋಸ್ಟ್ ಮಾಡಿಲ್ಲ. ಈ ಇಬ್ಬರ ಹೆಸರಿನಲ್ಲಿ ಒಬ್ಬನೇ ವ್ಯಕ್ತಿ ಹೆಸರು ಮತ್ತು ಹ್ಯಾಂಡಲ್ ಬದಲಿಸಿ ಅಂತಹ 'ಎಕ್ಸ್' ಪೋಸ್ಟ್ ಮಾಡಿದ್ದಾನೆ' ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.



ಗುಂಡಣ್ಣ



ಸಣ್ಣ ತಪ್ಪುಗಳನ್ನೂ ಮಾಡಬೇಡಿ

ನುಡಿ ಬೆಳಗು





ಪ್ರೊ.ಎಂ. ಕೃಷ್ಣೇಗೌಡ

ನಲವತ್ತಮೂರು ವರ್ಷಗಳ ಹಿಂದೆ, ಮೈಸೂರು ಮಾನಸಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ. ಓದಲು ಸೇರಿಕೊಂಡಾಗ ನಮ್ಮ ನಿರ್ದೇಶಕರಾಗಿದ್ದವರು ಹೆಸರಾಂತ ಸಾಹಿತಿಗಳೂ ದಕ್ಷ ಆಡಳಿತಗಾರರೂ ಆಗಿದ್ದ ಡಾ. ಹಾ. ಮಾ. ನಾಯಕರು. ಹೊಸ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಡಾ.ನಾಯಕರು ನಮಗೆ ಹೇಳಿದ ಒಂದು ಮಾತು ಈಗಲೂ ಆಗಾಗ ನೆನಪಾಗುತ್ತಲೇ ಇರುತ್ತದೆ. ಅವರು ಹೇಳಿದ್ದನ್ನು ಸಾಧ್ಯವಾದಷ್ಟು ಅವರ ಮಾತಿನಲ್ಲೇ ಹೇಳುತ್ತೇನೆ. ಕೇಳಿ:

'ನೀವು ಕೊಲೆ ಮಾಡಬೇಡಿ, ದರೋಡೆ ಮಾಡಬೇಡಿ, ಮೋಸ ಮಾಡಬೇಡಿ....ಅಂತೆಲ್ಲಾ ನಾನು ಹೇಳೋದಿಲ್ಲ. ಯಾಕೆಂದರೆ ಅಂಥ ದೊಡ್ಡ ತಪ್ಪುಗಳನ್ನು ನೀವ್ಯಾರೂ ಮಾಡೋದಿಲ್ಲ. ಅಕಸ್ಮಾತ್ ಮಾಡಿದ್ರಿ ಅಂತ ಇಟ್ಕೊಳ್ಳಿ. ಅದನ್ನ ವಿಚಾರಣೆ ಮಾಡೋದಕ್ಕೆ, ಶಿಕ್ಷೆ ಕೊಡೋದಕ್ಕೆ ಅಂತ ನಮ್ಮಲ್ಲಿ ಒಂದು ವ್ಯವಸ್ಥೆ ಇದೆ. ಕಾನೂನಿದೆ, ಪೋಲೀಸ್ ಇದೆ, ಕೋರ್ಟುಗಳಿವೆ, ನೀವು ತಪ್ಪು ಮಾಡಿದ್ದೀರಿ ಅಂದ್ರೆ ಶಿಕ್ಷೆಯೂ ಇದೆ. ಇವೆಲ್ಲಾ ಇವೆ ಅಂತಲ್ಲ, ಸಾಮಾನ್ಯವಾಗಿ ನೀವ್ಯಾರೂ ದೊಡ್ಡ ದೊಡ್ಡ ತಪ್ಪುಗಳನ್ನು ಮಾಡುವುದಿಲ್ಲ.

'ಆದರೆ ನೀವು ಸಣ್ಣ ಸಣ್ಣ ತಪ್ಪುಗಳನ್ನು ಮಾಡ್ತೀರಿ. ಉದಾಹರಣೆಗೆ, ತರಗತಿಗಳಿಗೆ ತಡವಾಗಿ ಬರ್ತೀರಿ, ತರಗತಿಗಳು ನಡೆಯುವಾಗ ಕೆಲವರು ಹೊರಗೆ ಕಾರಿಡಾರ್‌ನಲ್ಲಿ ನಿಂತ್ಕೊಂಡು ಜೋರಾಗಿ ಮಾತಾಡ್ತಾ ಇರ್ತೀರಿ, ಹರಿದ ಕಾಗದದ ಚೂರುಗಳನ್ನು ಎಲ್ಲೆಂದರಲ್ಲಿ ಹಾಕ್ತೀರಿ, ಚಪ್ಪಲಿ, ಬೂಟುಕಾಲುಗಳಲ್ಲಿ ಗೋಡೆಗೆ ಒರಗಿಕೊಂಡು ನಿಂತು ಸಂಸ್ಥೆಯ ಗೋಡೆಗಳಿಗೆ ನಿಮ್ಮ ಚಪ್ಪಲಿ, ಬೂಟಿನ ಗುರುತು ಬೀಳುವಂತೆ ಮಾಡ್ತೀರಿ, ಶೌಚಕ್ಕೆ ಹೋದರೆ ಬರುವಾಗ ನೀರು ಹಾಕದೆ ಬರುತ್ತೀರಿ, ಸಂಸ್ಥೆಯ ಒಳಾಂಗಣದಲ್ಲಿರುವ ಗುಲಾಬಿ ಗಿಡಗಳಿಂದ ಹೂವು ಕೀಳುತ್ತೀರಿ, ಸಭೆ ನಡೆಯುವಾಗ ಹಿಂದೆ ಕೂತು ಗುಜುಗುಜು ಮಾಡುತ್ತೀರಿ... ಇಂಥ ಹಲವಾರು ಸಣ್ಣ ತಪ್ಪುಗಳನ್ನ ಮಾಡ್ತೀರಿ.

'ಇದಕ್ಕೆಲ್ಲಾ ನಮ್ಮ ವ್ಯವಸ್ಥೆಯಲ್ಲಿ ವಿಚಾರಣೆಯೂ ಇಲ್ಲ ಶಿಕ್ಷೆಯೂ ಇಲ್ಲ. ಇಂಥ ತಪ್ಪುಗಳಿಗಾಗಿ ನಾವು ನಿಮ್ಮನ್ನು ಸಂಸ್ಥೆಯಿಂದ ಹೊರಗೆ ಹಾಕುವುದೂ ಇಲ್ಲ. ಆದರೆ ಆಲೋಚಿಸಿ ನೋಡಿ. ಇಂಥ ಸಣ್ಣ ಸಣ್ಣ ತಪ್ಪುಗಳಿಂದಾಗಿಯೇ ಇಲ್ಲಿಯ ವಾತಾವರಣ ಕೆಡುತ್ತದೆ. ಸಂಸ್ಥೆಯ ಗೌರವ ಹಾಳಾಗುತ್ತದೆ. ಇಲ್ಲಿ ಯಾವುದೂ ಇರಬೇಕಾದಂತೆ ಇಲ್ಲ ಅನ್ನಿಸುತ್ತದೆ. ಆದ್ದರಿಂದ ದಯವಿಟ್ಟು ನೀವು ಇಂಥ ಸಣ್ಣ ಸಣ್ಣ ತಪ್ಪುಗಳನ್ನು ಮಾಡಬೇಡಿ. ಈ ಸಂಸ್ಥೆಯಲ್ಲಿರುವಾಗ ಮಾತ್ರವಲ್ಲ, ನಿಮ್ಮ ಸಾಮಾಜಿಕ ಅಥವಾ ವೃತ್ತಿಪರ ಬದುಕಿನಲ್ಲೂ ಅಷ್ಟೆ. ಇಂಥ ತಪ್ಪುಗಳನ್ನು ಮಾಡದಂತೆ ನಿಮಗೆ ನೀವೇ ಶಿಕ್ಷಣ ಕೊಟ್ಟುಕೊಂಡರೆ ಅದರ ಪರಿಣಾಮವಾಗಿ ನಾಳೆ ನೀವು ದೊಡ್ಡ ತಪ್ಪುಗಳನ್ನೂ ಮಾಡುವುದಿಲ್ಲ. ಹಾಗೆಯೇ ನೀವು ಒಳ್ಳೆಯ ವಿದ್ಯಾರ್ಥಿ ಆಗಬೇಕಾದರೆ, ಒಳ್ಳೆಯ ಮನುಷ್ಯ ಆಗಬೇಕಾದರೆ ಭಾರಿ ಕೆಲಸಗಳನ್ನು ಮಾಡಬೇಕಾಗಿಲ್ಲ, ಬದಲಾಗಿ ಸಣ್ಣ ಸಣ್ಣ ಕೆಲಸಗಳನ್ನು ಅಚ್ಚುಕಟ್ಟಾಗಿ, ಪೂರ್ಣವಾಗಿ, ಚಂದವಾಗಿ ಮಾಡುವುದನ್ನು ರೂಢಿಸಿಕೊಳ್ಳಿ.'

ಹಾ. ಮಾ. ನಾಯಕರು ಅಂದು ಹೇಳಿದ ಮಾತುಗಳನ್ನು ಈವತ್ತು ನಿಮ್ಮೊಂದಿಗೆ ಹೇಳಬೇಕೆನ್ನಿಸಿತು. ಹೇಳಿದ್ದೇನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಅಕ್ಟೋಬರ್ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಷಷ್ಠಿ ಗಂ. 23-25 ನಕ್ಷತ್ರ: ಮೂಲಾ ಗಂ. 20-41 ಯೋಗ: ಅತಿಗಂಡ ಗಂ 27-02 ಕರಣ: ಕೌಲವ ಗಂ. 12-02, ತುಲಾ ಮಾಸದ 03 ನೇ ದಿನ, ಮಳೆನಕ್ಷತ್ರ: ಚಿತ್ರ 3.
ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-25 ಸೂರ್ಯಾಸ್ತ : 06-05
ಮುಸ್ಲಿಂ ದಿನಾಂಕ : 04 ರಬಿಯುಸ್ಸಾನಿ
ದಿನ ವಿಶೇಷ : ನವರಾತ್ರಿ 6ನೇ ದಿನ, ಸರಸ್ವತಿ ಆವಾಹನ, ಹೋಲಿ ಪ್ರಾರಂಭ (ಜೈನ್)
ಅದೃಷ್ಟ ಸಂಖ್ಯೆ : 9, 11

ಮೇಷ: ನಿಮ್ಮ ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟು ಸಕಾರಾತ್ಮಕವಾಗಿ ಯೋಚಿಸಲು ಪ್ರಾರಂಭ ಮಾಡಿದಲ್ಲಿ ನಿಧಾನವಾಗಿ ಅಭಿವೃದ್ಧಿಯ ಹಾದಿ ಹಿಡಿಯುವಿರಿ.

ವೃಷಭ: ಆಪ್ತರು ಎಂದು ನೀವು ತಿಳಿದ ವ್ಯಕ್ತಿಗಳು ನಿಮ್ಮ ಆಪತ್ತಿನ ಕಾಲಕ್ಕೆ ಸಹಾಯವನ್ನು ಮಾಡದೇ ಇರಬಹುದು. ನಿಮ್ಮ ಊರಿನ ಪ್ರಮುಖರಿಂದ ನಿಮ್ಮ ಅಪೇಕ್ಷೆ ಇಲ್ಲದಿದ್ದರೂ ಕೂಡ ನಿಮಗೆ ಬೇಕಾದ ಕೆಲಸಗಳು ನಡೆಯಬಹುದು.

ಮಿಥುನ : ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿದೆ. ಸಮಸ್ಯೆಗಳನ್ನು ಯಾವುದೇ ಗಲಾಟೆಗಳಿಲ್ಲದೆ ನಾಜೂಕಾಗಿ ಬಗೆಹರಿಸಿಕೊಳ್ಳುವ ಪ್ರಯತ್ನ ನಡೆಸಿ. ಕ್ರೀಡಾ ಚಟುವಟಿಕೆಗಳು ಹೆಚ್ಚುವುದು.

ಕರ್ಕಾಟಕ : ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ ಕಳೆದುಕೊಳ್ಳಬೇಡಿ, ಸಮಾಧಾನ ಇರಲಿ. ಅನೇಕ ದಿನಗಳಿಂದ ಕಾಡುತ್ತಿರುವ ಆರೋಗ್ಯ ಸಮಸ್ಯೆ ಉಪಶಮನವಾಗಲಿದೆ. ಮನಸ್ಸಿಗೆ ನೆಮ್ಮದಿ ನೀಡುವ ಸುದ್ದಿ ಕೇಳುವಿರಿ.

ಸಿಂಹ: ಮಗಳ ಜೀವನದ ವಿಚಾರದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ಮಗನ ಉದ್ಯೋಗದಲ್ಲಿನ ಪ್ರಗತಿಯಿಂದ ಸಂತೋಷವಾಗುತ್ತದೆ. ಧಾರ್ಮಿಕ ಶ್ರದ್ಧೆ ಬೆಳೆಸಿಕೊಳ್ಳುವ ಪ್ರಯತ್ನ ಮಾಡಿರಿ.

ಕನ್ಯಾ: ನಿಮ್ಮ ಅಧಿಕ ಶ್ರಮದಿಂದ ನಿಮ್ಮ ಕನಸಿನ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿಯಾಗುವುದು. ಬುದ್ಧಿಕೌಶಲ್ಯದಿಂದ ಕಾರ್ಯ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿ. ಬಟ್ಟೆ ಉದ್ಯಮದವರಿಗೆ ಇಂದು ಲಾಭ ಬರುವುದು.

ತುಲಾ : ನೆರೆಯವರ ಸಹಾಯ ಸಹಕಾರ ಕೇಳುವ ಸಂದರ್ಭ ಬರಲಿದೆ. ಆದರೇ, ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವಿರಿ. ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ಮನಸ್ಸಿನಲ್ಲಿ ನೆಮ್ಮದಿ ಮೂಡುತ್ತದೆ.

ವೃಶ್ಚಿಕ : ಸಾರ್ವಜನಿಕರಲ್ಲಿ ಹೆಚ್ಚಾಗಿ ಬೆರೆಯುವ ಸಂದರ್ಭ ಬರುವುದರಿಂದ ಆರೋಗ್ಯದಲ್ಲಿ ವಿಶೇಷ ಗಮನ ವಹಿಸಿ. ಮನೆಯಲ್ಲಿ ಆನಂದದ ವಾತಾವರಣ ಉದಯವಾಗುತ್ತದೆ. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ.

ಧನು : ನಿಧಾನ ಗತಿಯಲ್ಲಿ ನಡೆಯುತ್ತಿದ್ದ ಕಾರ್ಯಗಳು ಮಹಾಗಣಪತಿಯ ಆಶೀರ್ವಾದದಿಂದ ಶೀಘ್ರಗತಿಯನ್ನು ಹೊಂದಿ ಪ್ರಗತಿಯನ್ನು ಹೊಂದುತ್ತದೆ. ರಕ್ತದೊತ್ತಡ ನಿಯಂತ್ರಣಕ್ಕೆ ಬಂದು ಮನಸ್ಸಿಗೆ ಸಮಾಧಾನ ಆಗುವುದು.

ಮಕರ: ಕೋರ್ಟು ಕಛೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಅಧಿಕ ಪ್ರಯತ್ನವಿರಲಿ. ಹಳೆಯ ವಾಹನ ಕೊಡು ಕೊಳ್ಳುವಿಕೆಯಲ್ಲಿ ಲೆಕ್ಕ ಪತ್ರಗಳಲ್ಲಿ ಗಮನವಿರಲಿ. ಮದುವೆಯ ಸಲುವಾಗಿ ವಸ್ತ್ರಾಭರಣದ ಖರೀದಿಸಬಹುದು.

ಕುಂಭ : ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂತಹ ಕೆಲಸಗಳಿಗಾಗಿ ಕುಟುಂಬದಲ್ಲಿ ಚರ್ಚೆ ನಡೆಯುವುದು ಹಾಗೂ ಅದಕ್ಕಾಗಿ ಹೆಚ್ಚು ಸಮಯ ವಿನಿಯೋಗಿಸುವಿರಿ. ಉದ್ಯೋಗ ವ್ಯವಹಾರಗಳಲ್ಲಿ ತೊಂದರೆಗಳಿರುವುದಿಲ್ಲ.

ಮೀನ : ಆಡಳಿತಾರೂಢ ಜನರ ಸಂಪರ್ಕದಿಂದ ಕೆಲಸಗಳನ್ನು ಸಾಧಿಸಿಕೊಳ್ಳಲು ಕಷ್ಟವೆನಿಸುವುದು. ನಿಮ್ಮ ದುಡುಕು ನಿರ್ಧಾರಗಳಿಂದ ಮುಖಭಂಗವಾಗುವ ಲಕ್ಷಣಗಳಿವೆ. ಷೇರು ವ್ಯವಹಾರ, ಸಿನೆಮಾ ತಯಾರಿಕೆಯು ಲಾಭ ತರಲಿದೆ.

ಪದಬಂಧ 5476


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮರದಲ್ಲಿ ಕಾಣುತ್ತಿರುವ ಹೆಬ್ಬಾಗಿಲು (4)
3. ಆ ಜಗಲಿ ಹತ್ತಿರ ಕಾಣಿಸಿದ ಹೆಬ್ಬಾವು (4)
5. ಅದೇ ತಾನೆ ಲಗ್ನವಾದ ಗಂಡ ಹೆಂಡಿರು (5)
7. ನಡುಗುತ್ತಲೇ ತೋರಿದ ಮಂದಹಾಸ (2)
9. ಕಾಮನಿಂದ ಮೂಡಿದ ಆಸೆ (3)
11.ಪರವಲ್ಲ! ಈ ಲೋಕ! (2)
13. ಸಾಯುವ ಸಮಯ (5)
15.ಶತೃತ್ವ ಇಲ್ಲಿ ಕಾಣುತ್ತಿದೆ (4)
16.ಸರಧರಿಸಿ ಮಾಡಿದ ವ್ಯಾಯಾಮ (4)

ಮೇಲಿಂದ ಕೆಳಕ್ಕೆ

1. ಓಟನ್ನು ನೀಡುವಿಕೆ (4)
2.ರಸ ಒಸರುವ ದ್ರವ (3)
4. ಗರ ಬಡಿದಂತಿರುವ ಪತಿವ್ರತೆ (3)
6. ದಂಡ ಕಟ್ಟದವನಿಗೆ ಶಿಕ್ಷಿಸುವುದು! (3)
8. ಗುಗ್ಗರಿ ತಿನ್ನುತ್ತಾ ವಹಿಸಿದ ಲಕ್ಷ್ಯ (2)
9.ಕಾಣದಂತೆ ಇರುವ ಉದ್ದೇಶ! (3)
10. ಮೂಷಕ ಇಲ್ಲಿ ಉಲ್ಟಾ ನಿಂತಿದೆಯಲ್ಲಾ ? (2)
12. ಕತ್ತು ಕೊನೆಗಿಟ್ಟಾಗ ನಡೆದ ಘಟನೆ! (4)
13. ಗಲ್ಲಿಯಲ್ಲಿ ಮಾರುತ್ತಿರುವ ಸುವಾಸಿತ ಹೂ (3)
14. ತಿರುವುಮುರುವಾಗಿರುವ ತಾವರೆ (3)



5475ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ವರಮಾನ 3. ವನ್ಯಮೃಗ 5.ದುರಾಸೆ 6.ರವಾನೆ 8. ತವರ 10.ಮಂಕರಿ 11. ಸರಕು 13. ಕಳಸ 15.ಸಹೋದರಿ 16. ಪರದಾಟ

ಮೇಲಿಂದ ಕೆಳಕ್ಕೆ: 1.ವನಚರ 2. ನಗದು 3.ವರಸೆ 4.ಗತ್ಯಂತರ 7. ವಾದಕ 9. ವಕ್ತಾರ 10. ಮಂದಹಾಸ 12. ಕುಡಿನೋಟ 13. ಕಮರಿ 14.ಸಲ್ಲಾಪ

ಸುಡೊಕು 5862

	5			1	6		8	
		6			9			7
4		8	7				9	
	7			2	1			8
	6	4	9		8		7	
8		1				9		4
	8			9				
1		2				7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5861 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಮಡ್‌ಪೈಪ್ ಕೆಫೆಯಲ್ಲಿ ಅವಘಡ ಪ್ರಕರಣ: ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ತಪಾಸಣೆ

ಸಂಗ್ರಹಿಸಿದ್ದ ಸಿಲಿಂಡರ್ ಸೋರಿ ಸ್ಫೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಬಳಿಯ ತಾವರಕೆರೆ ಜಂಕ್ಷನ್‌ನಲ್ಲಿರುವ ಮಡ್‌ಪೈಪ್ ಕೆಫೆಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿದ್ದ ಬಗ್ಗೆ ಪ್ರಾಥಮಿಕ ತನಿಖೆ ನಡೆಸಲಾಗಿದ್ದು, 'ಕಟ್ಟಡದ ಚಾವಣಿಯಲ್ಲಿ ಅಕ್ರಮವಾಗಿ 10 ಸಿಲಿಂಡರ್ ಸಂಗ್ರಹಿಸಿಡಲಾಗಿತ್ತು. ಕೆಲ ಸಿಲಿಂಡರ್‌ಗಳಿಂದ ಅಡುಗೆ ಅನಿಲ ಸೋರಿಕೆಯಾಗಿದ್ದೇ ಅವಘಡಕ್ಕೆ ಕಾರಣ' ಎಂಬ ಸಂಗತಿ ಗೊತ್ತಾಗಿದೆ.

ಬುಧವಾರ ಮಧ್ಯಾಹ್ನ ಅವಘಡ ಸಂಭವಿಸುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು, ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಸ್ಥಳದಲ್ಲಿ ಸಿಕ್ಕಿರುವ ಅವಶೇಷಗಳ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಕೆಫೆಯ ಸಿಬ್ಬಂದಿ ಹಾಗೂ ಸ್ಥಳೀಯರಿಂದಲೂ ಹೇಳಿಕೆ ಪಡೆದುಕೊಂಡಿದ್ದಾರೆ.

'ಕಟ್ಟಡದ ಚಾವಣಿಯಲ್ಲಿ ತಗಡುಗಳನ್ನು ಹಾಕಿ ಅವೈಜ್ಞಾನಿಕವಾದ ರೂಫ್‌ಟಾಪ್ ರೀತಿಯಲ್ಲಿ ಮಡ್‌ಪೈಪ್ ಕೆಫೆ ನಿರ್ಮಿಸಲಾಗಿತ್ತು. ಕೆಫೆಗೆ ಮೆಟ್ಟಿಲು ಮೂಲಕ ಸಂಪರ್ಕ ಕಲ್ಪಿಸಲಾಗಿತ್ತು. ಮಳೆ ಬಂದ ಸಂದರ್ಭದಲ್ಲಿ ಚಾವಣಿಯಿಂದ ಮೆಟ್ಟಿಲು ಭಾಗದಲ್ಲಿ ಮಳೆ ನೀರು ಬೀಳಬಾರದೆಂದು, ಹೊದಿಕೆ ಮಾದರಿಯಲ್ಲಿ ಸಣ್ಣದೊಂದು ಕೊಠಡಿ ನಿರ್ಮಿಸಲಾಗಿತ್ತು' ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ಹೇಳಿದರು.

'ಚಾವಣಿಯ ಕೊಠಡಿಯ ಮೇಲ್ಭಾಗದಲ್ಲಿ 10 ಸಿಲಿಂಡರ್‌ಗಳನ್ನು ಜೋಡಿಸಿಡಲಾಗಿತ್ತು. ಅದೇ ಕೊಠಡಿ ಪಕ್ಕದಲ್ಲಿ ಅಡುಗೆ ಮಾಡಲಾಗುತ್ತಿತ್ತು. ಕೊಠಡಿ ಮೇಲ್ಭಾಗದಲ್ಲಿದ್ದ ಸಿಲಿಂಡರ್‌ಗಳಿಂದ ಪೈಪ್ ಮೂಲಕ ಅಡುಗೆ ಸ್ಥಳಕ್ಕೆ ಅನಿಲದ ಪೂರೈಕೆ ಇತ್ತು. ಚಾವಣಿಯಲ್ಲಿ ಸಂಗ್ರಹಿಸಿದ್ದ 10 ಸಿಲಿಂಡರ್‌ಗಳ ಪೈಕಿ ಕೆಲ ಸಿಲಿಂಡರ್‌ಗಳಿಂದ ಅನಿಲ ಸೋರಿಕೆಯಾಗಿದ್ದೇ ಸ್ಫೋಟಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ತಿಳಿಸಿದರು.

ಅಡುಗೆ ತಯಾರಿ ವೇಳೆ ಸ್ಫೋಟ: 'ಬುಧವಾರ ಬೆಳಿಗ್ಗೆ ಕೆಫೆಗೆ ಬಂದಿದ್ದ ಸಿಬ್ಬಂದಿ, ಕೆಫೆ ಸ್ವಚ್ಛಗೊಳಿಸಿದ್ದರು. ಕೆಫೆಯಲ್ಲಿ ಕೆಲಸ ಮಾಡುತ್ತಿದ್ದ ನೇಪಾಳದ ಪ್ರೇಮ್ ಸಿಂಗ್, ಅಡುಗೆ ತಯಾರಿಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು' ಎಂದು ಅಧಿಕಾರಿ ಹೇಳಿದರು.

'ಮಧ್ಯಾಹ್ನ ಅಡುಗೆ ಅನಿಲ ಸೋರಿಕೆಯಾಗಿ ಅಡುಗೆ ಮನೆಯಲ್ಲಿ ಸ್ಫೋಟ ಸಂಭವಿಸಿತ್ತು. ಬೆಂಕಿ ಹೆಚ್ಚಾಗಿ ಉರಿಯಲಾರಂಭಿಸಿತ್ತು. ಚಾವಣಿಯ ಕೊಠಡಿ ಮೇಲ್ಭಾಗದಲ್ಲಿದ್ದ 5 ಸಿಲಿಂಡರ್‌ಗಳು ಹಾರಿ ಬಿದ್ದಿದ್ದವು. ಕೆಲ ನಿಮಿಷಗಳಲ್ಲಿ ಬೆಂಕಿ ಕೆನ್ನಾಲಗೆ ಹೆಚ್ಚಾಗಿ, ಕೆಫೆಯಲ್ಲಿದ್ದ ಎಲ್ಲ ವಸ್ತುಗಳು ಸಂಪೂರ್ಣ ಸುಟ್ಟು ಹೋದವು.'

'ಮೆಟ್ಟಿಲು ಬಳಿಯೇ ಬೆಂಕಿ ಹೊತ್ತಿಕೊಂಡಿದ್ದರಿಂದ, ಪ್ರೇಮ್ ಸಿಂಗ್ ಕೆಳಗೆ ಇಳಿದು ಬರಲು ಆಗಲಿಲ್ಲ. ಕಟ್ಟಡದ ತುದಿಯಲ್ಲಿ ನಿಂತು ಜಿಗಿದಿದ್ದ. ಇದರಿಂದ ಪ್ರೇಮ್ ಸಿಂಗ್ ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ತಿಳಿಸಿದರು.

ಕೆಫೆಗೆ ಅನುಮತಿ: 'ಕೆಫೆ ನಡೆಸಲು ಅನುಮತಿ ಪಡೆಯಲಾಗಿತ್ತು. ಆದರೆ, ಚಾವಣಿಯಲ್ಲಿ ರೂಫ್‌ಟಾಪ್ ನಿರ್ಮಾಣಕ್ಕೆ ಹಾಗೂ ಸಿಲಿಂಡರ್ ಸಂಗ್ರಹಕ್ಕೆ ಅನುಮತಿ ಇರಲಿಲ್ಲ. ಜೊತೆಗೆ, ರೆಸ್ಟೋರೆಂಟ್ ನಡೆಸುತ್ತಿರುವುದು ನಿಯಮಬಾಹಿರ. ಕೆಫೆ ಆಡಳಿತ ಮಂಡಳಿ ವಿರುದ್ಧ ಈಗಾಗಲೇ ಎಫ್‌ಐಆರ್ ದಾಖಲಿಸಲಾಗಿದ್ದು, ಎಲ್ಲರನ್ನೂ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬಹುಮಹಡಿ ಕಟ್ಟಡದಲ್ಲಿ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ, ಈ ಕಟ್ಟಡದಲ್ಲಿ ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ. ಜೊತೆಗೆ, ಹುಕ್ಕಾ ಬಾರ್ ನಡೆಸುತ್ತಿದ್ದ ಬಗ್ಗೆಯೂ ಮಾಹಿತಿ ಇದೆ. ಈ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದರು.



ಮಡ್‌ಪೈಪ್ ಕೆಫೆಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿದ್ದರಿಂದ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ತಗಡುಗಳು – ಪ್ರಜಾವಾಣಿ ಚಿತ್ರ

ಬಹು ಮಹಡಿ ಕಟ್ಟಡದಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮ

- ರಸ್ತೆಗೂ ಬಹುಮಹಡಿ ಕಟ್ಟಡಕ್ಕೂ 12 ಮೀಟರ್ ಅಂತರವಿರಬೇಕು
- ಕಟ್ಟಡದ ಸುತ್ತ ಅಗ್ನಿಶಾಮಕ ವಾಹನ ಸಂಚರಿಸುವಷ್ಟು ಜಾಗವಿರಬೇಕು
- ಚಾವಣಿಯಲ್ಲಿ ಮತ್ತು ನೆಲ ಅಂತಸ್ತಿನಲ್ಲಿ ನೀರಿನ ಟ್ಯಾಂಕ್ ಇರಬೇಕು
- ನೆಲ ಅಂತಸ್ತು ವಾಹನ ನಿಲುಗಡೆಗೆ ಮಾತ್ರ ಬಳಕೆಯಾಗಬೇಕು
- ಕಟ್ಟಡದಲ್ಲಿ ಕಡ್ಡಾಯವಾಗಿ ಒಬ್ಬ ಅಗ್ನಿ ಸುರಕ್ಷತಾ ಅಧಿಕಾರಿ ಇರಬೇಕು
- ನೀರು ಕೊಳವೆ, ಎಲೆಕ್ಟ್ರಿಕ್ ಅಲಾರಾಂ ಹಾಗೂ ಅಗ್ನಿ ನಂದಕ ಸಲಕರಣೆಗಳನ್ನು ಕಡ್ಡಾಯವಾಗಿ ಹೊಂದಿರಬೇಕು
- ಕಟ್ಟಡದಲ್ಲಿ ಕನಿಷ್ಠ 2 ಕಡೆ ಮೆಟ್ಟಿಲು, ಲಿಫ್ಟ್ ಇರುವುದು ಕಡ್ಡಾಯ
- ಅಗ್ನಿ ಸುರಕ್ಷತೆ ಬಗ್ಗೆ ಸಿಬ್ಬಂದಿಗೆ ಆಗಾಗ ಪ್ರಾತ್ಯಕ್ಷಿಕೆ ನೀಡಬೇಕು
- ನಿರ್ಗಮನ ದ್ವಾರಗಳು ಕತ್ತಲಲ್ಲೂ ಗೋಚರವಾಗುವಂತೆ ಇರಬೇಕು

(ಆಧಾರ: ರಾಷ್ಟ್ರೀಯ ಕಟ್ಟಡ ನೀತಿ)

ಗೃಹ ಸಚಿವ ಭೇಟಿ

ಸ್ಫೋಟ ಸಂಭವಿಸಿದ್ದ ಮಡ್‌ಪೈಪ್ ಕೆಫೆ ಸ್ಥಳಕ್ಕೆ ಗೃಹ ಸಚಿವ ಜಿ. ಪರಮೇಶ್ವರ ಅವರು ಗುರುವಾರ ಭೇಟಿ ನೀಡಿದರು. ಸ್ಫೋಟದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

'ಅನುಮತಿ ನಿಯಮಗಳನ್ನು ಉಲ್ಲಂಘಿಸಿ ಕೆಫೆ ನಿರ್ವಹಣೆ ಮಾಡಲಾಗುತ್ತಿತ್ತು. ಅನುಮತಿ ನೀಡಿದ್ದ ಬಿಬಿಎಂಪಿ ಅಧಿಕಾರಿಗಳು ಯಾವುದೇ ಪರಿಶೀಲನೆ ನಡೆಸಿಲ್ಲ. ಅವರ ನಿರ್ಲಕ್ಷ್ಯವೂ ಎದ್ದು ಕಾಣುತ್ತಿದೆ' ಎಂದು ಜಿ. ಪರಮೇಶ್ವರ ಹೇಳಿದರು.

ಅಗ್ನಿಶಾಮಕ ದಳ ಹಾಗೂ ತುರ್ತುಸೇವೆಗಳ ಇಲಾಖೆಯ ಡಿಜಿಪಿ ಕಮಲ್ ಪಂತ್ ಸಹ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪಬ್, ಬಾರ್ ರೆಸ್ಟೋರೆಂಟ್ ಪರಿಶೀಲನೆ

ಮಡ್ ಪೈಪ್ ಕೆಫೆ ಅವಘಡ ಮರುಕಳಿಸದಂತೆ ಕ್ರಮ ಕೈಗೊಂಡಿರುವ ಪೊಲೀಸರು ಹಾಗೂ ಅಗ್ನಿಶಾಮಕದ ದಳದ ಅಧಿಕಾರಿಗಳು, ಜಂಟಿಯಾಗಿ ಕಾರ್ಯಾಚರಣೆ ಆರಂಭಿಸಿದ್ದಾರೆ.

ನಗರದಲ್ಲಿರುವ ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್, ಹೋಟೆಲ್ ಹಾಗೂ ಜನರು ಸೇರುವ ಸ್ಥಳಗಳಲ್ಲಿ ಅಧಿಕಾರಿಗಳು ಗುರುವಾರ ಪರಿಶೀಲಿಸಿದರು.

'ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಇಂದಿರಾನಗರ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಅಗ್ನಿ ಸುರಕ್ಷತಾ ಕ್ರಮಗಳ ಬಗ್ಗೆ ಪರಿಶೀಲಿಸಲಾಯಿತು. ಕೆಲ ಪಬ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಸುರಕ್ಷತಾ ಕ್ರಮಗಳಿಲ್ಲದಿರುವುದು ಗಮನಕ್ಕೆ ಬಂತು. ಈ ಸಂಬಂಧ ನೋಟಿಸ್ ನೀಡಿ, ಸುರಕ್ಷತಾ ಕ್ರಮಗಳ ಅಳವಡಿಕೆಗೆ ಗಡುವು ನೀಡಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ನೆಲಮಹಡಿ ಸೇರಿ ನಾಲ್ಕು ಅಂತಸ್ತಿನ ಕಟ್ಟಡ (1 + 4) ಹಾಗೂ 15 ಮೀಟರ್‌ಗಿಂತ ಎತ್ತರದ ಕಟ್ಟಡಗಳಲ್ಲಿ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆ, ಅಗ್ನಿಶಾಮಕ ಸೇವೆಗಳ ಕಾಯ್ದೆ–1964 ಹಾಗೂ ರಾಷ್ಟ್ರೀಯ ಕಟ್ಟಡ ನೀತಿಯಲ್ಲಿ (ಎನ್‌ಬಿಸಿ) ಉಲ್ಲೇಖಿಸಲಾಗಿದೆ' ಎಂದರು.

ಸುದ್ದಿ 2 ನಿಮಿಷ

ಕದ್ದ ವಾಹನಗಳಲ್ಲಿ ಸುತ್ತಾಡಿ ಸುಲಿಗೆ: ಆರೋಪಿಗಳ ಸೆರೆ

ಬೆಂಗಳೂರು: ದ್ವಿಚಕ್ರ ವಾಹನಗಳು ಹಾಗೂ ಕಾರು ಕದ್ದು, ಅವುಗಳಲ್ಲಿ ಸುತ್ತಾಡಿ ಸುಲಿಗೆ ಮಾಡುತ್ತಿದ್ದ ಆರೋಪದಡಿ ಆರು ಮಂದಿಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಗರದ ಹಲವು ಕಡೆಗಳಲ್ಲಿ ವಾಹನ ಕಳವು ಹಾಗೂ ಸುಲಿಗೆ ಬಗ್ಗೆ ಪ್ರಕರಣ ದಾಖಲಾಗಿದ್ದವು. ಈ ಸಂಬಂಧ ತನಿಖೆ ಕೈಗೊಂಡು, ಆರೋಪಿಗಳಾದ ಕೋಲಾರ ಜಿಲ್ಲೆಯ ನ್ಯಾಮತ್ ಉಲ್ಲಾ (22), ಗೋವಿಂದಪುರದ ಅಸ್ರಾನ್ ಅಹಮ್ಮದ್ (25), ಸೈಯದ್ ಅಬ್ದುಲ್ ಫರ್ಜಾನ್ (20), ಸೈಯದ್ ಸಫಿ (24), ಸೈಫ್ ಉಲ್ಲಾ ಖಾನ್ (23) ಸೇರಿ ಆರು ಮಂದಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಮೃತಹಳ್ಳಿ ಠಾಣೆ ವ್ಯಾಪ್ತಿಯ ಶ್ರೀರಾಮಪುರದಲ್ಲಿ ನಿಲ್ಲಿಸಿದ್ದ ಕಾರು ಇತ್ತೀಚೆಗೆ ಕಳ್ಳತನವಾಗಿತ್ತು. ಕಾರಿನ ಮಾಲೀಕರು ದೂರು ನೀಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಇತರೆ ಪುರಾವೆಗಳನ್ನು ಪರಿಶೀಲಿಸಿದಾಗ ಆರೋಪಿಗಳ ಸುಳಿವು ಸಿಕ್ಕಿತ್ತು.'

'ಆರೋಪಿಗಳು ತಮ್ಮದೇ ತಂಡ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು. ಬಾಣಸವಾಡಿ, ಕೊತ್ತನೂರು, ಮಹದೇವಪುರ ಹಾಗೂ ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿದ್ದ ಮಾಹಿತಿ ಲಭ್ಯವಾಗಿದೆ' ಎಂದು ತಿಳಿಸಿದರು.

'ವಾಹನಗಳಲ್ಲಿ ಜನರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು, ನಗದು ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದರು. ₹ 17.5 ಲಕ್ಷ ಮೌಲ್ಯದ 1 ಕಾರು, 15 ಬೈಕ್, ₹ 11,750 ನಗದು ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.



ಔಷಧ ಅಂಗಡಿಗೆ ನುಗ್ಗಿ ಸುಲಿಗೆ: ಸಿಕ್ಕಿಬಿದ್ದ ಆರೋಪಿ

ಬೆಂಗಳೂರು: ನಗರದ ಹಲವು ಔಷಧ ಅಂಗಡಿಗಳಿಗೆ ನುಗ್ಗಿ ಸಿಬ್ಬಂದಿಯನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ ಆರೋಪಿ ಸಮೀವುದ್ದೀನ್ ಅಲಿಯಾಸ್ ಸಮೀರ್‌ನನ್ನು (27) ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಸಮೀವುದ್ದೀನ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಈತನನ್ನು ಇತ್ತೀಚೆಗೆ ಬಂಧಿಸಿ, ದ್ವಿಚಕ್ರ ವಾಹನ ಹಾಗೂ ಚಾಕು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಿಂಗಾಪುರ ಬಡಾವಣೆ ಮುಖ್ಯರಸ್ತೆಯಲ್ಲಿರುವ ಅಪೊಲೊ ಫಾರ್ಮಸಿ ಮಳಿಗೆಗೆ ಅ. 8ರಂದು ಬೆಳಿಗ್ಗೆ ನುಗ್ಗಿದ್ದ ಆರೋಪಿ, ಸಿಬ್ಬಂದಿಗೆ ಚಾಕು ತೋರಿಸಿ ಬೆದರಿಸಿದ್ದ. ಸಿಬ್ಬಂದಿ ಕೂಗಾಡುತ್ತಿದ್ದಂತೆ ಆರೋಪಿ ಪರಾರಿಯಾಗಿದ್ದ. ಕೃತ್ಯದ ಸಂಬಂಧ ಸಿಬ್ಬಂದಿ ದೂರು ನೀಡುತ್ತಿದ್ದಂತೆ, ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ತಿಳಿಸಿದರು.

'ಬೆಳ್ಳಂದೂರು, ಎಚ್‌ಎಸ್‌ಆರ್ ಲೇಔಟ್, ಹುಳಿಮಾವು, ಕೊತ್ತನೂರು, ಮಹದೇವಪುರ, ರಾಮಮೂರ್ತಿನಗರ, ಸರ್ಜಾಪುರ, ಮಾರತ್ತಹಳ್ಳಿ ಹಾಗೂ ಕೆಂಗೇರಿ ಠಾಣೆ ವ್ಯಾಪ್ತಿಯ ಔಷಧ ಅಂಗಡಿಯಲ್ಲಿ ಆರೋಪಿ ಸುಲಿಗೆ ಮಾಡಿರುವುದು ಗೊತ್ತಾಗಿದೆ. ಈತನ ಬಂಧನದಿಂದ 13 ಪ್ರಕರಣಗಳು ಪತ್ತೆಯಾಗಿವೆ' ಎಂದು ಹೇಳಿದರು.

ಕೊಲೆಗೆ ಸಹೋದರಿ ಸಹಕಾರ • ಪತಿ ಕಾಣೆ ಬಗ್ಗೆ ದೂರು ನೀಡಿದ್ದ ಆರೋಪಿ

ಗಂಡನ ಕೊಂದು ಗುಂಡಿಗೆ ಎಸೆದ ಪತ್ನಿ

ಪ್ರಜಾವಾಣಿ ವಾರ್ತೆ



ಶಕೀಲ್



ನಜೀರಾ



ಕಾಶ್ಮೀರಿ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಶಕೀಲ್ ಅಕ್ತರ್ ಸೈಫಿ (28) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಎರಡನೇ ಪತ್ನಿ ನಜೀರಾ ಕಟುನ್ (25) ಹಾಗೂ ಅವರ ಸಹೋದರಿ ಕಾಶ್ಮೀರಿ (28) ಎಂಬುವವರನ್ನು ಬಂಧಿಸಿದ್ದಾರೆ.

'ಕೋಗಿಲು ಬಡಾವಣೆಯಲ್ಲಿರುವ ಕಟ್ಟಡವೊಂದರ ಶೌಚ ಗುಂಡಿಯಲ್ಲಿ ಅ.14ರಂದು ಶಕೀಲ್ ಮೃತದೇಹ ಪತ್ತೆಯಾಗಿತ್ತು. ಆರಂಭದಲ್ಲಿ ಗುರುತು ಸಿಕ್ಕಿರಲಿಲ್ಲ. ಜೊತೆಗೆ, ಪತಿ ಕಾಣೆಯಾದ ಬಗ್ಗೆ ಪತ್ನಿ ನಜೀರಾ ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ಪತ್ನಿಯೇ ಕೊಲೆ ಆರೋಪಿ ಎಂಬುದು ಗೊತ್ತಾಯಿತು' ಎಂದು ಪೊಲೀಸರು ಹೇಳಿದರು.

'ಬಿಹಾರದ ಶಕೀಲ್, ನಗರದಲ್ಲಿ ಕಾರ್ಯಕ್ರಮಗಳ ವಿದ್ಯುತ್ ಅಲಂಕಾರದ ಏಜೆನ್ಸಿ ನಡೆಸುತ್ತಿದ್ದರು. ಎರಡು ಮದುವೆಯಾಗಿದ್ದ ಇವರು, ಮತ್ತೊಬ್ಬ ಯುವತಿ ಜೊತೆ ಸಲುಗೆ ಇಟ್ಟುಕೊಂಡಿದ್ದರು. ಇದರಿಂದ ಸಿಟ್ಟಾದ ಎರಡನೇ ಪತ್ನಿ ನಜೀರಾ, ಸಹೋದರಿ ಕಾಶ್ಮೀರಿ ಸಹಾಯದಿಂದ ಕೊಲೆ ಮಾಡಿದ್ದರು' ಎಂದು ತಿಳಿಸಿದರು.

ಬಿಹಾರಕ್ಕೆ ವಾಪಸು ಹೋದ ಮೊದಲ ಪತ್ನಿ: 'ಶಕೀಲ್, ತಮ್ಮ ಮೊದಲ ಪತ್ನಿ ಹಾಗೂ ಮಕ್ಕಳ ಜೊತೆ ಆರು ವರ್ಷಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದರು. ಕೋಗಿಲು ಲೇಔಟ್‌ನಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ಮೊದಲ ಪತ್ನಿ ಜೊತೆ ಜಗಳವಾಡುತ್ತಿದ್ದ ಶಕೀಲ್, ಮನೆ ಖರ್ಚಿಗೆ ಹಣ ಕೊಡುತ್ತಿರಲಿಲ್ಲ. ಇದೇ ಸಂದರ್ಭದಲ್ಲಿ ನಜೀರಾ ಅವರನ್ನು ಎರಡನೇ ಮದುವೆಯಾಗಿದ್ದ ಶಕೀಲ್, ಅವರನ್ನೂ ತಮ್ಮ ಮನೆಯಲ್ಲಿ ಇರಿಸಿಕೊಂಡಿದ್ದರು. ಮೊದಲ ಹಾಗೂ ಎರಡನೇ ಪತ್ನಿ ನಡುವೆ ಜಗಳ ಶುರುವಾಗಿತ್ತು. ಇದರಿಂದಾಗಿ ಶಕೀಲ್, ನಜೀರಾ ಅವರಿಗೆ ಬೇರೊಂದು ಮನೆ ಮಾಡಿ ಪ್ರತ್ಯೇಕವಾಗಿ ಇರಿಸಿದ್ದರು.'

'ಮೊದಲ ಪತ್ನಿ ಕಡೆಗೆ ಹೋಗುವುದನ್ನೇ ನಿಲ್ಲಿಸಿದ್ದ ಶಕೀಲ್, ನಜೀರಾ ಮನೆಯಲ್ಲೇ ಉಳಿದುಕೊಳ್ಳುತ್ತಿದ್ದರು. ಇದರಿಂದ ಬೇಸತ್ತ ಮೊದಲ ಪತ್ನಿ, ಕೆಲ ತಿಂಗಳ ಹಿಂದೆಯಷ್ಟೇ ಬಿಹಾರಕ್ಕೆ ವಾಪಸು ಹೋಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಪಕ್ಕದ ಮನೆ ಯುವತಿ ಜೊತೆ ಸಲುಗೆ: 'ನಜೀರಾ ಜೊತೆ ಉಳಿದುಕೊಂಡಿದ್ದ ಶಕೀಲ್, ಪಕ್ಕದ ಮನೆಯಲ್ಲಿದ್ದ ಯುವತಿಯೊಬ್ಬರ ಜೊತೆ ಸಲುಗೆ ಬೆಳೆಸಿದ್ದರು. ಅವರ ಜೊತೆ ಸುತ್ತಾಡುತ್ತಿದ್ದರು. ಯುವತಿಯ ಖರ್ಚಿಗೆ ಹಣ ನೀಡುತ್ತಿದ್ದರು. ನಜೀರಾ ಅವರ ಮನೆ ನಿರ್ವಹಣೆಗೆ ಹಣ ಕೊಡುವುದನ್ನು ನಿಲ್ಲಿಸಿದ್ದರು' ಎಂದು ಪೊಲೀಸರು ಹೇಳಿದರು.

'ಯುವತಿ ಜೊತೆ ಸುತ್ತಾಡದಂತೆ ನಜೀರಾ ತಾಕೀತು ಮಾಡಿದ್ದರು. 'ನನ್ನಿಷ್ಟದಂತೆ ಇರುತ್ತೇನೆ. ನೀನು ಬೇಕಾದರೆ ಮನೆ ಬಿಟ್ಟು ಹೋಗು, ತಲಾಖ್ ಕೊಡುತ್ತೇನೆ' ಎಂದು ಶಕೀಲ್ ಬೆದರಿಸಿದ್ದರು. ಜೊತೆಗೆ, ನಿತ್ಯವೂ ನಜೀರಾ ಅವರಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದರು' ಎಂದು ತಿಳಿಸಿದರು.

ಕುತ್ತಿಗೆ ಬಿಗಿದು ಹತ್ಯೆ: 'ಪತಿ ಕಿರುಕುಳ ವಿಷಯವನ್ನು ಸಹೋದರಿ ಕಾಶ್ಮೀರಿ ಅವರಿಗೆ ತಿಳಿಸಿದ್ದ ನಜೀರಾ, ಕೊಲೆ ಮಾಡಲು ಸಂಚು ರೂಪಿಸಿದ್ದರು. ಅದರಂತೆ, ಸಹೋದರಿ ಮನೆಗೆ ಬಂದು ಉಳಿದುಕೊಂಡಿದ್ದರು. ಅ. 10ರಂದು ರಾತ್ರಿ ಮಲಗಿದ್ದ ಶಕೀಲ್‌ನ ಕುತ್ತಿಗೆಯನ್ನು ನಜೀರಾ ಹಿಸುಕಿದ್ದರು. ಎಚ್ಚರವಾಗಿದ್ದ ಶಕೀಲ್, ಪತ್ನಿಯನ್ನು ತಳ್ಳಿದ್ದರು' ಎಂದು ಪೊಲೀಸರು ಹೇಳಿದರು.

'ಕುತ್ತಿಗೆ ಹಿಸುಕಿದ್ದರಿಂದ ಉಸಿರಾಟಕ್ಕೆ ಸಮಸ್ಯೆಯಾಗಿ ಶಕೀಲ್ ಒದ್ದಾಡುತ್ತಿದ್ದರು. ಇದೇ ಸಂದರ್ಭದಲ್ಲಿ ನಜೀರಾ, ಕುತ್ತಿಗೆಗೆ ವೇಲ್‌ನಿಂದ ಸುತ್ತಿ ಬಿಗಿದಿದ್ದರು. ಸಹೋದರಿ ಕಾಶ್ಮೀರಿ, ಶಕೀಲ್ ಅಲುಗಾಡದಂತೆ ಕಾಲುಗಳನ್ನು ಗಟ್ಟಿ ಹಿಡಿದಿದ್ದರು. ಕೆಲ ನಿಮಿಷಗಳಲ್ಲಿ ಶಕೀಲ್ ಉಸಿರುಗಟ್ಟಿ ಮೃತಪಟ್ಟಿದ್ದರು' ಎಂದು ತಿಳಿಸಿದರು.

'ಮೃತದೇಹವನ್ನು ಬೆಡ್‌ಶೀಟ್‌ನಲ್ಲಿ ಸುತ್ತಿದ್ದ ಆರೋಪಿಗಳು, ಕಟ್ಟಡವೊಂದರ ಶೌಚ ಗುಂಡಿಗೆ ಎಸೆದಿದ್ದರು. ಮರುದಿನವೇ ಠಾಣೆಗೆ ಬಂದಿದ್ದ ನಜೀರಾ, ಪತಿ ಕಾಣೆಯಾದ ಬಗ್ಗೆ ದೂರು ನೀಡಿದ್ದರು. ಅ. 14ರಂದು ಮೃತದೇಹ ಪತ್ತೆಯಾಗಿತ್ತು' ಎಂದು ಹೇಳಿದರು.

'ಎರಡು ಮದುವೆಯಾಗಿದ್ದ ಶಕೀಲ್, ಮತ್ತೊಬ್ಬ ಯುವತಿ ಜೊತೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದರು. ನಮ್ಮ ಜೀವನಕ್ಕೂ ಹಣ ಕೊಡುತ್ತಿರಲಿಲ್ಲ. ಇದರಿಂದ ಬೇಸತ್ತು ಕೊಲೆ ಮಾಡಿದೆ' ಎಂಬುದಾಗಿ ಪತ್ನಿ ನಜೀರಾ ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಆದೇಶ ಉಲ್ಲಂಘನೆ: ವಿಚ್ಛೇದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತಿಯ ಜೊತೆ ಬಾಳುವೆ ಮುಂದುವರಿಸುವಂತೆ ಕೋರ್ಟ್ ಆದೇಶವಿದ್ದರೂ ಪತ್ನಿ ಅದನ್ನು ಪಾಲಿಸದೇ ಹೋದರೆ ಅದು ವಿವಾಹ ವಿಚ್ಛೇದನಕ್ಕೆ ಆಧಾರವಾಗಲಿದೆ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪತಿ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿರುವ ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಮತ್ತು ನ್ಯಾಯಮೂರ್ತಿ ಜಿ. ಬಸವರಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠವು ವಿಚ್ಛೇದನ ಮಂಜೂರು ಮಾಡಿದೆ.

'ಕೌಟುಂಬಿಕ ನ್ಯಾಯಾಲಯವು ವೈವಾಹಿಕ ಹಕ್ಕು ಪುನರ್ ಸ್ಥಾಪನೆ ಸಂಬಂಧ ಏಕಪಕ್ಷೀಯ ಆದೇಶ ಹೊರಡಿಸಿ ಪತಿ ಸೇರುವಂತೆ ಆದೇಶಿಸಿದೆ. ಆದರೆ, ಒಂದೂವರೆ ವರ್ಷ ಕಳೆದರೂ ಪತ್ನಿ ಈ ಆದೇಶ ಪಾಲಿಸಿಲ್ಲ. ಹೀಗಾಗಿ, ಈ ಆದೇಶ ಉಲ್ಲಂಘನೆಯೇ ವಿವಾಹ ವಿಚ್ಛೇದನಕ್ಕೆ ಆಧಾರ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಸಲಿಂಗ ವಿವಾಹ: ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಲಿಂಗ ಜೋಡಿಗಳ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ಸಾಧ್ಯವಿಲ್ಲ ಎನ್ನುವ ಸುಪ್ರೀಂ ಕೋರ್ಟ್ ಸಂವಿಧಾನ ಪೀಠದ ತೀರ್ಪು ನಿರಾಸೆ ತಂದಿದೆ' ಎಂದಿರುವ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಕಾರ್ಯಕರ್ತರು, ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ.

'ವಿಶೇಷ ವಿವಾಹ ಕಾಯ್ದೆ ವಿಷಯವನ್ನು ಸಂಸತ್ತು ನಿರ್ಧರಿಸಬೇಕು. ಈ ಕುರಿತು ಕೇಂದ್ರ ಕ್ಯಾಬಿನೆಟ್ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ತಕ್ಷಣ ಉನ್ನತ ಅಧಿಕಾರ ಸಮಿತಿ ರಚಿಸಬೇಕು. ಭೂಮಿಯ ಮೇಲೆ ವಾಸಿಸುವ ಎಲ್ಲ ಮಾನವರೂ ಮದುವೆಯ ಹಕ್ಕು ಹೊಂದಲು ಅವಕಾಶ ನೀಡಬೇಕು. ಭಾರತೀಯರಿಗೆ ನಾಗರಿಕ ಒಕ್ಕೂಟಗಳ ಹಕ್ಕು ಮತ್ತು ದತ್ತು ಪಡೆಯುವ ಹಕ್ಕನ್ನು ನಿರಾಕರಿಸುವ ಸಂದರ್ಭದಲ್ಲಿ ಸಲಿಂಗಿಗಳ ಅಂತರ್ಗತ ಮಾನವೀಯ ತಳಹದಿಯ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕು' ಎಂದು ಸಮುದಾಯದ ಕಾರ್ಯಕರ್ತರಾದ ಅಕ್ಕೈ ಪದ್ಮಶಾಲಿ, ಎಂ.ರಕ್ಷಿತಾ, ಅಬೇದಾ ಬೇಗಂ, ಮಾಳವೀಕ, ಪ್ರಕಾಶ್ ರಾಜ್, ಮಾಯಾ ಮತ್ತಿತರರು ಒತ್ತಾಯಿಸಿದ್ದಾರೆ.

'ವಿಶೇಷ ವಿವಾಹ ಕಾಯ್ದೆ ಮತ್ತು ಇತರ ಕಾನೂನುಗಳಲ್ಲಿನ ತಾರತಮ್ಯ ನಿವಾರಣೆಗೆ ಸಂಸತ್ತು ಕ್ರಮಕೈಗೊಳ್ಳಬೇಕು ಎಂಬ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ತರ್ಕಗಳು ಸ್ವಾಗತಾರ್ಹ' ಎಂದಿದ್ದಾರೆ.

'ಮದುವೆ ಸೇರಿದಂತೆ ಸಲಿಂಗಿಗಳ ಹಕ್ಕುಗಳ ಸಂಪೂರ್ಣ ಶ್ರೇಣಿಯನ್ನು ಉನ್ನತಾಧಿಕಾರ ಸಮಿತಿಯು ಚರ್ಚಿಸುತ್ತದೆ ಮತ್ತು ಸಂಸತ್ತಿಗೆ ಸೂಕ್ತ ಶಿಫಾರಸು ಮಾಡುತ್ತದೆ ಎನ್ನುವ ಭರವಸೆ ಇದೆ. ಸಂಸತ್ತು ಈ ಕುರಿತು ಸೂಕ್ತ ಕಾನೂನು ರೂಪಿಸಬೇಕು. ಅದಕ್ಕಾಗಿ ಲೈಂಗಿಕ ಅಲ್ಪಸಂಖ್ಯಾತರಿಗೂ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವ ಅಗತ್ಯವಿದೆ. ಸಮಾನತೆಯ ಸಂವಿಧಾನದ ದೃಷ್ಟಿಕೋನದಿಂದಲೂ ಇಂತಹ ಬೇಡಿಕೆ ಈಡೇರಿಸುವುದು ಮಹತ್ವದ್ದಾಗಿದೆ' ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.



ಮಾನವ ಸಂಪನ್ಮೂಲ ವಿಭಾಗದಲ್ಲಿ ಕೈಗೊಂಡ ವಿನೂತನ ಕಾರ್ಯಕ್ಕೆ ಕೆಎಸ್‌ಆರ್‌ಟಿಸಿಗೆ ಪ್ರತಿಷ್ಠಿತ 'ಗೋವಾ ಲೀಡ್‌ಶಿಪ್ ಬೆಸ್ಟ್ ಎಂಪ್ಲಾಯರ್ ಬ್ರ್ಯಾಂಡ್–2023' ಪ್ರಶಸ್ತಿ ನೀಡಲಾಯಿತು. ಗೋವಾದಲ್ಲಿ ವಿಶ್ವ ಉತ್ಪಾದನಾ ಕಾಂಗ್ರೆಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿಗಮದ ಚಿತ್ರದುರ್ಗದ ವಿಭಾಗೀಯ ನಿಯಂತ್ರಣಾಧಿಕಾರಿ ಸಿದೇಶ್ವರ ಹೆಬ್ಬಾಳ್ ಹಾಗೂ ಉಗ್ರಾಣ–ಖರೀದಿ ನಿಯಂತ್ರಣಾಧಿಕಾರಿ ಶಿವಾನಂದ ಕವಳಿಕಾಯಿ ಅವರು ಪ್ರಶಸ್ತಿ ಸ್ವೀಕರಿಸಿದರು. ಚೆರ್ರಿ ಟ್ರೀ ಕಾನ್ಸೆಪ್ಟ್ಸ್ ಸಂಸ್ಥಾಪಕಿ ರೀನಾ ಬೇರಟೋ ಶಂಕರ್ ಹಾಗೂ ಗೌಮಾನಿಯಾ ಎಲ್‌ಎಲ್‌ಪಿಯ ನಿರ್ದೇಶಕಿ ರಫೀನ ಶೇಕ್ ಇದ್ದರು

ಎಐ ಆಧಾರಿತ ತಂತ್ರಜ್ಞಾನ ಎಕ್ಸ್–ರೇ: ಅಳವಡಿಕೆ

ಬೆಂಗಳೂರು: ನಿಖರವಾಗಿ ರೋಗ ಪತ್ತೆ ಮಾಡಲು ಇಲ್ಲಿನ ಚಿನ್ಮಯ ಮಿಷನ್ ಆಸ್ಪತ್ರೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ 'ಸೀಮೆನ್ಸ್ ಮಲ್ಟಿಕ್ಸ್ ವಿಎ 20' ಎಕ್ಸ್–ರೇ ಉಪಕರಣವನ್ನು ಅಳವಡಿಸಿಕೊಂಡಿದ್ದು, ಈ ಉಪಕರಣಕ್ಕೆ ಗುರುವಾರ ಚಾಲನೆ ದೊರೆತಿದೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಕರಣ ಉದ್ಘಾಟಿಸಿದ ಆಸ್ಪತ್ರೆಯ ಸಿಇಒ ಗೋಪಾಲ್ ಹೊಸೂರ್, 'ವಿಶ್ವ ದರ್ಜೆಯ ಆರೋಗ್ಯ ಸೇವೆ ಒದಗಿಸುವ ಗುರಿಯನ್ನು ನಾವು ಹೊಂದಿದ್ದೇವೆ. ಕಡಿಮೆ ವಿಕಿರಣ ಹೊರಸೂಸುವ ಈ ಉಪಕರಣ, ರೋಗಕ್ಕೆ ಸಂಬಂಧಿಸಿದಂತೆ ಹೆಚ್ಚು ನಿಖರವಾದ ಚಿತ್ರಣ ಒದಗಿಸುವ ಸಾಮರ್ಥ್ಯ ಹೊಂದಿದೆ. 3ಡಿ ಕ್ಯಾಮೆರಾ ಪರೀಕ್ಷೆಯ ನಿಖರತೆ ಹೆಚ್ಚಿಸುತ್ತದೆ' ಎಂದರು.

ಸಚಿವ ಮಲ್ಲಿಕಾರ್ಜುನ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಮನೆಯಲ್ಲಿ ವನ್ಯಜೀವಿಗಳನ್ನು ಅಕ್ರಮವಾಗಿ ಪೋಷಣೆ ಮಾಡಿದ ಆರೋಪದಡಿ ಗಣಿ ಮತ್ತು ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಎಸ್.ಎಸ್. ಮಲ್ಲಿಕಾರ್ಜುನ ಮತ್ತು ಅವರ ಅಣ್ಣ ಎಸ್.ಎಸ್. ಗಣೇಶ್, ಸಂಪಣ್ಣ ಮುತಾಲಿಕ್ ಹಾಗೂ ಜಿ.ಎಂ. ಕರಿಬಸಪ್ಪ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರಣ್ಯ ಹಾಗೂ ಪೊಲೀಸ್ ಅಧಿಕಾರಿಗಳು ಪ್ರಕರಣ ದಾಖಲಿಸುವಲ್ಲಿ ವನ್ಯಜೀವಿ ಅಪರಾಧ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅಂತೆಯೇ, ದಾವಣಗೆರೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಅರ್ಜಿದಾರರ ವಿರುದ್ಧದ ಆರೋಪಗಳನ್ನು ಸಂಜ್ಞೇಯ ಅಪರಾಧ ಎಂದು ಪರಿಗಣಿಸಿರುವುದು ಗೊಂದಲಮಯವಾಗಿದೆ ಮತ್ತು ತನಿಖೆಗೆ ಆದೇಶಿಸುವಲ್ಲಿ ಲೋಪ ಎಸಗಲಾಗಿದೆ' ಎಂದು ನ್ಯಾಯಪೀಠ ಹೇಳಿದೆ.

'ತನಿಖಾಧಿಕಾರಿಯು ತನಿಖೆಯ ಪ್ರಕ್ರಿಯೆಯನ್ನೇ ತಲೆಕೆಳಗು ಮಾಡಿದ್ದು ಸರಿಪಡಿಸಲಾಗದಷ್ಟು ದೋಷಗಳು ಕಂಡುಬಂದಿವೆ. ಹೀಗಾಗಿ, ಪ್ರಕರಣದ ವಿಚಾರಣೆಗೆ ಅನುಮತಿ ನೀಡಿದರೆ ಅದು ಕಾನೂನು ಪ್ರಕ್ರಿಯೆಯ ದುರುಪಯೋಗ ಆದಂತೆ' ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನಿಧನ ವಾರ್ತೆ

ಲಕ್ಷ್ಮಮ್ಮ



ಲಕ್ಷ್ಮಮ್ಮ

ನೆಲಮಂಗಲ: ಪುರಸಭೆ ಮಾಜಿ ಅಧ್ಯಕ್ಷ ಮುರಾರಯ್ಯ ಅವರ ಪತ್ನಿ ಲಕ್ಷ್ಮಮ್ಮ(79) ಗುರುವಾರ ನಿಧನರಾದರು. ಇವರಿಗೆ ಮೂವರು ಪುತ್ರರು ಮತ್ತು ಪುತ್ರಿ ಇದ್ದಾರೆ. ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಹಲ್ಲೇಗೌಡನಹಳ್ಳಿಯ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಬೆಟ್ಟಹಲಸೂರು ಗ್ರಾಮಸಭೆಯಲ್ಲಿ ಅಧ್ಯಕ್ಷ ಹೇಳಿಕೆ

'ಕಾಮಗಾರಿ ಪೂರ್ಣಗೊಳಿಸಲು ಪ್ರಯತ್ನ'

ಪ್ರಜಾವಾಣಿ ವಾರ್ತೆ

ಯಲಹಂಕ: ನೆಲ್ಲುಕುಂಟೆಯ ಗ್ರಾಮ ಠಾಣಾ ಜಾಗದ ಸರ್ವೆ ನಡೆಸಬೇಕೆಂದು ತಹಶೀಲ್ದಾರ್‌ಗೆ ಪ್ರಸ್ತಾವ ಸಲ್ಲಿಸಲಾಗಿದೆ. ಸರ್ವೆ ಕಾರ್ಯ ಪೂರ್ಣಗೊಂಡ ನಂತರ ಬಡವರಿಗೆ ನಿವೇಶನಗಳನ್ನು ಹಂಚಲು ಯೋಜನೆ ರೂಪಿಸಲಾಗಿದೆ ಎಂದು ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಂ.ನಾಗೇಶ್ ತಿಳಿಸಿದರು.

ಗ್ರಾಮಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪಂಚಾಯಿತಿ ವ್ಯಾಪ್ತಿಯಲ್ಲಿ ಒಳಚರಂಡಿ ಮತ್ತು ರಾಜಕಾಲುವೆ ನಿರ್ಮಾಣ, ಕುದುರೆಗೆರೆ ರಸ್ತೆಯಲ್ಲಿ ರೈಲ್ವೆ ಕೆಳಸೇತುವೆ ಸಮಸ್ಯೆ, ಬೆಟ್ಟಹಲಸೂರು ಕೆರೆ ಸುತ್ತ ನಡಿಗೆ ಪಥ, ಸಿ.ಟಿ.ಆರ್ ರಸ್ತೆಯ ಜೋಮಾಲಕುಂಟೆ ಬಳಿ ಉದ್ಯಾನ ನಿರ್ಮಾಣ ಕಾಮಗಾರಿ ಬಾಕಿಯಿವೆ. ವರ್ಷದೊಳಗಾಗಿ ಈ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಸವಲತ್ತುಗಳ ವಿತರಣೆ: ಫಲಾನುಭವಿಗಳಿಗೆ 94 ಸಿಸಿ ಅಡಿಯಲ್ಲಿ ಹಕ್ಕುಪತ್ರ ಮತ್ತು ಇ-ಖಾತಾ, ಪಿಂಚಣಿ ಆದೇಶಪತ್ರ, ಭಾಗ್ಯಲಕ್ಷ್ಮಿ ಬಾಂಡ್ ಹಾಗೂ ಎಸ್ಸೆಸ್ಸೆಲ್ಸಿ ಪಿಯುಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಚೆಕ್ ವಿತರಿಸಲಾಯಿತು.

ಉಪಾಧ್ಯಕ್ಷೆ ವಿಮಲಾ ಎಸ್.ಕೆ.ಗಣೇಶ್, ಸದಸ್ಯರಾದ ಬಿ.ಆರ್. ಪ್ರವೀಣ್, ಟಿ.ಎಸ್.ನವೀನ್ ಕುಮಾರ್, ಪಿ.ಎಸ್.ರಮ್ಯ ವೇಣುಗೋಪಾಲ್, ಬಿ.ಎಸ್.ಮೋಹನ್ ಸಿದ್ದರಾಜು, ಪಿಡಿಒ ಕವಿತ.ಎಸ್, ಕಾರ್ಯದರ್ಶಿ ಎಂ.ಸುಬ್ರಮಣ್ಯ ಇದ್ದರು.



ಬೆಟ್ಟಹಲಸೂರು ಗ್ರಾ.ಪಂ.ಯ ಗ್ರಾಮಸಭೆಯಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಯಿತು

ನಗರದಲ್ಲಿ ಇಂದು

ಎಚ್.ಎಸ್. ನಿರಂಜನ ಆರಾಧ್ಯ ಅವರ 'ಜೀವ ಬದಲಿಸಿದ ಜೀವ ವಿಜ್ಞಾನಿಗಳು', ತ.ನಂ. ಜ್ಞಾನೇಶ್ವರ ಅವರ 'ಪ್ರಾತಃಸ್ಮರಣೀಯರು' **ಪುಸ್ತಕಗಳ ಬಿಡುಗಡೆ:** ಹೀ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ಆರ್.ಎನ್. ರಾಜಾನಾಯಕ್, ಪುಸ್ತಕಗಳ ಕುರಿತು: ಎಲ್.ಎನ್. ಮುಕುಂದರಾಜ್, ಶಕುಂತಲಾ ಕತ್ರೆ, ಉಪಸ್ಥಿತಿ: ಕೆ.ಬಿ. ಮಹದೇವಪ್ಪ, ನಾ. ಶ್ರೀಧರ್, ಈ. ಬಸವರಾಜು, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಅನ್ನದಾನಯ್ಯ ಪುರಾಣಿಕ ಸ್ಮಾರಕ ದತ್ತಿ ಉಪನ್ಯಾಸ: 'ಕರ್ನಾಟಕ ಸಂಸ್ಕೃತಿಗೆ ವಚನಕಾರರ ಕೊಡುಗೆ': ಚಿತ್ತಯ್ಯ ಪೂಜಾರ್, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಚಂದ್ರಿಕಾ ಪುರಾಣಿಕ, ಜೀರಿಗೆ ಲೋಕೇಶ್, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಸ್ಥಳ: ಶೇಷಾದ್ರಿಪುರ ಸಂಜೆ ಕಾಲೇಜು ಸಭಾಂಗಣ, ಶೇಷಾದ್ರಿಪುರ, ಸಂಜೆ 6

ನವರಾತ್ರಿ ವಿಶೇಷ

ಸಾಯಿ ಚಂಡಿಕಾಂಬ ಸಪ್ತಾಹ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ ಮತ್ತು ಸಂಜೆ 5 ರಿಂದ

'ನಿಮಿಷಾಂಬಾದೇವಿಗೆ ಅನ್ನಪೂರ್ಣೇಶ್ವರಿ ಅಲಂಕಾರ': ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾ ದೇವಿ ದೇವಸ್ಥಾನ, ಅಕ್ಕಿಪೇಟೆ ಹತ್ತಿರ, ಓ.ಟಿ.ಸಿ. ರಸ್ತೆ

ದೇವಿಗೆ ಏಲಕ್ಕಿ, ಸರಸ್ವತಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್, ಮಲ್ಲೇಶ್ವರ

ಶರನ್ನವರಾತ್ರಿ ಮಹೋತ್ಸವ: ಮಹಾಗಣೇಶ ಪೂಜೆ, ಅನುಜ್ಞಾ ಪೂಜೆ, ಮಹಾಗಣಪತಿ ಹೋಮ, ಸುಬ್ರಹ್ಮಣ್ಯ ಹೋಮ, ನವಗ್ರಹ ಹೋಮಬೆಳಿಗ್ಗೆ 9, ಪೂರ್ಣಾಹುತಿ, ಮಂಗಳಾರತಿ ಮಧ್ಯಾಹ್ನ 12.30, ವಾಸ್ತು ಶಾಂತಿ, ಚಂಡಿ ಕಲಶ ಸ್ಥಾಪನೆ ಸಂಜೆ 4.30, ಪೂರ್ಣಾಹುತಿ ಮಂಗಳಾರತಿ ರಾತ್ರಿ 8.30, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ವೇದ ವಿಜ್ಞಾನ ಮಹಾವಿದ್ಯಾಪೀಠ, ಕನಕಪುರ ಮುಖ್ಯರಸ್ತೆ

ಕಾತ್ಯಾಯಿನಿ ದೇವಿಯ ಆವಾಹನೆ, ಕಾತ್ಯಾಯಿನಿ ಹೋಮ, ಕುಂಕುಮಾರ್ಚನೆ, ಪುಷ್ಪಾರ್ಚನೆ, 108 ಜಪ ಪಾರಾಯಣ, ಚಂಡಿ ಪಾರಾಯಣ, ಮಹಾ ಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ

ದೇವಿಗೆ ಮಹಾಭಿಷೇಕ, ಸರಸ್ವತಿ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, ಸಂಗೀತ ಸಂಭ್ರಮ: ಕಲಾ ಸೌರಭ ವಿದ್ಯಾರ್ಥಿಗಳಿಂದ, ಸಂಜೆ 6.30ಕ್ಕೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ

ದೇವಿ ಸ್ತೋತ್ರ ಪಠಣ, ಚಲನಚಿತ್ರ ಉತ್ಸವ: 'ಸಿಗ್ನಲ್ ಮ್ಯಾನ್–1971' ಚಲನಚಿತ್ರ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5ರಿಂದ

ದೇವಿಗೆ ಶೃಂಗೇರಿ ಸರಸ್ವತಿ ಅಲಂಕಾರ: ಭಜನೆ, ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5.30ರಿಂದ

ದೇವಿಗೆ ಅಭಿಷೇಕ, ಸರಸ್ವತಿ ಅಲಂಕಾರ: ಲಲಿತಾ ಸಹಸ್ರನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6

ದುರ್ಗಾ ದೇವಿಗೆ 'ಕಾತ್ಯಾಯಿನಿ ದೇವಿ ಅಲಂಕಾರ': ಭಜನೆ: ವಿ.ಎಸ್. ಕೃಷ್ಣನ್ ಮತ್ತು ತಂಡ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾರಾಜಪುರ, ಸಂಜೆ 6

ದೇವಿಗೆ ಪೂಜೆ ಸರಸ್ವತಿ ಅಲಂಕಾರ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ಭಕ್ತಿ ಭಜನೆ: ಪದ್ಮಿನಿ ರಾಮು, ಲಲಿತಾ ಭಜನಾ ಮಂಡಳಿ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ಸಂಗೀತ ಕಾರ್ಯಕ್ರಮ: ಸುಷ್ಮಾ ಸಂತೋಷ್, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ದೇವಿಗೆ ಪದ್ಮಾವತಿ, ಹತ್ತಿ ಅಲಂಕಾರ: ಲಕ್ಷ್ಮಿ ಮೂಲ ಮಂತ್ರ ಹೋಮ, ಆಯೋಜನೆ ಮತ್ತು ಸ್ಥಳ: ಮಾರಮ್ಮ ಆಂಜನೇಯಸ್ವಾಮಿ ಸೇವಾ ಟ್ರಸ್ಟ್, ಚಿನ್ನಯ್ಯನಪಾಳ್ಯ, ಸಂಜೆ 6

ಯಲ್ಲಮ್ಮ ದೇವಿಗೆ ಸರಸ್ವತಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6.30

ದೇವಿಗೆ ವೀಣಾ ಸರಸ್ವತಿ ಅಲಂಕಾರ, ವಿದ್ಯಾಸರಸ್ವತಿ ಹೋಮ, ವೀಣಾ ವಾದನ: ಶುಭಾ ಶ್ರೀಕಾಂತ್, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನವವರ್ಣ

ನವರಾತ್ರಿಯ ಐದನೆಯ ದಿನ ಜಗನ್ಮಾತೆಯನ್ನು 'ಸ್ಕಂದಮಾತಾ' ಸ್ವರೂಪದಲ್ಲಿ ಪೂಜಿಸಲಾಗುತ್ತದೆ. ಸ್ಕಂದ ಎಂದರೆ ಕುಮಾರಸ್ವಾಮಿ; ರಾಕ್ಷಸರ ಸಂಹಾರಕ್ಕಾಗಿ ಜನಿಸಿದವನು. ದೇವಿಯ ಮಾತೃಸ್ವರೂಪವನ್ನು ಸ್ಕಂದಮಾತಾ ರೂಪದಲ್ಲಿ ನೋಡಬಹುದು. ಅವಳ ಮಾತೃಪ್ರೇಮ ವಿಶಾಲವಾದುದು; ಇಡಿಯ ಸೃಷ್ಟಿಯನ್ನೇ ತನ್ನ ಮಗುವಿನಂತೆ ಪೋಷಿಸುವವಳು, ಪ್ರೀತಿಸುವವಳು ಅವಳು. ಮಾತೃಪ್ರೇಮದ ಮುಖ್ಯಗುಣ ಎಂದರೆ ತ್ಯಾಗವೇ; ತನ್ನ ಹಿತಾಹಿತಗಳನ್ನು ಗಮನಿಸದೆ ಮಗುವಿನ ಆರೈಕೆಗೆ ತೊಡಗುವವಳು ತಾಯಿ. ಈ ತ್ಯಾಗಗುಣಕ್ಕೆ ಸಂಕೇತ ಕೇಸರಿಬಣ್ಣ. ಈ ಬಣ್ಣದಲ್ಲಿ ಸಂಭ್ರಮಿಸಿರುವವರ ಕೆಲವು ಚಿತ್ರಗಳು ಇಲ್ಲಿವೆ.

ಹಸಿರು ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಶುಕ್ರವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ... 7338018541


ತಿರಂಗಿಣಿ ಭಜನಾ ಮಂಡಳಿ, ದ್ವಾರಕನಗರ, ಬೆಂಗಳೂರು


ಪ್ರಿಯಾ ಮತ್ತು ಸ್ನೇಹಿತೆಯರು, ಬೆಂಗಳೂರು


ಪ್ರೊ. ಬಬಿತಾ ಹಾಗೂ ಸ್ನೇಹಿತೆಯರು, ಬೆಂಗಳೂರು


ಪದ್ಮಾ ಮತ್ತು ಸ್ನೇಹಿತೆಯರು, ಯಲಹಂಕ ಉಪನಗರ 4ನೇ ಹಂತ, ಬೆಂಗಳೂರು


ಅನು ಮತ್ತು ಗೆಳತಿಯರು, ಬೆಂಗಳೂರು


ಅನುಪಮಾ ಮತ್ತು ಕುಟುಂಬಸ್ಥರು, ಬೆಂಗಳೂರು


ಚಂದ್ರಿಕಾ ಮತ್ತು ತಂಡ, ವಿಜಯನಗರ, ಬೆಂಗಳೂರು


ಮಮತಾ ಮತ್ತು ಗೆಳತಿಯರು, ಬೆಂಗಳೂರು


ಪ್ರೀತಿ ನಯನಾ ಮತ್ತು ರುಷಿಕಾ, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು


ಅಶ್ವಿನಿ ಧ್ರುವ. ಬಾಪೂಜಿನಗರ, ಬೆಂಗಳೂರು


ಅನ್ವಿತಾ ಗುಡಗೆ, ಐಜೂರು, ರಾಮನಗರ


ಅರ್ಪಿತಾ, ಬಂಧನ, ಮುದ್ದೆಬಿಹಾಳ, ವಿಜಯಪುರ



ಕಲ್ಪನಾ ಮತ್ತು ಸ್ನೇಹಿತೆಯರು, ಯಾದಗಿರಿ



ಉಪನ್ಯಾಸಕಿಯರು, ದಿ ಮಾಸ್ಟರ್ ಪಿಯು ಕಾಲೇಜು, ತುಮಕೂರು


ಅನಿತಾ ಮತ್ತು ಸ್ನೇಹಿತೆಯರು, ಬೆಂಗಳೂರು


ದೀನಮಣಿ ಮತ್ತು ಗೆಳತಿಯರು, ಹೆಬ್ಬಾಳ, ಕೆಂಪಾಪುರ, ಬೆಂಗಳೂರು t


ಗೌರಿ ಮತ್ತು ಸ್ನೇಹಿತೆಯರು, ಆರ್‌ಆರ್ ನಗರ, ಬೆಂಗಳೂರು


ಪೂರ್ಣಿಮಾ ಶೇರ್ ಮತ್ತು ಕುಟುಂಬಸ್ಥರು, ಮಂಗಳೂರು


ಕೋಮಲಾ ಮತ್ತು ಕವನಶುಭ, ಆನೇಕಲ್, ಬೆಂಗಳೂರು


ಅಮಿತಾ ಮತ್ತು ನಮಿತಾ, ಉಡುಪಿ


ಆಶಾ, ಕಮಲಾ, ಹೊಸಕೆರೆಹಳ್ಳಿ, ಬೆಂಗಳೂರು


ಸಿಬ್ಬಂದಿ, ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಯಲಹಂಕ, ಬೆಂಗಳೂರು



ಸಿಬ್ಬಂದಿ, ಬ್ಲೂಬೆಲ್ ಪಬ್ಲಿಕ್ ಶಾಲೆ, ಹೊಸರಸ್ತೆ, ಬೆಂಗಳೂರು


ಸುಜಾತಾ ಮತ್ತು ಗೆಳತಿಯರು, ಹಾಸನ


ಸುಷ್ಮಾ ಪಿ ಮತ್ತು ಸಹೋದ್ಯೋಗಿಗಳು, ಪೂರ್ಣಪ್ರಜ್ಞ ಶಿಕ್ಷಣ ಕೇಂದ್ರ ಸದಾಶಿವನಗರ, ಬೆಂಗಳೂರು


ಹರೇ ಶ್ರೀನಿವಾಸ ಶ್ರೀ ನಿಕೇತನ ಭಜನಾ ಮಂಡಳಿ ಕೊಪ್ಪ

ಬಿನ್ನಿಪೇಟೆ ಹೂವಿನ ಮಾರುಕಟ್ಟೆ • ಸುಸಜ್ಜಿತ ಮಳಿಗೆಗಳಿಗೆ ಬೀಗ, ತ್ರಿಶಂಕು ಸ್ಥಿತಿಯಲ್ಲಿ ವರ್ತಕರು

ಸೌಲಭ್ಯಗಳಿದ್ದರೂ ನಡೆಯದ ವಹಿವಾಟು

• ಖಲೀಲಅಹ್ಮದ ಶೇಖ



ಬಿನ್ನಿಪೇಟೆಯ ಎಪಿಎಂಸಿ ಹೂವಿನ ಮಾರುಕಟ್ಟೆಯ ಪ್ರವೇಶ ದ್ವಾರ



ಬಿನ್ನಿಪೇಟೆಯ ಎಪಿಎಂಸಿ ಹೂವಿನ ಮಾರುಕಟ್ಟೆಯ ಒಂದು ನೋಟ

ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ಬಿನ್ನಿಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು (ಎಪಿಎಂಸಿ) ಹೂವಿನ ವ್ಯಾಪಾರಿಗಳಿಗಾಗಿ ಸುಸಜ್ಜಿತ ಮಾರುಕಟ್ಟೆ ನಿರ್ಮಿಸಿದೆ. ಆದರೆ, ಇಲ್ಲಿ ರೈತರು, ಗ್ರಾಹಕರು ಬಾರದೇ ವ್ಯಾಪಾರ ವಹಿವಾಟು ನಡೆಯದೇ ಪ್ರಾಂಗಣವೆಲ್ಲ ಭಣಗುಡುತ್ತಿದೆ.

ಬಿನ್ನಿಪೇಟೆ ಎಪಿಎಂಸಿಯಲ್ಲಿ 1 ಎಕರೆ 20 ಗುಂಟೆ ಪ್ರದೇಶದಲ್ಲಿ ಹೂವಿನ ಮಾರುಕಟ್ಟೆ ನಿರ್ಮಿಸಲಾಗಿದೆ. ಸುಜ್ಜಿತ ಮಳಿಗೆಗಳಿವೆ. ಪ್ರತಿ ಮಳಿಗೆಗೆ ನೀರಿನ ಸಂಪರ್ಕವಿದೆ. ಪಾರ್ಕಿಂಗ್, ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಕೆಲವು ಮಳಿಗೆಗಳಲ್ಲಿ ವರ್ತಕರೂ ಇದ್ದಾರೆ. ಇಷ್ಟೆಲ್ಲ ಸೌಲಭ್ಯಗಳಿದ್ದ-ರೂ, ರೈತರು, ವ್ಯಾಪಾರಿಗಳು ಮತ್ತು ಗ್ರಾಹಕರು ಮಾತ್ರ ಬರುತ್ತಿಲ್ಲ. ಇದರಿಂದ, ಈಗಿರುವ ವರ್ತಕರು ಮಳಿಗೆಗೆ ಬಾಡಿಗೆ ಭರಿಸಲಾಗದೆ ಆರ್ಥಿಕ ಸಂಕಷ್ಟದಲ್ಲಿದ್ದಾ-ರೆ. ಹೆಚ್ಚುವರಿಯಾಗಿ 32 ಮಳಿಗೆಗಳನ್ನು ನಿರ್ಮಿಸಲಾಗಿದ್ದು, ಇನ್ನೂ ಅವುಗಳ ಹಂಚಿಕೆಯಾಗಿಲ್ಲ.

ಕೋವಿಡ್ ಸಂದರ್ಭದಲ್ಲಿ ಈ ಮಾರುಕಟ್ಟೆ ವಿಶಾಲವಾಗಿರುವ ಕಾರಣ, ನಗರದ ಎಲ್ಲ ಹೂವಿನ ವರ್ತಕರು ಬಿನ್ನಿಪೇಟೆಯಲ್ಲಿ ವ್ಯಾಪಾರ-ವಹಿವಾಟು ಮಾಡುತ್ತಿದ್ದರು. ಕೋವಿಡ್ ನಂತರ ಇಲ್ಲಿದ್ದ ಕೆಲ ವರ್ತಕರು ಮತ್ತೆ ಕೆ.ಆರ್. ಮಾರುಕಟ್ಟೆ, ಅವೆನ್ಯೂ ರಸ್ತೆ, ವಿಲ್ಸನ್ ಗಾರ್ಡನ್, ಸುಂಕದಕಟ್ಟೆ ಸೇರಿದಂತೆ ನಗರದ ವಿವಿಧ ರಸ್ತೆಗಳ ಬದಿಯಲ್ಲಿ ಹೂವಿನ ವ್ಯಾಪಾರ ಮಾಡುತ್ತಿದ್ದಾರೆ. ಹೀಗಾಗಿ ಇಲ್ಲಿಗೆ ಬರುತ್ತಿದ್ದ ರೈತರು, ಗ್ರಾಹಕರ ಸಂಖ್ಯೆ ಕಡಿಮೆಯಾಗಿದೆ. ಹೂವಿನ ವರ್ತಕರಿಗೆ ವ್ಯಾಪಾರವಿಲ್ಲದೇ 'ತ್ರಿಶಂಕು ಸ್ಥಿತಿ'ಗೆ ತಲುಪಿದ್ದಾರೆ.

'40ಕ್ಕೂ ಹೆಚ್ಚು ಉನ್ನತ ತಳಿ ಹೂವು ಮಾರಾಟಗಾರರಿಗೆ ಬಿನ್ನಿಪೇಟೆ ಎಪಿಎಂಸಿಯಿಂದ ಪರವಾನಿಗೆ ನೀಡಲಾಗಿದೆ. ಆದರೆ, ಅವರೆಲ್ಲರೂ ಈಗ ವಿಲ್ಸನ್ ಗಾರ್ಡನ್‌ನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಅಲ್ಲಿ ವ್ಯಾಪಾರ ಮಾಡಬಾರದು ಎಂದು ಕೋರ್ಟ್ ಆದೇಶ ನೀಡಿದೆ. ಆದರೂ, ಬಿಬಿಎಂಪಿ ಅಧಿಕಾರಿಗಳು ವ್ಯಾಪಾರ ಮಾಡಲು ಅವಕಾಶ ನೀಡಿದ್ದಾರೆ. ಅವರೆಲ್ಲರನ್ನೂ ಇಲ್ಲಿಗೆ ಸ್ಥಳಾಂತರಿಸಬೇಕು' ಎಂದು ನಾಡಪ್ರಭು ಕೆಂಪೇಗೌಡ ಹೂವಿನ ವ್ಯಾಪಾರಿಗಳ ಸಂಘದ ಉಪಾಧ್ಯಕ್ಷ ಆನಂದ್ ಕುಮಾರ್ ತಿಳಿಸಿದರು.

'ಬಿನ್ನಿಪೇಟೆ ಎಪಿಎಂಸಿ ಸಗಟು ಹೂವಿನ ಮಾರುಕಟ್ಟೆ-ಯಲ್ಲಿರುವ ಸೌಲಭ್ಯಗಳ ಬಗ್ಗೆ ರೈತರಲ್ಲಿ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು' ಎಂದು ಒತ್ತಾಯಿಸಿದರು.

'ಈ ಮಾರುಕಟ್ಟೆಗೆ ಮೇಲ್ಛಾವಣಿ ನಿರ್ಮಿಸಲು ಮತ್ತು ಬಾಳೆಕಾಯಿ ಮಂಡಿಯಿಂದ ಇಲ್ಲಿಗೆ ನೇರವಾಗಿ ಸಂಪರ್ಕ ಕಲ್ಪಿಸುವ ಸ್ಕೈವಾಕ್ ನಿರ್ಮಿಸಲು ಟೆಂಡರ್ ನೀಡಲಾಗಿದೆ. ಕೆಲ ದಿನಗಳಲ್ಲಿ ಕಾಮಗಾರಿ ಪ್ರಾರಂಭ-ವಾಗಲಿದೆ' ಎಂದು ಎಪಿಎಂಸಿ ಅಧಿಕಾ-ರಿಯೊಬ್ಬರು ತಿಳಿಸಿದರು.

'ಅನಧಿಕೃತವಾಗಿ ವ್ಯಾಪಾರ ಮಾಡುವ ಹೂವಿನ ವರ್ತಕರನ್ನು ಇಲ್ಲಿನ ಮಾರುಕಟ್ಟೆಗೆ ಸ್ಥಳಾಂತರಿಸ-ಬೇಕೆಂದು ಬಿಬಿಎಂಪಿ, ಪೊಲೀಸರಿಗೆ ಮನವಿ ಮಾಡಲಾಗಿದೆ. ಆದರೇ ಯಾರು ಸ್ಪಂದಿಸುತ್ತಿಲ್ಲ. ಎಪಿಎಂಸಿ ಕಾಯ್ದೆ ಇಲ್ಲದಿರುವುದರಿಂದ ನಾವು ಏನೂ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ' ಎಂದರು.

'ಹೂವಿನ ಅಂಗಡಿಗಳಿಗೆ ಬೀಗ'

'ಬಿನ್ನಿಪೇಟೆ ಹೂವಿನ ಮಾರುಕಟ್ಟೆಗೆ ಪ್ರತಿನಿತ್ಯ ಎರಡು ಹೂವಿನ ವಾಹನಗಳು ಮಾತ್ರ ಬರುತ್ತಿವೆ. ಕೆ.ಆರ್. ಮಾರುಕಟ್ಟೆಯಿಂದ ಹೂ ಖರೀದಿಸಿ ಇಲ್ಲಿ ಮಾರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ವ್ಯಾಪಾ-ರವಿಲ್ಲದ ಕಾರಣ ಬಾಡಿಗೆ ಭರಿಸಲಾಗುತ್ತಿಲ್ಲ. ಇಲ್ಲಿನ ಬಹುತೇಕ ಅಂಗಡಿಗಳಿಗೆ ಬೀಗ ಹಾಕಲಾಗಿದೆ' ಎಂದು ಸಂಘದ ಗೌರವ ಅಧ್ಯಕ್ಷ ಶಿವೇಗೌಡ, ಖಜಾಂಚಿ ಶ್ರೀಧರ ಮಾಹಿತಿ ನೀಡಿದರು.

ಅಂಕಿ ಅಂಶ

1 ಎಕರೆ 20 ಗುಂಟೆ — ಮಾರುಕಟ್ಟೆ ವಿಸ್ತೀರ್ಣ

98 ಮಳಿಗೆಗಳು

₹11 ಕೋಟಿ — ವೆಚ್ಚದಲ್ಲಿ ಮಾರುಕಟ್ಟೆ ನಿರ್ಮಾಣ




ಎಲ್ಲ ಹೂವಿನ ವರ್ತಕರು ಎಪಿಎಂಸಿ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಿದರೆ ಸೆಸ್ ರೂಪದಲ್ಲಿ ಸರ್ಕಾರಕ್ಕೆ ಹೆಚ್ಚು ಆದಾಯ ಬರಲಿದೆ.

ಶಿವೇಗೌಡ, ನಾಡಪ್ರಭು ಕೆಂಪೇಗೌಡ ಹೂವಿನ ವ್ಯಾಪಾರಿಗಳ ಸಂಘದ ಗೌರವ ಅಧ್ಯಕ್ಷ



ಅನಧಿಕೃತ ಹೂವಿನ ವ್ಯಾಪಾರಿಗಳನ್ನು ಬಿನ್ನಿಪೇಟೆ ಹೂವಿನ ಮಾರುಕಟ್ಟೆಗೆ ಸ್ಥಳಾಂತರಿಸಿದರೆ ಪ್ರಮುಖ ರಸ್ತೆಗಳಲ್ಲಿ ಉಂಟಾಗುವ ದಟ್ಟಣೆ ತಪ್ಪಲಿದೆ.

ಆನಂದ್ ಕುಮಾರ್, ನಾಡಪ್ರಭು ಕೆಂಪೇಗೌಡ ಹೂವಿನ ವ್ಯಾಪಾರಿಗಳ ಸಂಘ ಉಪಾಧ್ಯಕ್ಷ


ಕಾರ್ಯಕ್ರಮದಲ್ಲಿ 'ವಿಜ್ಞಾನದೊಳಗೊಂದು ಜೀವನ' ಕೃತಿಯನ್ನು ಚಂದ್ರಶೇಖರ ಕಂಬಾರ ಬಿಡುಗಡೆ ಮಾಡಿದರು. ಎಂ.ಎಸ್.ಎಸ್.ಮೂರ್ತಿ, ಸಿ.ಎನ್.ಆರ್.ರಾವ್, ಜವಾಹರಲಾಲ್ ನೆಹರೂ ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷ ಗಿರಿಧರ್ ಯು. ಕುಲಕರ್ಣಿ ಹಾಗೂ ಪ್ರಕಾಶಕ ಎ. ರಮೇಶ್ ಉಡುಪ ಇದ್ದಾರೆ.

'ಕನ್ನಡದಲ್ಲಿ ಮಾಹಿತಿ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜ್ಞಾನಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಅಷ್ಟಾಗಿ ಸಾಹಿತ್ಯ ಕೃತಿಗಳಿಲ್ಲ. ಆದ್ದರಿಂದ ಈ ಕೊರತೆಯನ್ನು ವಿಜ್ಞಾನಿಗಳೇ ನಿವಾರಿಸಬೇಕು' ಎಂದು ಸಾಹಿತಿ ಚಂದ್ರಶೇಖರ ಕಂಬಾರ ಹೇಳಿದರು.

ಜವಾಹರಲಾಲ್ ನೆಹರೂ ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರ ಹಾಗೂ ನವಕರ್ನಾಟಕ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿ.ಎನ್.ಆರ್. ರಾವ್ ಅವರ ಆತ್ಮಕಥನ 'ವಿಜ್ಞಾನದೊಳ-ಗೊಂದು ಜೀವನ' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಇರದಿದ್ದಾಗ ಶಿವರಾಮ ಕಾರಂತ ಅವರು ಈ ಕೊರತೆ ನೀಗಿಸಲು ಪ್ರಯ-ತ್ನಿಸಿದರು. ಕುವೆಂಪು ಅವರು ವಿಜ್ಞಾನಕ್ಕೆ ಸಂಬಂಧಿಸಿದ ಸಾಹಿತ್ಯ ಸೃಷ್ಟಿಗೆ ಪ್ರೋ-ತ್ಸಾಹಿಸಿದರು. ಭಾರತ ರತ್ನ ಪುರಸ್ಕೃತ ವಿಜ್ಞಾನಿ ಸಿ.ಎನ್.ಆರ್.ರಾವ್ ಅವರ ಆತ್ಮಕಥನ ಕನ್ನಡಕ್ಕೆ ಬಂದಿರುವುದು ನಮ್ಮ ಸುದೈವ. ಅವರನ್ನು ನೋಡಿದರೆ ಮಹಾನ್ ಋಷಿಯನ್ನು ನೋಡಿದಂತಾ-ಗುತ್ತದೆ' ಎಂದು ಹೇಳಿದರು.

ಉಪನ್ಯಾಸಕಿ ಹಾಗೂ ಸಿ.ಎನ್.ಆರ್. ರಾವ್ ಅವರ ಪತ್ನಿ ಇಂದುಮತಿ ರಾವ್, 'ಆತ್ಮಕಥನವನ್ನು ಎಂ.ಎಸ್.ಎಸ್. ಮೂರ್ತಿ ಅವರು ಸರಳ ಕನ್ನಡದಲ್ಲಿ ಅತ್ಯಂತ ಸುಂದರವಾಗಿ ಅನುವಾದಿ-ಸಿದ್ದಾರೆ. ಈ ಕೃತಿಯನ್ನು ಗ್ರಾಮೀಣ ಭಾಗದ ಮಕ್ಕಳಿಗೆ ತಲುಪಿಸುವ ಕಾರ್ಯವಾಗಬೇಕು' ಎಂದರು.

ಅನುವಾದಕ ಎಂ.ಎಸ್.ಎಸ್. ಮೂರ್ತಿ, '1700 ಸಂಶೋಧನಾ ಪ್ರಬಂಧ, 53 ಕೃತಿಗಳನ್ನು ರಚಿಸಿರುವ ಸಿ.ಎನ್.ಆರ್. ರಾವ್ ಅವರು ನಮಗೆಲ್ಲ ಸ್ಫೂರ್ತಿಯಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುಸ್ತಕ ಪರಿಚಯ

ಪುಸ್ತಕ: ವಿಜ್ಞಾನದೊಳಗೊಂದು ಜೀವನ
ಲೇಖಕರು: ಪ್ರೊ. ಸಿ.ಎನ್.ಆರ್.ರಾವ್
ಅನುವಾದ: ಎಂ.ಎಸ್.ಎಸ್.ಮೂರ್ತಿ
ಪುಟಗಳು: 232
ಬೆಲೆ: ₹ 275
ಪ್ರಕಾಶನ ನವಕರ್ನಾಟಕ ಪಬ್ಲಿಕೇಷನ್ಸ್

ಶರಣ್ ಪಂಪ್‌ವೆಲ್ ವಿರುದ್ಧದ ಎಫ್‌ಐಆರ್‌ಗೆ ಕೋರ್ಟ್ ತಡೆ

ಬೆಂಗಳೂರು: 'ಮಂಗಳೂರಿನ ಮಂಗಳಾದೇವಿ ಜಾತ್ರೆಯಲ್ಲಿ ಹಿಂದೂಗಳ ಸ್ಟಾಲ್ ಗಳಿಗೆ ಭಗವಾ ಧ್ವಜ ಕಟ್ಟಬೇಕು. ಭಗವಾ ಧ್ವಜ ಇದ್ದ ಮಳಿಗೆಗಳಲ್ಲಿ ಮಾತ್ರವೇ ಹಿಂದೂಗಳು ವ್ಯಾಪಾರ ನಡೆಸಬೇಕು' ಎಂಬ ಪ್ರಕಟಣೆ ಹೊರಡಿಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲಾ ವಿಶ್ವ ಹಿಂದೂ ಪರಿಷತ್ ಸಹ ಕಾರ್ಯದರ್ಶಿ ಶರಣ್ ಪಂಪ್ ವೆಲ್ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಶರಣ್ ಪಂಪ್‌ವೆಲ್ ಸಲ್ಲಿಸಿದ್ದ ಅರ್ಜಿಯನ್ನು ರಜಾಕಾಲದ ನ್ಯಾ-ಯಪೀಠದಲ್ಲಿದ್ದ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಪ್ರತಿವಾದಿ ಮಂಗಳೂರು ದಕ್ಷಿಣ ಪೊಲೀಸ್ ಠಾಣಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಕೋಮು ಸಾಮರಸ್ಯಕ್ಕೆ ಧಕ್ಕೆ ಉಂಟು ಮಾಡುವ ಉದ್ದೇಶದಿಂದ ಪ್ರಕಟಣೆ ಹೊರಡಿಸಲಾಗಿದೆ ಎಂಬ ದೂರಿನಲ್ಲಿ ಹುರುಳಿಲ್ಲ. ಈ ಸಂಬಂಧ ಪೊಲೀಸರು ಸ್ವಯಂಪ್ರೇರಿತವಾಗಿ ದಾಖಲು ಮಾಡಿಕೊಂಡಿರುವ ಈ ಪ್ರಕರಣ ರಾಜಕೀಯ ಪ್ರೇರಿತವಾಗಿದೆ ಮತ್ತು ದುರುದ್ದೇಶದಿಂದ ಕೂಡಿದೆ. ಆದ್ದರಿಂದ, ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಪ್ರಕರಣದ ವಿಚಾರಣೆಗೆ ತಡೆ ನೀಡಿ ಆದೇಶಿಸಿತು. ಪ್ರಾಸಿಕ್ಯೂಷನ್ ಪರ ಕೆ.ಪಿ.ಯಶೋದಾ ಹಾಜರಿದ್ದರು.

ಮತ್ತೆ ಶುರುವಾದ ತೆರವು ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ): ಕೆಲವು ದಿನಗಳ ಬಿಡುವಿನ ನಂತರ ಅರಣ್ಯ ಇಲಾಖೆಯ ಎರಡನೇ ಹಂತದ ತೆರವು ಕಾರ್ಯಾಚರಣೆ ಗುರುವಾರ ಆರಂಭವಾಯಿತು. ಭಾರಿ ವಿರೋಧದ ನಡುವೆಯೂ ಒಂದೇ ದಿನದಲ್ಲಿ 110 ಎಕರೆ ಜಮೀನನ್ನು ಅರಣ್ಯ ಇಲಾಖೆ ಮರು ವಶ ಮಾಡಿಕೊಂಡಿತು.

ನಸುಕಿನ ಜಾವವೇ ಪೊಲೀಸ್ ಬಂದೋಬಸ್ತ್‌ನಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ 25 ಯಂತ್ರಗಳೊಂದಿಗೆ (ಜೆಸಿಬಿ) ಪಾತಪಳ್ಳಿ ಗ್ರಾಮದ ಬಳಿ ಕಾರ್ಯಾಚರಣೆ ಆರಂಭಿಸಿದರು. ಅಲಂಬಗಿರಿ ಮೀಸಲು ಅರಣ್ಯ ಪ್ರದೇಶದಲ್ಲಿ ಒತ್ತುವರಿ ಆಗಿದ್ದ ಸುಮಾರು 110 ಎಕರೆಯನ್ನು ಇಲಾಖೆ ಸಿಬ್ಬಂದಿ ತೆರವುಗೊಳಿಸಿದರು.

ಬಿಜೆಪಿ ಮುಖಂಡರು ಮತ್ತು ರೈತರೊಂದಿಗೆ ಕಾರ್ಯಾಚರಣೆ ಸ್ಥಳಕ್ಕೆ ಬಂದ ಸಂಸದ ಎಸ್.ಮುನಿಸ್ವಾಮಿ ಅವರನ್ನು ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ತಡೆದರು. ಆಗ ಎರಡೂ ಕಡೆಯವರ ನಡುವೆ ಜಟಾಪಟಿ ನಡೆಯಿತು.

ಆಗ ಮುನಿಸ್ವಾಮಿ, 'ನನ್ನನ್ನೇ ದೊಣ್ಣೆಗಳಿಂದ ಅಡ್ಡ ಹಾಕುತ್ತೀರಾ? ಬಿಡ್ರಿ ನನ್ನನ್ನು, ನಾನೇನು ಉಗ್ರಗಾಮಿನಾ, ಪಾಕಿಸ್ತಾನದಿಂದ ಬಂದಿದ್ದೀನಾ. ರೈತರನ್ನು ಏಕೆ ಉಗ್ರ-ಗಾಮಿಗಳಂತೆ ನೋಡುತ್ತೀರಿ. ಅವರ ಮೇಲೆ ಏಕೆ ದಬ್ಬಾಳಿಕೆ ನಡೆಸುತ್ತೀರಿ' ಎಂದು ಕೂಗಾಡಿದರು.

ಬೆಳಗಾವಿ ರಕ್ಷಣೆಗೆ ಬದ್ಧ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೆಳಗಾವಿ ಹಾಗೂ ಬೆಳಗಾವಿ ಭಾಗದ ಸುರಕ್ಷತೆಗೆ ರಾಜ್ಯ ಸರ್ಕಾರ ಬದ್ಧವಿದೆ. ಅದಕ್ಕೆ 'ಎರಡನೇ ರಾಜಧಾನಿ' ಎಂದು ಪರಿಗಣಿಸಿ, ಇಲ್ಲಿ ಸುವರ್ಣ ವಿಧಾನಸೌಧ ಕಟ್ಟಲಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.


ಡಿ.ಕೆ. ಶಿವಕುಮಾರ

'ಕರ್ನಾಟಕದಲ್ಲಿರುವ ಮರಾಠಿಗರಿಗೆ ಮಹಾರಾಷ್ಟ್ರ ಸರ್ಕಾರವು ಆರೋಗ್ಯ ವಿಮೆ ಯೋಜನೆ ಜಾರಿಗೊಳಿಸಿದೆ. ಗಡಿ ವಿವಾದಕ್ಕೆ ಸಂಬಂಧಪಟ್ಟಂತೆ ಬೆಳಗಾವಿ ಸಮೀಪದ ಚಂದಗಡದಲ್ಲಿ ಸರ್ಕಾರಿ ಕಚೇರಿ ಕೂಡ ತೆರೆಯಲು ಮುಂದಾಗಿದ್ದು ಗಮನಕ್ಕೆ ಬಂದಿದೆ. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸುವೆ' ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

'ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಯೋಜನೆ ರೂಪಿ-ಸುತ್ತಿದ್ದೇವೆ. ಇಂಧನ ಸಚಿವರೊಂದಿಗೆ ಪಾವಗಡದ ಸೋಲಾರ್ ಪಾರ್ಕ್ ಪರಿ-ಶೀಲಿಸಿದ್ದೇವೆ' ಎಂದರು.

'ಒಂದು ದಿನ ಮಳೆಯಾಗದಿ-ದ್ದರೆ ರಾಜ್ಯ ಸರ್ಕಾರಕ್ಕೆ ₹1,000 ಕೋಟಿ ನಷ್ಟವಾಗುತ್ತದೆ. ಅಂಥದರಲ್ಲಿ ರಾಜ್ಯದಲ್ಲಿ ಈ ಬಾರಿ ಬಹಳ ಕಡಿಮೆ ಮಳೆಯಾಗಿದೆ. ಆದರೂ ₹6ರಿಂದ ₹7ರ ದರದಲ್ಲಿ ಪ್ರತಿ ಯೂನಿಟ್ ವಿದ್ಯುತ್ ಖರೀದಿಸಿ, ರೈತರಿಗೆ ಕಡಿಮೆ ದರದಲ್ಲಿ ನೀಡುತ್ತಿದ್ದೇವೆ. ಉಳಿದ ಹಣವನ್ನು ಸರ್ಕಾರ ತುಂಬಲಿದೆ' ಎಂದರು.

'ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಟೆಂಡರ್‌ಗೆ ಸೂಚಿಸಲಾಗಿದೆ. ಈ ಕುರಿತು ಮೀನುಗಾರಿಕೆ ಸಚಿವರ ಬಳಿ ಚರ್ಚಿಸುವೆ. ಕೆರೆಗಳಿಗೆ ಪಂಪ್ ಮಾಡಿ ನೀರು ತುಂಬಿಸಲು ಸಾಕಷ್ಟು ವಿದ್ಯುತ್ ಖರ್ಚಾಗುತ್ತಿದೆ' ಎಂದರು.

'ಸಿಎಂ ಆಗುವ ಬಯಕೆ; ಉತ್ತಮ ಆಡಳಿತಕ್ಕೆ ಆದ್ಯತೆ'

'ನಾನು ಮುಖ್ಯಮಂತ್ರಿ ಆಗಬೇಕೆಂಬ ಬಯಕೆ ಬಹಳ ಜನರಿಗಿದೆ. ಆದರೆ, ಈಗ ಉತ್ತಮ ಆಡಳಿತ ನೀಡುವುದೇ ನಮ್ಮ ಸರ್ಕಾರದ ಆದ್ಯತೆಯಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಯಾಗಲಿ ಎಂದು ಹುಕ್ಕೇರಿಯ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಪಕ್ಷದವರು ಯಾವಾಗಲಾದರೂ ತೀರ್ಮಾನಿಸಲಿ. ತಲೆಕೆಡಿಸಿಕೊಳ್ಳಲ್ಲ' ಎಂದರು.

'ರಾಜ್ಯಗಳ ಮಧ್ಯೆ ಮೆಟ್ರೊ ಸಂಚಾರ ತಪ್ಪೇನೂ ಅಲ್ಲ'

ಬೆಂಗಳೂರಿನ ಬೊಮ್ಮಸಂದ್ರದಿಂದ ಹೊಸೂರುವರೆಗೆ ಮೆಟ್ರೊ ನಿರ್ಮಾಣಕ್ಕೆ ತಮಿಳುನಾಡು ಸರ್ಕಾರ ಸರ್ವೆ ನಡೆಸಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಮೆಟ್ರೊ ನಿರ್ಮಾಣಕ್ಕೆ ಈ ಮೊದಲೇ ತಮಿಳುನಾಡು ಸರ್ಕಾರ ಬೇಡಿಕೆ ಇಟ್ಟಿತ್ತು. ಎರಡೂ ರಾಜ್ಯಗಳ ಜನರು ಅಲ್ಲಿ ವಾಸವಿದ್ದು, ನಿತ್ಯ ಓಡಾಡುತ್ತಾರೆ. ಮೆಟ್ರೊ ಯೋಜನೆಗೆ ಕೇಂದ್ರ ಸರ್ಕಾರದಿಂದ ಶೇ 50ರಷ್ಟು ಸಹಭಾಗಿತ್ವ-ವಿದೆ. ಉಭಯ ರಾಜ್ಯಗಳ ಮಧ್ಯೆ ಮೆಟ್ರೊ ಸಂಚಾರ ಶುರುವಾದರೆ ತಪ್ಪೇನೂ ಇಲ್ಲ' ಎಂದರು.

ನನಗೆ ಯಾರೊಂದಿಗೂ ಭಿನ್ನಾಭಿಪ್ರಾಯ ಇಲ್ಲ. ಆಂತರಿಕವಾಗಿಯೂ ಬಹಿರಂಗವಾಗಿಯೂ ಇಲ್ಲ. ಏಕೆ ಭಿನ್ನಾಭಿಪ್ರಾಯ ಹುಟ್ಟಬೇಕು?

ಡಿ.ಕೆ.ಶಿವಕುಮಾರ, ಉಪಮುಖ್ಯಮಂತ್ರಿ





ಹುಬ್ಬಳ್ಳಿ–ಬೆಂಗಳೂರು–ಮಂಗಳೂರು ವಿಶೇಷ ರೈಲು

ಮಂಗಳೂರು: ದಸರಾ ಹಬ್ಬದ ಪ್ರಯುಕ್ತ ರೈಲ್ವೆ ಇಲಾಖೆಯು ಹುಬ್ಬಳ್ಳಿಯಿಂದ ಬೆಂಗಳೂರು ಮಾರ್ಗವಾಗಿ ಮಂಗಳೂರಿಗೆ ಹಾಗೂ ಮಂಗಳೂರಿನಿಂದ ಬೆಂಗಳೂರಿಗೆ, ಹುಬ್ಬಳ್ಳಿಗೆ ವಿಶೇಷ ರೈಲು ವ್ಯವಸ್ಥೆಗೊಳಿಸಿದೆ.

ಅ.20ರಂದು ಹುಬ್ಬಳ್ಳಿ- ಮಂಗಳೂರು ಜಂಕ್ಷನ್ ವಿಶೇಷ ಎಕ್ಸ್‌ಪ್ರೆಸ್ ರೈಲು (ರೈಲು ಸಂಖ್ಯೆ 07303) ಹುಬ್ಬಳ್ಳಿಯಿಂದ ಮಧ್ಯಾಹ್ನ 3.30ಕ್ಕೆ ಹೊರಟು ರಾತ್ರಿ 11.25ಕ್ಕೆ ಯಶವಂತಪುರ ತಲುಪಲಿದೆ. ಅಲ್ಲಿಂದ ರಾತ್ರಿ 11.55ಕ್ಕೆ ಹೊರಟು ಅ.21ರಂದು ಬೆಳಿಗ್ಗೆ 9.40ಕ್ಕೆ ಮಂಗಳೂರು ಜಂಕ್ಷನ್ ತಲುಪಲಿದೆ. ಇದೇ ರೈಲು ಅ.23ರಂದು ಇದೇ ಮಾರ್ಗದಲ್ಲಿ ಸಂಚರಿಸಲಿದೆ.

ಅ.21ರಂದು ಮಂಗಳೂರು ಜಂಕ್ಷನ್-ಹುಬ್ಬಳ್ಳಿ ವಿಶೇಷ ಎಕ್ಸ್‌ಪ್ರೆಸ್ ರೈಲು ಮಂಗಳೂರು ಜಂಕ್ಷನ್‌ನಿಂದ ಬೆಳಿಗ್ಗೆ 11.40ಕ್ಕೆ ಹೊರಟು ಅದೇ ದಿನ ರಾತ್ರಿ 9.20ಕ್ಕೆ ಯಶವಂತಪುರ ತಲುಪಲಿದೆ. ಅಲ್ಲಿಂದ ರಾತ್ರಿ 9.50ಕ್ಕೆ ಹೊರಡುವ ರೈಲು ಅ.22ರಂದು ಬೆಳಿಗ್ಗೆ 5.45ಕ್ಕೆ ಹುಬ್ಬಳ್ಳಿ ತಲುಪಲಿದೆ. ಅ.24ರಂದು ಇದೇ ರೈಲು ಇದೇ ಮಾರ್ಗದಲ್ಲಿ ಸಂಚರಿಸಲಿದೆ.

ಈ ರೈಲಿಗೆ ಮಂಗಳೂರು ಜಂಕ್ಷನ್, ಬಂಟ್ವಾಳ, ಕಬಕ ಪುತ್ತೂರು, ಸುಬ್ರಹ್ಮಣ್ಯ ರೋಡ್, ಸಕಲೇಶಪುರ, ಹಾಸನ ಜಂಕ್ಷನ್, ಚನ್ನರಾಯಪಟ್ಟಣ, ಶ್ರವಣ ಬೆಳಗೊಳ, ಕುಣಿಗಲ್, ನೆಲಮಂಗಲ, ಯಶವಂತಪುರ, ತುಮಕೂರು, ಅರಸೀಕೆರೆ, ಬಿರೂರು, ದಾವಣಗೆರೆ, ಹರಿಹರ, ಹಾವೇರಿ ನಿಲ್ದಾಣಗಳಲ್ಲಿ ನಿಲುಗಡೆ ನೀಡಲಾಗಿದೆ. ಈ ರೈಲಿನಲ್ಲಿ ಜನರಲ್, ಸ್ಲೀಪರ್ ಕ್ಲಾಸ್, 3 ಟೈರ್ ಎಸಿ, 2 ಟೈರ್ ಎಸಿ ಕೋಚ್‌ಗಳು ಇರಲಿವೆ.

ವಿಂಟೇಜ್ ಕಾರು ಪ್ರದರ್ಶನ

ಬೆಂಗಳೂರು: ಕರ್ನಾಟಕ ವಿಂಟೇಜ್ ಮತ್ತು ಕ್ಲಾಸಿಕ್ ಕಾರ್ ಕ್ಲಬ್‌ನಿಂದ (ಕೆವಿಸಿಸಿ) ಇದೇ 21 ಮತ್ತು 22ರಂದು ಅದ್ವೈತ್ ಮೋಟಾರ್ಸ್ ಸಹಯೋಗದಲ್ಲಿ ಬೆಂಗಳೂರಿನಿಂದ ಮೈಸೂರಿಗೆ 'ಕೆವಿಸಿಸಿ–ಅದ್ವೈತ್ ರಾಷ್ಟ್ರೀಯ ದಸರಾ ವಿಂಟೇಜ್ ಕಾರುಗಳ ಪ್ರದರ್ಶನ ನಡೆಯಲಿದೆ.

ಮೈಸೂರು ಅರಮನೆ ಮುಂಭಾಗದಲ್ಲಿ 40ಕ್ಕೂ ವಿಂಟೇಜ್ ಕಾರುಗಳ ಪ್ರದ-ರ್ಶನವನ್ನು ಹಮ್ಮಿಕೊಳ್ಳಲಾಗಿದೆ.

'ಇದೇ 21ರಂದು ಬೆಂಗಳೂರಿನ ವಿಧಾನಸೌಧದಿಂದ ವಿಂಟೇಜ್ ಕಾರುಗಳು ಮೈಸೂರಿಗೆ ಪ್ರಯಾಣ ಬೆಳಸಲಿವೆ' ಎಂದು ಕ್ಲಬ್‌ನ ಗೌರವ ಕಾರ್ಯದರ್ಶಿ ಟಿ.ಆರ್. ರಘುನಂದನ್ ತಿಳಿಸಿದ್ದಾರೆ.


ದಸರಾ ಅಂಗವಾಗಿ ಕೆಎಸ್‌ಆರ್‌ಟಿಸಿಯು ವಿಶೇಷ ಬಸ್ ಸೇವೆ ಕಲ್ಪಿಸಿದ್ದು ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣದಲ್ಲಿ ಗುರುವಾರ ಚಾಲನೆ ನೀಡಲಾಯಿತು.

ಮೊಹುವಾ ಮೊಯಿತ್ರ ಐ.ಡಿಯಿಂದ ಪ್ರಶ್ನೆ: ಉದ್ಯಮಿ ಹೇಳಿಕೆ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇರಿಸುಮುರಿಸು ಉಂಟು ಮಾಡುವ ಉದ್ದೇಶದಿಂದ ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರು ಉದ್ಯಮಿ ಗೌತಮ್ ಅದಾನಿ ಅವರನ್ನು ಗುರಿಯಾಗಿಸಿ ವಾಗ್ದಾಳಿ ನಡೆಸಿದ್ದರು' ಎಂದು ಉದ್ಯಮಿ ದರ್ಶನ್ ಹಿರನಂದಾನಿ ಆರೋಪಿಸಿದ್ದಾರೆ.

ಈ ಕುರಿತು ಸಲ್ಲಿಸಿರುವ ಪ್ರಮಾಣ-ಪತ್ರದಲ್ಲಿ ಅವರು, ಸಂಸದೆ ಮೊಹುವಾ ತಮ್ಮ ಸಂಸತ್ ಸದಸ್ಯತ್ವದ ಇ–ಮೇಲ್ ಐ.ಡಿ ಅನ್ನು ನೀಡಿದ್ದರು. ಆ ಮೂಲಕ ನಾನು ಅವರಿಗೆ ಮಾಹಿತಿ ಕಳುಹಿಸು-ತ್ತಿದ್ದೆ. ಅದನ್ನು ಆಧರಿಸಿ ಸಂಸದೆ ಪ್ರಶ್ನೆ ಕೇಳುತ್ತಿದ್ದರು' ಎಂದು ತಿಳಿಸಿದ್ದಾರೆ.

ಪೊಲೀಸರ ಮೇಲೆ ಹಲ್ಲೆ: 30 ವರ್ಷದ ಬಳಿಕ ಸೆರೆ

ಪ್ರಜಾವಾಣಿ ವಾರ್ತೆ

ಕಮಲನಗರ (ಬೀದರ್ ಜಿಲ್ಲೆ): ತೀವ್ರವಾಗಿ ಹಲ್ಲೆ ನಡೆಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣದ-ಲ್ಲಿ ನಾಪತ್ತೆಯಾಗಿದ್ದ ಆರೋಪಿಯನ್ನು ಪೊಲೀಸರು 30 ವರ್ಷದ ನಂತರ ಬಂಧಿಸಿದ್ದಾರೆ.

ತಾಲ್ಲೂಕಿನ ಮುಧೋಳ (ಬಿ) ಗ್ರಾಮದ ದೇವಿದಾಸ ನಾರಾಯಣ ರಾಠೋಡ್ (60) ಬಂಧಿತ ವ್ಯಕ್ತಿ.

1993ರ ನವೆಂಬರ್ 13ರಂದು ಗುಂಪೊಂದು ನಾಡ ಪಿಸ್ತೂಲ್ ಹಾಗೂ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ತಾಲ್ಲೂಕಿನ ಭವಾನಿ ಬಿಜಲಗಾಂವ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ದರೋಡೆಗೆ ಹೊಂಚು ಹಾಕಿತ್ತು. ವಿಷಯ ತಿಳಿದು ಅಂದಿನ ಔರಾದ್ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ತಡೆಯಲು ಮುಂದಾಗಿದ್ದರು. 129 ಜನರ ಗುಂಪು ಪೊಲೀಸರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಉಂಟು ಮಾಡಿತ್ತು. ಈ ಕುರಿತು ತಾಲ್ಲೂಕಿನ ಠಾಣಾ ಕುಶನೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.


ದೇವಿದಾಸ

ಬಳಿಕ 127 ಜನರನ್ನು ಬಂಧಿಸಲಾಗಿತ್ತು. ಇನ್ನಿಬ್ಬರು ನಾಪತ್ತೆಯಾಗಿದ್ದರು. ಅದರಲ್ಲಿ ದೇವಿದಾಸ ನಾರಾಯಣ ರಾಠೋಡ್ ಕೂಡ ಒಬ್ಬನಾಗಿದ್ದ.

ಭಾಲ್ಕಿ ಡಿವೈಎಸ್‌ಪಿ ಶಿವಾನಂದ ಪವಾಡಶೆಟ್ಟಿ ಮತ್ತು ಕಮಲನಗರ ಸಿಪಿಐ ರಾಮಪ್ಪಾ ಸಾವಳಗಿ ಅವರು ಸಿಬ್ಬಂದಿಯೊಂದಿಗೆ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ದೇವಣಿ ತಾಲ್ಲೂಕಿನ ಲೋಣಿ ತಾಂಡಾದಲ್ಲಿದ್ದ ನಾರಾಯಣ ರಾಠೋಡ್‌ನನ್ನು ಪತ್ತೆ ಹಚ್ಚಿದ್ದಾರೆ.

ಅತಿಯಾದ ಮದ್ಯ: ವಿದೇಶಿ ಪ್ರಜೆ ಸಾವು

ಕಲಬುರಗಿ: ಕಂಪನಿಯ ನೇಮಕಾತಿಗಾಗಿ ಕಲಬುರಗಿಗೆ ಬಂದಿದ್ದ ಇಂಗ್ಲೆಂಡ್ ದೇಶದ ಪ್ರಜೆಯೊಬ್ಬ ಅತಿಯಾದ ಮದ್ಯ ಸೇವನೆಯಿಂದಾಗಿ ಬುಧವಾರ ಮೃತಪಟ್ಟಿದ್ದಾರೆ.


ಲೀ ಜೇಮ್ಸ್ ಪ್ಯಾಲಿನ್(53) ಮೃತರು. ಜೇಮ್ಸ್ ಅವರು ದುಬೈನ ಹೈಟಿ ರೈಡರ್ಸ್ ಟೆಕ್ನಿಕಲ್ ಸರ್ವಿಸ್ ಕಂಪನಿಯ ಆಪರೇಷನ್ ಮ್ಯಾನೇಜರ್ ಆಗಿದ್ದರು. ಇದೇ ಕಂಪನಿಯ ಸೇಫ್ಟಿ ವ್ಯವಸ್ಥಾಪಕ, ಕೇರಳ ಮೂಲದ ಜೀಯಾದ್ ಮೈದೀನ್ ಮತ್ತು ಮುಂಬೈನ ರದೀಶ್ ಕುಮಾರ್ ಅವರೊಂದಿಗೆ ಮಂಗಳವಾರ (ಅ.17) ಕಲಬುರಗಿಗೆ ಬಂದಿದ್ದರು.

ಮೂವರು ನಗರದ ಹೋಟೆಲ್‌ವೊಂದರಲ್ಲಿ ತಂಗಿದ್ದರು. ಮಂಗಳವಾರ ತಡರಾತ್ರಿ ಬಾರ್‌ವೊಂದರಲ್ಲಿ ಅತಿಯಾಗಿ ಮದ್ಯ ಸೇವಿಸಿದ್ದರು. ಈ ವೇಳೆ ಜೇಮ್ಸ್ ಕುಸಿದು ಬಿದ್ದರು. ತಕ್ಷಣವೇ ಬಾರ್ ಸಿಬ್ಬಂದಿ ಗಾಲಿ ಕುರ್ಚಿ ಮೇಲೆ ಒಯ್ದು ಹೋಟೆಲ್ ಕೋಣೆಗೆ ಬಿಟ್ಟು ಬಂದರು. ಮರುದಿನ ಬೆಳಿಗ್ಗೆ ಸ್ನೇಹಿತರು ಜೇಮ್ಸ್ ಕೋಣೆಗೆ ಬಂದು ನೋಡಿದಾಗ ಅವರ ಮುಗಿನಿಂದ ರಕ್ತ ಸ್ರಾವ ಆಗುತ್ತಿತ್ತು. 108ರ ಆಂಬ್ಯುಲೆನ್ಸ್ ಸಿಬ್ಬಂದಿ ಪರೀಕ್ಷಿಸಿ, ಮೃತಪಟ್ಟಿದ್ದಾಗಿ ದೃಢಪಡಿಸಿದರು ಎಂದು ಪೊಲೀಸರು ಹೇಳಿದ್ದಾರೆ.


ಜೇಮ್ಸ್ ಪ್ಯಾಲಿನ್

ನವವರ್ಣ


ರತ್ನ ಮತ್ತು ತಂಡ, ಕೇಂದ್ರೀಯ ಅಬಕಾರಿ ಲೇಔಟ್, ಭೂಪಸಂದ್ರ, ಬೆಂಗಳೂರು


ವೃಶಾಲಿ ಮತ್ತು ತಂಡ, ಬೆಂಗಳೂರು


ಸಾವಿತ್ರಮ್ಮ ಮತ್ತು ಶಿಕ್ಷಕಿಯರು, ಸರ್ಕಾರಿ ಪ್ರಾಥಮಿಕ ಶಾಲೆ, ಹೆಬ್ಬಾಳ, ಬೆಂಗಳೂರು


ಸದಸ್ಯೆಯರು, ಭಾರತ್ ನಗರ ಅಭಿವೃದ್ಧಿ ಸಮಿತಿ, ಬೆಂಗಳೂರು


ವಿದ್ಯಾರ್ಥಿಗಳು, ಸನ್‌ಫ್ಲವರ್ ಶಾಲೆ, ಅಂಜನಾಪುರ, ಬೆಂಗಳೂರು


ಲಲಿತಾ, ಸಹಸ್ರನಾಮ ಗುಂಪು, ಸಹಕಾರನಗರ, ಬೆಂಗಳೂರು


ರತ್ನ ಮತ್ತು ಸಹೋದರಿಯರು, ಕುವೆಂಪು ನಗರ, ಬೆಂಗಳೂರು



ನಿಖಿತಾ ಎಸ್‌.ಎಂ ಮತ್ತು ಸ್ನೇಹಿತೆಯರು, ಎಸ್‌ಜಿ. ಪಾಳ್ಯ, ಬೆಂಗಳೂರು


ಸಿಬ್ಬಂದಿ, ಬೆಸ್ಕಾಂ ಕಾರ್ಪೊರೇಟ್ ಕಚೇರಿ


ರಕ್ಷಾ ನರಸೀಪುರ ಮತ್ತು ಸ್ನೇಹಿತೆ, ಬನ್ನೇರುಘಟ್ಟ, ಬೆಂಗಳೂರು


ಧನ್ಯಶ್ರೀ, ಜೆ.ಪಿ.ನಗರ. ಬೆಂಗಳೂರು


ವೈಷ್ಣವಿ, ವಿಜಯ, ಬೆಂಗಳೂರು


ಶರಣ್ಯ ಜಿ ಮತ್ತು ಸಮನ್ವಿ, ಬೆಂಗಳೂರು


ಸಂಧ್ಯಾ ಮತ್ತು ಸ್ನೇಹಿತೆಯರು, ಕೆಂಗೇರಿ ಉಪನಗರ, ಬೆಂಗಳೂರು


ಶಿಲ್ಪಾ ಜೊತೆ ಸ್ನೇಹಿತರು, ಎನ್‌ಜಿಒ ಕೋರಮಂಗಲ, ಬೆಂಗಳೂರು


ಶೃತಿ ಪ್ರಶಾಂತ್, ಮೈಸೂರು



ಶಿಕ್ಷಕರ ವೃಂದ, ಅನುಪಮ ಶಾಲೆ ಪೀಣ್ಯ, ಬೆಂಗಳೂರು


ಸಿಬ್ಬಂದಿ, ಪೂರ್ಣ ಪ್ರಜ್ಞಾ ಅಕಾಡೆಮಿ, ಕಮ್ಮಗೊಂಡನ ಹಳ್ಳಿ, ಬೆಂಗಳೂರು


ವಸಂತಾ, ಸವಿತಾ ಮತ್ತು ಗುಂಪಿನ ಸದಸ್ಯರು, ಬಂಡಪ್ಪ ಗಾರ್ಡನ್, ಮತ್ತಿಕೆರೆ, ಬೆಂಗಳೂರು


ಶೃತಿ ಪ್ರಶಾಂತ್, ಮೈಸೂರು


ಹಿತಿಕ್ಷಾ, ಕುರುಬರಹಳ್ಳಿ, ಬೆಂಗಳೂರು


ಹೃತಿ, ರಾಜರಾಜೇಶ್ವರಿ ನಗರ, ಬೆಂಗಳೂರು


ಸದಸ್ಯೆಯರು, ಕಲಿಕಾ ಭವಾನಿ ಭಜನಾ ಮಂಡಳಿ, ಬೆಂಗಳೂರು


ರೋಹಿಣಿ ಮತ್ತು ಮಂಜು, ಕೆಂಗೇರಿ, ಬೆಂಗಳೂರು


ಶಿಲ್ಪಾ ಮತ್ತು ಗೆಳತಿಯರು, ನಾಗರಭಾವಿ, ಬೆಂಗಳೂರು


ಶೀಘ್ರ ಲಿಪಿಕಾರರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು


ವನಜಾ, ಕವಿತಾ, ಅನಿತಾ, ದಾವಣಗೆರೆ


ಸನ್ನಿಧಿ, ನಾಗರಭಾವಿ, ಬೆಂಗಳೂರು


ಚಿರಂತನಾ, ದೀಕ್ಷಿತಾ, ಬೆಂಗಳೂರು

ಚುನಾವಣಾ ಕಣದ ಸುತ್ತ

‘ಲಿಂಗತ್ವ ಅಲ್ಪಸಂಖ್ಯಾತರ ನಿರ್ಲಕ್ಷ್ಯ’

ಇಂದೋರ್ (ಪಿಟಿಐ): ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯದ ಸಮಸ್ಯೆಗಳ ಕುರಿತು ಯಾವ ರಾಜಕೀಯ ಪಕ್ಷಗಳೂ ಮತ್ತು ಕಣದಲ್ಲಿರುವ ಅಭ್ಯರ್ಥಿಗಳು ಮಾತನಾಡುತ್ತಿಲ್ಲ ಎಂದು ಚುನಾವಣೆಗೆ ಸಜ್ಜಾಗುತ್ತಿರುವ ಮಧ್ಯಪ್ರದೇಶದ ಆ ಸಮುದಾಯದ ಸದಸ್ಯರು ದೂರಿದ್ದಾರೆ.

‘ಸ್ತ್ರೀ ಲಿಂಗ ಮತ್ತು ಪುಲ್ಲಿಂಗಗಳ ಜೊತೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯವೂ ಸರ್ಕಾರದಿಂದ ಗುರುತಿಸಲ್ಪಟ್ಟಿದೆ. ಆದರೂ, ಈ ಚುನಾವಣೆ ವೇಳೆ ಯಾವ ಪಕ್ಷದ ಅಭ್ಯರ್ಥಿಯೂ ನಮ್ಮ ಸಮುದಾಯದ ಸಮಸ್ಯೆಗಳ ಕುರಿತು ಮಾತನಾಡುತ್ತಿಲ್ಲ’ ಎಂದು ಸಾಮಾಜಿಕ ಕಾರ್ಯಕರ್ತೆ, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಸದಸ್ಯೆ ಸಂಧ್ಯಾ ಗೌರಿ ಬೇಸರವ್ಯಕ್ತಪಡಿಸಿದ್ದಾರೆ.

ಆರೋಪ, ಪ್ರತ್ಯಾರೋಪ ಜೋರು

ಜೈಪುರ (ಪಿಟಿಐ): ರಾಜಸ್ಥಾನ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್‌ನ ಟಿಕೆಟ್ ಆಕಾಂಕ್ಷಿ ಆಗಿರುವ ಪಕ್ಷದ ನಾಯಕಿ ಅರ್ಚನಾ ಶರ್ಮ ಅವರು ‘ಪಕ್ಷದೊಳಗೇ ಇರುವ ತಮ್ಮ ಎದುರಾಳಿ’ ಕುರಿತು ಅಸಮಾಧಾನ ಹೊರಹಾಕಿದ್ದ ವಿಡಿಯೊವೊಂದು ಈಗ ವಿವಾದಕ್ಕೆ ಎಡೆ ಮಾಡಿದೆ.

ಮಾಳವೀಯ ನಗರದಿಂದ ಕಣಕ್ಕಿಳಿಯಲು ಪ್ರಯತ್ನಿಸುತ್ತಿರುವ ಅರ್ಚನಾ ಅವರು ಪಕ್ಷದ ನಾಯಕರೊಬ್ಬರನ್ನು ಗುರಿಯಾಗಿಸಿ ಆರೋಪ ಮಾಡಿದ್ದಾರೆ. ‘ಪಕ್ಷದೊಳಗೇ ಇರುವ ನನ್ನ ವೈರಿಯೊಬ್ಬರು ಕಣದಲ್ಲಿರುವ ಬಿಜೆಪಿ ಅಭ್ಯರ್ಥಿ ಜೊತೆ ಕೈಜೋಡಿಸಿದ್ದಾರೆ. ನನ್ನನ್ನು ತಡೆಯಲು ಬಿಜೆಪಿ ಶಾಸಕ ಕಾಳಿಚರಣ್ ಸರಫ್ ಅವರಿಂದ ₹40 ಲಕ್ಷ ಪಡೆದಿದ್ದಾರೆ’ ಎಂದು ಹೇಳಿದ್ದಾರೆ.

ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬಳಿಕ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್ ನಾಯಕ ರಾಜೀವ್ ಅರೋರ, ‘ಈ ರೀತಿಯ ಕೀಳು ರಾಜಕೀಯ ಮಾಡುವುದರಿಂದ ನೀವು ಎಂದಿಗೂ ಗೆಲ್ಲುವುದಿಲ್ಲ. ಕರ್ಮ ಸಿದ್ಧಾಂತ ನಿಜವೇ ಆದರೆ, ನೀವು ಬಿತ್ತಿದ್ದನ್ನೇ ಬೆಳೆಯುತ್ತೀರ’ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ‘ವಿಡಿಯೊದಲ್ಲಿ ಯಾರ ಹೆಸರನ್ನೂ ನಾನು ಉಲ್ಲೇಖಿಸಿಲ್ಲ. ಅರೋರ ಅವರು ತಪ್ಪಾಗಿ ಅರ್ಥೈಸಿಕೊಂಡು ನನ್ನನ್ನು ಗುರಿಯಾಗಿಸಿದ್ದಾರೆ’ ಎಂದು ಅರ್ಚನಾ ಪ್ರತಿಕ್ರಿಯಿಸಿದ್ದಾರೆ.

ಮೋದಿ ಆಡಳಿತದಲ್ಲಿ ನಕ್ಸಲರ ಹಿಂಸಾಚಾರ ಶೇ 52ರಷ್ಟು ಕ್ಷೀಣ: ಅಮಿತ್ ಶಾ ಹೇಳಿಕೆ

‘ನಕ್ಸಲ್‌ವಾದಕ್ಕೆ ಕಾಂಗ್ರೆಸ್ ಪ್ರೋತ್ಸಾಹ’

ಜಗದಲ್‌ಪುರ/ಛತ್ತೀಸಗಢ (ಪಿಟಿಐ): ನಕ್ಸಲ್‌ವಾದವನ್ನು ಕಾಂಗ್ರೆಸ್ ಪ್ರೋತ್ಸಾಹಿಸುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಇಲ್ಲಿ ಆರೋಪಿಸಿದರು. ಅಲ್ಲದೆ, ನರೇಂದ್ರ ಮೋದಿ ಸರ್ಕಾರದ ಒಂಬತ್ತು ವರ್ಷಗಳ ಆಡಳಿತಾವಧಿಯಲ್ಲಿ ನಕ್ಸಲರ ಹಿಂಸಾಚಾರ ಶೇ 52ರಷ್ಟು ಕಡಿಮೆಯಾಗಿದೆ ಎಂದು ಹೇಳಿದರು.

ಮುಖ್ಯಾಂಶಗಳು
- ನಕ್ಸಲ್ ಪಿಡುಗು ಮುಕ್ತ ರಾಜ್ಯಕ್ಕೆ ನಿರ್ಧಾರ
- ಹಲವು ಹಗರಣಗಳಲ್ಲಿ ಭೂಪೇಶ್ ಬಘೇಲ್ ಸರ್ಕಾರ ಭಾಗಿ: ಟೀಕೆ
- ಕೇಂದ್ರ ಸರ್ಕಾರದ ಹಣ ಕಾಂಗ್ರೆಸ್ ಎಟಿಎಂಗೆ ವರ್ಗ: ಆರೋಪ

ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಛತ್ತೀಸಗಢವನ್ನು ‘ಕಾಂಗ್ರೆಸ್‌ನ ಎಟಿಎಂ ಆಗಿ ಮಾಡಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್‌ನ ಆಡಳಿತವು ’ಹಗರಣಗಳ ಸರ್ಕಾರ’ ಎಂಬಂತಾಗಿದೆ ಎಂದರು.

ಜಗದಲ್‌ಪುರ ಮತ್ತು ಕೋಂಡಾಗಾಂವ್‌ನಲ್ಲಿ ಸಾರ್ವಜನಿಕ ರ್‍ಯಾಲಿಗಳಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದರೆ ರಾಜ್ಯವನ್ನು ನಕ್ಸಲ್ ಪಿಡುಗು ಮುಕ್ತ ಮಾಡುವುದಾಗಿ ತಿಳಿಸಿದರು.

‘ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿಗೆ ಅಧಿಕಾರ ನೀಡಿ. ಹಗರಣಗಳನ್ನು ಮಾಡುವ ಮೂಲಕ ಬುಡಕಟ್ಟು ಜನರ ಹಣವನ್ನು ಲಪಟಾಯಿಸುವವರನ್ನು ತಲೆಕೆಳಗಾಗಿ ನೇತು ಹಾಕುತ್ತೇವೆ’ ಎಂದರು.

ಕಾಂಗ್ರೆಸ್ ಇಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ, ರಾಜ್ಯದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಕಳುಹಿಸಿರುವ ಹಣವು ಕಾಂಗ್ರೆಸ್‌ನ ಎಟಿಎಂ ಮೂಲಕ ದೆಹಲಿಗೆ ವರ್ಗಾವಣೆಯಾಗುತ್ತದೆ ಎಂದು ಟೀಕಿಸಿದರು.

ಛತ್ತೀಸಗಢದ ಜನರು ಮೂರು ಬಾರಿ ದೀಪಾವಳಿ ಆಚರಿಸುತ್ತಾರೆ. ಹಬ್ಬದ ದಿನ, ಡಿ.3ರಂದು ಬಿಜೆಪಿ ಗೆಲುವು ಸಾಧಿಸಿದಾಗ ಮತ್ತು ಜನವರಿಯಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಪೂರ್ಣಗೊಂಡಾಗ ದೀಪಾವಳಿ ಆಚರಿಸಲಿದ್ದಾರೆ ಎಂದರು.


ಛತ್ತೀಸಗಢದ ಜಗದಲ್‌ಪುರದಲ್ಲಿ ಗುರುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸನ್ಮಾನಿಸಲಾಯಿತು –ಪಿಟಿಐ ಚಿತ್ರ

‘ಭೂಪೇಶ್ ಬಘೇಲ್ ಸರ್ಕಾರ ರಾಜ್ಯದಲ್ಲಿ ಮದ್ಯದಂಗಡಿಗಳನ್ನು ತೆರೆದು ₹ 2000 ಕೋಟಿ ಹಗರಣ ಮಾಡಿದೆ. ಕಲ್ಲಿದ್ದಲು ಸಾಗಣೆ ಹಗರಣ, ಮಹದೇವ್ ಬೆಟ್ಟಿಂಗ್ ಆ್ಯಪ್ ಹಗರಣ, ಅಕ್ಕಿ ವಿತರಣೆ ಹಗರಣವನ್ನೂ ನಡೆಸಿದೆ ಎಂದರು.

‘ಅನೇಕ ಹಗರಣಗಳ ಬಗ್ಗೆ ಕೇಳಿದ್ದೇನೆ. ವ್ಯಕ್ತಿಯೊಬ್ಬರು ಸಗಣಿ ಖರೀದಿ ಯೋಜನೆಯಲ್ಲಿ ₹ 1,300 ಕೋಟಿ ಹಗರಣ ಎಸಗಿದ್ದಾರೆ. ಇಂತಹದ್ದನ್ನು ನಾನು ಕೇಳಿರಲಿಲ್ಲ’ ಎಂದರು.

ಕೋಂಡಾಗಾಂವ್‌ನಲ್ಲಿ ರ್‍ಯಾಲಿಯಲ್ಲಿ ಮಾತನಾಡಿ, ಬುಡಕಟ್ಟು ಜನರನ್ನು ಕಾಂಗ್ರೆಸ್ ಮತಬ್ಯಾಂಕ್‌ನಂತೆ ನೋಡುತ್ತಿದೆ. ಬುಡಕಟ್ಟು ಜನರ ಅಭಿವೃದ್ಧಿಯನ್ನು ಕಡೆಗಣಿಸಿದೆ ಎಂದರು.

2018ರಲ್ಲಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಇದೇಸ್ಥಳದಲ್ಲಿ ಭರವಸೆ ನೀಡಿದ್ದರು. ಆದರೆ ಈಡೇರಿಸಲಿಲ್ಲ ಎಂದರು.

ಪ್ರಿಯಾಂಕಾ ಹೇಳಿಕೆಗೆ ಕವಿತಾ ತಿರುಗೇಟು

ಹೈದರಾಬಾದ್ (ಪಿಟಿಐ): ‘ಗಾಜಿನ ಮನೆಯಲ್ಲಿ ಕುಳಿತವರು ಕಲ್ಲು ಎಸೆಯಬಾರದು. ಅದರಂತೆ, ಕುಟುಂಬ ರಾಜಕಾರಣದ ಕುರಿತು ಪ್ರಿಯಾಂಕಾ ಗಾಂಧಿ ಮಾತನಾಡಬಾರದು’ ಎಂದು ತೆಲಂಗಾಣದ ಬಿಆರ್‌ಎಸ್ ಪಕ್ಷದ ವಿಧಾನ ಪರಿಷತ್ ಸದಸ್ಯೆ ಕೆ. ಕವಿತಾ ರೆಡ್ಡಿ ಗುರುವಾರ ಹೇಳಿದರು.

ಆರ್ಮೂರ್‌ನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕುಟುಂಬ ರಾಜಕಾರಣದ ಬಗ್ಗೆ ಮಾತನಾಡಲು ಪ್ರಿಯಾಂಕಾ ಅವರಿಗೆ ಹಕ್ಕು ಇಲ್ಲ. ಅವರು ತಮ್ಮ ಕಡೆಗೆ ಮೊದಲು ನೋಡಿಕೊಳ್ಳಬೇಕು’ ಎಂದರು.

‘ರಾಜ್ಯ ಸಂಪುಟದಲ್ಲಿರುವ ಮೂವರು ಸಚಿವರು ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಕುಟುಂಬದವರು’ ಎಂದು ರಾಜ್ಯದ ಮುಲುಗು ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಚಾರ ರ್‍ಯಾಲಿ ವೇಳೆ ಪ್ರಿಯಾಂಕಾ ವ್ಯಂಗ್ಯವಾಡಿದ್ದರು.

ಅದಕ್ಕೆ ತಿರುಗೇಟು ನೀಡಿದ ಕವಿತಾ ಅವರು, ‘ಜವಾಹರ ಲಾಲ್ ನೆಹರೂ ಅವರ ಮರಿ ಮೊಮ್ಮಗಳು, ಇಂದಿರಾ ಗಾಂಧಿ ಅವರ ಮೊಮ್ಮಗಳು, ರಾಜೀವ್ ಗಾಂಧಿ ಅವರ ಮಗಳು ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದಾರೆ. ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ಇಷ್ಟು ಹಾಸ್ಯಾಸ್ಪದ ಹೇಳಿಕೆಯನ್ನು ನಾನು ಕೇಳಿರಲಿಲ್ಲ’ ಎಂದು ಹೇಳಿದರು.

ಭ್ರಷ್ಟಾಚಾರ: ₹ 1 ಲಕ್ಷ ಕೋಟಿ ಲೂಟಿ

ಕೆಸಿಆರ್ ಮತ್ತು ಕುಟುಂಬದ ವಿರುದ್ಧ ಆರೋಪ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಗುರುವಾರ ತಮ್ಮ ಎರಡನೇ ದಿನದ ಪ್ರಚಾರ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಸರ್ಕಾರವು ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆಸಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಚುನಾವಣಾ ಯಾತ್ರೆ ‘ವಿಜಯಭೇರಿ’ಯ ಭಾಗವಾಗಿ ಪೆದ್ದಪಲ್ಲಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ತೆಲಂಗಾಣದಲ್ಲಿ ನೀರಿನ ಕೊರತೆ ಪ್ರಮುಖ ವಿಷಯವಾಗಿದೆ. ಇಂತಹ ಗಂಭೀರ ವಿಷಯದಲ್ಲೂ ಕೆಸಿಆರ್ ಅವರು ಭ್ರಷ್ಟಾಚಾರ ನಡೆಸಿದ್ದಾರೆ. ಕಾಳೇಶ್ವರ ನೀರಾವರಿ ಯೋಜನೆಗೆ ₹ 1 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. ಆದರೆ, ಯೋಜನೆಯಿಂದ ರೈತರಿಗೆ ಯಾವುದೇ ಉಪಯೋಗ ಆಗಿಲ್ಲ ಎಂದು ಹೇಳಿದರು.

ಕೆಸಿಆರ್ ಮತ್ತು ಅವರ ಕುಟುಂಬವು ರಾಜ್ಯದಲ್ಲಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದೆ. ಅದರ ಫಲವೇ ₹ 1 ಲಕ್ಷ ಕೋಟಿ ನಗದು ಮತ್ತು 10,000 ಎಕರೆ ಭೂಮಿ ಲೂಟಿ’ ಎಂದು ವಾಗ್ದಾಳಿ ನಡೆಸಿದರು.

‘ಬಿಆರ್‌ಎಸ್ ಪಕ್ಷವು ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸೋಲು ಅನುಭವಿಸುವುದು ನನ್ನ ಅನುಭವಕ್ಕೆ ಬರುತ್ತಿದೆ’ ಎಂದು ಅವರು ಹೇಳಿದರು.


ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತೆಲಂಗಾಣದ ಪೆದ್ದಪಲ್ಲಿಯಲ್ಲಿ ಗುರುವಾರ ಸಾರ್ವಜನಿಕ ಸಭೆ ನಡೆಸಿದರು –ಪಿಟಿಐ

‘ರಾಹುಲ್ ನಾಯಕರಲ್ಲ, ಓದುಗ ಮಾತ್ರ’

ಹೈದರಾಬಾದ್ (ಪಿಟಿಐ): ಆಡಳಿತಾರೂಢ ಬಿಆರ್‌ಎಸ್ ಅನ್ನು ಬಿಜೆಪಿಯ ಬಿ–ಟೀಂ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕರೆದಿರುವುದನ್ನು ಟೀಕಿಸಿದ ತೆಲಂಗಾಣ ಸಚಿವ ಕೆ.ಟಿ. ರಾಮರಾವ್ ಅವರು, ತಮ್ಮ ಪಕ್ಷ ಯಾವುದೇ ಸಂಘಟನೆಯೊಂದಿಗೆ ಜತೆಗೂಡಿಲ್ಲ. ಆದರೆ, ಜನರು ಕಾಂಗ್ರೆಸ್ ಅನ್ನು ಸಿ– ಟೀಂ ಅಂದರೆ ಕಳ್ಳರ ತಂಡ ಎಂದುಕೊಂಡಿದ್ದಾರೆ ಎಂದರು.

‘ರಾಹುಲ್ ಗಾಂಧಿ ನಾಯಕರಲ್ಲ, ಅವರು ಒಬ್ಬ ಓದುಗ. ಪಕ್ಷದ ನಾಯಕರು ಒದಗಿಸುವ ಬರಹವನ್ನು ಅವರು ಓದುತ್ತಾರೆ ಅಷ್ಟೆ’ ಎಂದು ಬಿಆರ್‌ಎಸ್‌ನ ಕಾರ್ಯಾಧ್ಯಕ್ಷರೂ ಆಗಿರುವ ರಾಮರಾವ್ ಹೇಳಿದರು.

‘ನಮ್ಮನ್ನು ಬಿಜೆಪಿಯ ಬಿ–ಟೀಂ ಎನ್ನುತ್ತೀರಿ ನೀವು. ಆದರೆ, ನಾವು ಬಿ– ಟೀಂ ಅಲ್ಲ. ನೀವು ಸಿ– ಟೀಂ, ಕಳ್ಳರ ತಂಡ’ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

‘ಮುಂಬರುವ ಚುನಾವಣೆಯು ಊಳಿಗಮಾನ್ಯ ತೆಲಂಗಾಣ ಮತ್ತು ಪ್ರಜಾ ತೆಲಂಗಾಣ ನಡುವಿನ ಕದನ’ ಎಂದು ಬಣ್ಣಿಸಿದರು.

ಮತ್ತೆ ಮುಖ್ಯಮಂತ್ರಿ ಆಗುವ ಆಕಾಂಕ್ಷೆ ಬದಿಗೆ ಸರಿಸಿಲ್ಲ: ಅಶೋಕ್ ಗೆಹಲೋತ್

‘ಟಿಕೆಟ್ ಹಂಚಿಕೆಯಲ್ಲಿ ಭಿನ್ನಾಭಿಪ್ರಾಯವಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಜಸ್ಥಾನದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯಾಗುವ ತಮ್ಮ ಆಕಾಂಕ್ಷೆಯನ್ನು ಬಿಟ್ಟುಕೊಡುವುದಿಲ್ಲ. ಆದರೆ ಸಚಿನ್ ಪೈಲಟ್ ಅವರ ಬೆಂಬಲಿಗ ಶಾಸಕರಿಗೆ ಟಿಕೆಟ್ ನೀಡುವುದನ್ನು ವಿರೋಧಿಸಿಯೂ ಇಲ್ಲ’ ಎಂದು ಹಿರಿಯ ನಾಯಕ ಅಶೋಕ್ ಗೆಹಲೋತ್ ಗುರುವಾರ ಇಲ್ಲಿ ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಕ್ಷಮಿಸು ಮತ್ತು ಮರೆತುಬಿಡು’ ನೀತಿಯನ್ನು ಅಳವಡಿಸಿಕೊಂಡಿದ್ದೇನೆ. ಮುಂದಿನದರ ಬಗ್ಗೆ ಆಲೋಚಿಸುತ್ತೇನೆ ಅಷ್ಟೆ. ನನ್ನಲ್ಲಿ ಏನೋ ವೈಶಿಷ್ಟ್ಯ ಇರುವುದರಿಂದಲೇ ರಾಜ್ಯವನ್ನು ಮುನ್ನಡೆಸಲು ಪಕ್ಷದ ಹೈಕಮಾಂಡ್ ಮೂರು ಬಾರಿ ನನ್ನನ್ನು ಆಯ್ಕೆ ಮಾಡಿದೆ. ವರಿಷ್ಠರು ಕೈಗೊಳ್ಳುವ ಯಾವುದೇ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ ಎಂದರು.

ಪಕ್ಷದಲ್ಲಿ ಒಮ್ಮತಕ್ಕೆ ಬಂದ ನಂತರವೇ ಎಲ್ಲಾ ನಿರ್ಧಾರಗಳನ್ನೂ ತೆಗೆದುಕೊಳ್ಳಲಾಗುತ್ತಿದೆ. ಪೈಲಟ್ ಬೆಂಬಲಿಗರಿಗೆ ಟಿಕೆಟ್ ನೀಡಬೇಕೆಂದು ಕೈಗೊಂಡ ತೀರ್ಮಾನಗಳಲ್ಲಿ ತಮ್ಮ ಪಾತ್ರವೂ ಇದೆ ಎಂದ ಅವರು, ಕಾಂಗ್ರೆಸ್‌ನಲ್ಲಿ ಅಪಸ್ವರ ಇಲ್ಲದೇ ಇರುವ ಬಗ್ಗೆ ಬಿಜೆಪಿಗೆ ಚಿಂತೆಯಾಗಿದೆ ಎಂದು ಹೇಳಿದರು.

ಮುಖ್ಯಾಂಶಗಳು
- ಪೈಲಟ್ ಬೆಂಬಲಿಗರಿಗೆ ಟಿಕೆಟ್ ನೀಡುವುದಕ್ಕೆ ಆಕ್ಷೇಪವಿಲ್ಲ
- ಟಿಕೆಟ್ ಹಂಚಿಕೆಯಲ್ಲಿ ನನ್ನ ತೀರ್ಮಾನವೂ ಇದೆ
- ವರಿಷ್ಠರ ನಿರ್ಧಾರಕ್ಕೆ ಬದ್ಧ: ಗೆಹಲೋತ್

‘ನನ್ನೊಂದಿಗೆ ರಾಜಕೀಯ ಭಿನ್ನಾಭಿಪ್ರಾಯ ಹೊಂದಿದ್ದವರೂ ಸೇರಿದಂತೆ ಕಾಂಗ್ರೆಸ್‌ನ ಎಲ್ಲಾ ಶಾಸಕರೂ ಈಗ ನನ್ನ ಕೆಲಸದಲ್ಲಿ ಯಾವುದೇ ಸಮಸ್ಯೆಯಿಲ್ಲ ಎಂದು ಹೇಳಿದ್ದಾರೆ. ಪೈಲಟ್ ಬೆಂಬಲಿಗರಿಗೆ ಟಿಕೆಟ್ ನೀಡುವುದಕ್ಕೆ ನಾನು ಆಕ್ಷೇಪ ವ್ಯಕ್ತಪಡಿಸಿಲ್ಲ’ ಎಂದು ಪ್ರಶ್ನೆಗೆ ಉತ್ತರಿಸಿದರು. ಪೈಲಟ್ ನೇತೃತ್ವದಲ್ಲಿ 2020ರಲ್ಲಿ ಗೆಹಲೋತ್ ಸರ್ಕಾರವನ್ನು ಉರುಳಿಸಲು ಯತ್ನ ನಡೆದಿತ್ತು.

‘ಶಾಸಕರಿಗೆ ಹಣ ನೀಡಲಾಗಿತ್ತು. ಆದರೆ, ಅವರು ಸರ್ಕಾರವನ್ನು ರಕ್ಷಿಸಿದರು. ಅವರನ್ನು ಭ್ರಷ್ಟರು ಎಂದು ಕರೆಯುವುದು ಹೇಗೆ’ ಎಂದರು.

ಮತ್ತೆ ಮುಖ್ಯಮಂತ್ರಿಯಾಗಲು ಬಯಸುವಿರಾ ಎಂದು ಕೇಳಿದ್ದಕ್ಕೆ, ‘ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಆಗದಿರುವುದೇ ಒಳ್ಳೆಯದು. ಏಕೆಂದರೆ ಆ ಸ್ಥಾನಕ್ಕೆ ಹೆಸರಿಸಿದವರೂ ಅಧಿಕಾರ ಪಡೆಯಲು ಸಾಧ್ಯವಾಗದೇ ಇರಬಹುದು ಎಂದು ಲಘು ಧಾಟಿಯಲ್ಲಿ ಹೇಳಿದರು. 1998ರಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸದಿದ್ದರೂ ಸೋನಿಯಾ ಗಾಂಧಿ ಅವರು ತಮ್ಮನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದರು. ರಾಜ್ಯದ ಮುಖ್ಯಸ್ಥನಾಗಿ ತಾವು ಮಾಡಿದ ಕೆಲಸಗಳು ತಮಗೆ ಈ ಅವಕಾಶ ಒದಗಿಸಿರಬಹುದು’ ಎಂದರು.


ಅಶೋಕ್ ಗೆಹಲೋತ್

ಮುಖ್ಯಮಂತ್ರಿಯಾಗಿ ಮುಂದುವರಿಯುವುದರಲ್ಲಿ ತಮಗೆ ಆಸಕ್ತಿಯಿಲ್ಲ ಎಂದು ಹೇಳಿದರೂ ಮುಖ್ಯಮಂತ್ರಿಯಾಗಿ ತಾವು ಮುಂದುವರಿಯುವುದನ್ನು ನೋಡಬಯಸುವುದಾಗಿ ಈ ಹಿಂದೆ ಮಹಿಳೆಯೊಬ್ಬರು ಹೇಳಿದ್ದ ಘಟನೆಯನ್ನು ಅವರು ನೆನಪಿಸಿಕೊಂಡರು.

‘ಮುಖ್ಯಮಂತ್ರಿ ಸ್ಥಾನವನ್ನು ನಾನು ಬಿಡಲು ಬಯಸುತ್ತೇನೆ. ಆದರೆ, ಆ ಸ್ಥಾನವು ನನ್ನನ್ನು ಬಿಡುತ್ತಿಲ್ಲ. ಎಂದಿಗೂ ಬಿಡದೇ ಇರಲೂ ಬಹುದು’ ಎಂದಿದ್ದಾಗಿ ಹೇಳಿದರು. ‘ಸೋನಿಯಾ ಗಾಂಧಿ, ರಾಹುಲ್‌ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ನನ್ನಲ್ಲಿ ನಂಬಿಕೆ ಇಡಲು ಏನೋ ಕಾರಣ ಇರಲೂಬಹುದು’ ಎಂದರು.

ವಸುಂಧರಾ ರಾಜೇ ಅವರ ಕುರಿತು ಬಿಜೆಪಿಯ ನಡಾವಳಿ ಬಗ್ಗೆ ಕೇಳಿದ್ದಕ್ಕೆ, ಅದು ಆ ಪಕ್ಷದ ಆಂತರಿಕ ವಿಷಯ ಎಂದರು.

ರಾಜಸ್ಥಾನ ಕಣಕ್ಕೆ ಎಐಎಂಐಎಂ ಪ್ರವೇಶ

ಜೈಪುರ: ರಾಜಸ್ಥಾನ ವಿಧಾನಸಭೆ ಚುನಾವಣಾ ಕಣಕ್ಕೆ ಇದೇ ಮೊದಲ ಬಾರಿಗೆ ಆಲ್ ಇಂಡಿಯಾ ಮಜ್ಲಿಸ್‌–ಇ–ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷ ಪ್ರವೇಶಿಸಿದೆ.

ಮುಸ್ಲಿಂ ಜನಸಂಖ್ಯೆಯೇ ಹೆಚ್ಚಿರುವ ಪ್ರದೇಶಗಳಲ್ಲಿ ಸದ್ಯಕ್ಕೆ ಮೂವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಎಐಎಂಐಎಂ, ಅಲ್ಪಸಂಖ್ಯಾತ ಸಮುದಾಯಕ್ಕೆ ಮೂಲ ಸೌಕರ್ಯ ಒದಗಿಸುವ ಕಡೆಗೆ ಗಮನಹರಿಸುವುದಾಗಿ ಹೇಳಿದೆ. ಫತೇಹ್‌ಪುರ ಕ್ಷೇತ್ರದಿಂದ ಜಾವೇದ್ ಆಲಿ ಖಾನ್, ಕಾಮ್‌ವನ್‌ನಿಂದ ಇಮ್ರಾನ್ ನವಾಬ್, ಜೈಪುರದ ಹವಾಮಹಲ್ ಕ್ಷೇತ್ರದಿಂದ ಜಮೀಲ್ ಖಾನ್ ಅವರನ್ನು ಕಣಕ್ಕಿಳಿಸಿದೆ.

‘ರಾಜ್ಯದ 30 ಕ್ಷೇತ್ರಗಳಲ್ಲಿ ಪಕ್ಷ ಸ್ಪರ್ಧಿಸುವ ನಿರೀಕ್ಷೆ ಇದೆ’ ಎಂದು ಎಐಎಂಐಎಂ ರಾಜ್ಯ ಘಟಕದ ಅಧ್ಯಕ್ಷ ಜಮೀಲ್ ಖಾನ್ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಅವರು ಅಕ್ಟೋಬರ್ 21ರಿಂದ 22ರ ವರೆಗೆ ರಾಜಸ್ಥಾನಕ್ಕೆ ಭೇಟಿ ನೀಡಿ, ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲಿದ್ದಾರೆ.

‘ಅಭಿವೃದ್ಧಿ ಕಾರ್ಯಸೂಚಿ ಜೊತೆಗೆ ನಾವು ಎಲ್ಲಾ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಬಳಿ ಹೋಗುತ್ತೇವೆ. ಕಳೆದ 25 ವರ್ಷಗಳಿಂದ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಆಡಳಿತ ನಡೆಸುತ್ತಿವೆ. ಅಲ್ಪಸಂಖ್ಯಾತರು ವಾಸಿಸುವ ಪ್ರದೇಶಗಳಿಗೆ ಆ ಪಕ್ಷಗಳು ಭೇಟಿ ನೀಡುತ್ತವೆ. ಆದರೆ, ನಾವು ಎಂದಿಗೂ ಅಭಿವೃದ್ಧಿ ಹೊಂದದಂತೆ ನೋಡಿಕೊಂಡಿವೆ. ಮೂಲ ಸೌಕರ್ಯಗಳಾದ ಶಾಲೆ, ಕುಡಿಯುವ ನೀರು, ಆಸ್ಪತ್ರೆಗಳು, ನೈರ್ಮಲ್ಯ ನಮಗೆ ಇನ್ನೂ ದೊರೆತಿಲ್ಲ. ಈ ಪ್ರದೇಶಗಳಲ್ಲಿ ಮಾದಕ ವಸ್ತು ಜಾಲ ಬಿಗಿಯಾಗುತ್ತಿದೆ’ ಎಂದು ಜಮೀಲ್ ಖಾನ್ ಅವರು ಆರೋಪಿಸಿದ್ದಾರೆ.



ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿಯಲ್ಲಿ ಮೃತಪಟ್ಟ, ಕಾಣೆಯಾದ ಹಾಗೂ ಅಪಹರಣಕ್ಕೆ ಒಳಗಾದವರ ಭಾವಚಿತ್ರಗಳನ್ನು ಟೆಲ್ ಅವೀವ್ ವಿಶ್ವವಿದ್ಯಾಲಯದಲ್ಲಿ ಪ್ರದರ್ಶಿಸಲಾಗಿದೆ (ಎಡಚಿತ್ರ). ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಮೃತಪಟ್ಟ ಮಗುವನ್ನು ಖಾನ್ ಯೂನಿಸ್‌ನಲ್ಲಿ ನಡೆದ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ಹೊತ್ತು ಸಾಗುತ್ತಿರುವ ತಂದೆ –ಎಎಫ್‌ಪಿ ಚಿತ್ರಗಳು

ಹಮಾಸ್ ಬಂಡುಕೋರರ ನೇತೃತ್ವದ ರಾಷ್ಟ್ರೀಯ ಭದ್ರತಾ ಪಡೆಯ ಮುಖ್ಯಸ್ಥ ಸಾವು

ಗಾಜಾ ಮೇಲೆ ಇಸ್ರೇಲ್ ಅವ್ಯಾಹತ ದಾಳಿ

ಖಾನ್ ಯೂನಿಸ್/ಗಾಜಾ (ಎಪಿ/ರಾಯಿಟರ್ಸ್): ಗಾಜಾ ಪಟ್ಟಿಯ ಬಹುತೇಕ ಪ್ರದೇಶಗಳಲ್ಲಿ ಇಸ್ರೇಲ್ ಗುರುವಾರ ವಾಯುದಾಳಿ ನಡೆಸಿದೆ. ಸುರಕ್ಷಿತ ವಲಯ ಎಂದು ಈ ಹಿಂದೆ ತಾನು ಘೋಷಿಸಿದ್ದ ಗಾಜಾ ಪಟ್ಟಿಯ ದಕ್ಷಿಣದ ಕೆಲವು ಕಡೆಗಳಲ್ಲಿಯೂ ವಾಯುದಾಳಿ ನಡೆಸಿದೆ. ಈ ಮೂಲಕ, ಗಾಜಾ ಪಟ್ಟಿಯಲ್ಲಿ ಸಿಲುಕಿರುವ 20 ಲಕ್ಷಕ್ಕೂ ಹೆಚ್ಚಿನ ಪ್ಯಾಲೆಸ್ಟೀನ್ ನಾಗರಿಕರ ಪಾಲಿಗೆ ಯಾವ ಸ್ಥಳವೂ ಸುರಕ್ಷಿತವಲ್ಲ ಎಂಬ ಭಾವನೆ ತೀವ್ರಗೊಳ್ಳುವಂತೆ ಮಾಡಿದೆ.

ಇಸ್ರೇಲ್ ವಾಯುದಾಳಿಯಲ್ಲಿ ಹಮಾಸ್ ನೇತೃತ್ವದ ರಾಷ್ಟ್ರೀಯ ಭದ್ರತಾ ಪಡೆಯ ಮುಖ್ಯಸ್ಥ ಜೆಹಾದ್ ಮೆಹ್ಸೆನ್ ಮತ್ತು ಅವರ ಕುಟುಂಬದ ಸದಸ್ಯರು ಮೃತಪಟ್ಟಿದ್ದಾರೆ ಎಂದು ಹಮಾಸ್ ಜೊತೆ ನಂಟು ಹೊಂದಿರುವ ಸುದ್ದಿಸಂಸ್ಥೆಯೊಂದು ಹೇಳಿದೆ.

ಹಮಾಸ್ ಬಂಡುಕೋರರು ಇಸ್ರೇಲ್ ನಾಗರಿಕರನ್ನು ಹತ್ಯೆ ಮಾಡಿದ ನಂತರದಲ್ಲಿ ಇಸ್ರೇಲ್ ಮಿಲಿಟರಿಯು ಗಾಜಾ ಪಟ್ಟಿಯ ಮೇಲೆ ನಿರಂತರವಾಗಿ ವಾಯುದಾಳಿ ನಡೆಸುತ್ತಿದೆ. ಈಜಿಪ್ಟ್‌ಗೆ ತಾಗಿಕೊಂಡಿರುವ ಗಡಿಯ ಮೂಲಕ ಗಾಜಾ ಪಟ್ಟಿಯೊಳಕ್ಕೆ ಮಾನವೀಯ ನೆಲೆಯಲ್ಲಿ ಅಗತ್ಯ ವಸ್ತುಗಳನ್ನು ಪೂರೈಸಲು ಒಪ್ಪಿದ ನಂತರದಲ್ಲಿ ಇಸ್ರೇಲ್ ಈ ವಾಯುದಾಳಿ ನಡೆಸಿದೆ.

- ಗಾಜಾದಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರಿಗೆ ಇಸ್ರೇಲ್ ಸಾಮೂಹಿಕವಾಗಿ ಶಿಕ್ಷೆ ವಿಧಿಸುತ್ತಿದೆ ಎಂದು ಈಜಿಪ್ಟ್ ಮತ್ತು ಜೋರ್ಡನ್ ಆರೋಪಿಸಿವೆ
- ಇಸ್ರೇಲ್ ಮಿಲಿಟರಿಯ ಬಳಕೆಗಾಗಿ ಅಮೆರಿಕವು ಕಳುಹಿಸಿರುವ ಮಿಲಿಟರಿ ವಾಹನಗಳನ್ನು ಹೊತ್ತ ವಿಮಾನವು ಇಸ್ರೇಲ್‌ನ ಬೆನ್ ಗುರಿಯನ್ ವಿಮಾನ ನಿಲ್ದಾಣಕ್ಕೆ ಬಂದಿದೆ ಎಂದು ‘ಟೈಮ್ಸ್ ಆಫ್ ಇಸ್ರೇಲ್’ ವರದಿ ಮಾಡಿದೆ
- ಮನೆಯೊಂದರ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ಪ್ಯಾಲೆಸ್ಟೀನ್ ಬಾಲಕನೊಬ್ಬನನ್ನು ರಕ್ಷಿಸಲಾಗಿದೆ
- ರಫಾ ಗಡಿಯಲ್ಲಿ ರಸ್ತೆ ದುರಸ್ತಿಪಡಿಸಲು ಈಜಿಪ್ಟ್ ಯಂತ್ರೋಪಕರಣಗಳನ್ನು ಕಳಿಸಿದೆ ಎಂದು ಅಲ್ಲಿಯ ಭದ್ರತಾ ಪಡೆಯ ಮೂಲಗಳು ತಿಳಿಸಿವೆ

ಅಗತ್ಯ ವಸ್ತುಗಳ ಪೂರೈಕೆಯು ಇಲ್ಲದಿರುವ ಕಾರಣ, ಗಾಜಾದಲ್ಲಿನ ನಿವಾಸಿಗಳಲ್ಲಿ ಹಲವರು ದಿನದಲ್ಲಿ ಒಂದು ಹೊತ್ತು ಮಾತ್ರ ಊಟ ಮಾಡುತ್ತಿದ್ದಾರೆ. ಹಲವರು ಕೊಳಕು ನೀರನ್ನೇ ಕುಡಿಯಬೇಕಾದ ಪರಿಸ್ಥಿತಿ ಇದೆ.

ದಕ್ಷಿಣ ಗಾಜಾದಲ್ಲಿ ಲಕ್ಷಾಂತರ ಮಂದಿ ಆಶ್ರಯ ಪಡೆದಿದ್ದಾರೆ. ಈ ಪ್ರದೇಶದ ಖಾನ್ ಯೂನಿಸ್‌ನಲ್ಲಿ ನಿರಂತರ ವಾಯುದಾಳಿ ನಡೆದಿದೆ, ಮನೆಗಳ ಮೇಲೆಯೂ ದಾಳಿಯಾಗಿದೆ ಎಂದು ಹಮಾಸ್ ಆಂತರಿಕ ಸಚಿವಾಲಯ ತಿಳಿಸಿದೆ. ಕನಿಷ್ಠ 12 ಮೃತದೇಹಗಳನ್ನು ಆಸ್ಪತ್ರೆಗೆ ತರಲಾಗಿದೆ. 40 ಮಂದಿ ಗಾಯಾಳುಗಳು ಬಂದಿದ್ದಾರೆ ಎಂದು ಖಾನ್ ಯೂನಿಸ್‌ನ ನಾಸೆರ್ ಆಸ್ಪತ್ರೆಯ ಸಿಬ್ಬಂದಿ ತಿಳಿಸಿದ್ದಾರೆ.

ಪ್ಯಾಲೆಸ್ಟೀನ್‌ನ ಪ್ರಮುಖ ಬಂಡುಕೋರನೊಬ್ಬನನ್ನು ರಫಾದಲ್ಲಿ ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ಹಮಾಸ್‌ನ ಕಮಾಂಡ್ ಕೇಂದ್ರಗಳು ಹಾಗೂ ಗುಪ್ತದಳದ ಮೌಲಸೌಕರ್ಯ ವ್ಯವಸ್ಥೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ತಿಳಿಸಿದೆ. ಅಲ್ಲದೆ, ಮಾರ್ಟರ್ ದಾಳಿಗೆ ಬಳಸುವ ಸ್ಥಳಗಳ ಮೇಲೆಯೂ ದಾಳಿ ನಡೆದಿದೆ.

ಹಮಾಸ್ ಬಂಡುಕೋರರು ಗಾಜಾದಲ್ಲಿ ಎಲ್ಲಿಯೇ ಇದ್ದರೂ ಅವರ ಮೇಲೆ ದಾಳಿ ನಡೆಸಲಾಗುತ್ತಿದೆ ಎಂದು ಇಸ್ರೇಲ್ ಹೇಳಿದೆ. ಬಂಡುಕೋರರು ನಾಗರಿಕರ ನಡುವೆಯೇ ಆಶ್ರಯ ಪಡೆದುಕೊಂಡಿದ್ದಾರೆ ಎಂದು ದೂರಿದೆ.

ಮನೆಗಳ ಮೇಲೂ ದಾಳಿ: ಗಾಜಾ ಪಟ್ಟಿಯ ಉತ್ತರ ಭಾಗದಲ್ಲಿ ಇಸ್ರೇಲ್ ಮೂರು ವಸತಿ ಕಟ್ಟಡಗಳ ಮೇಲೆ ದಾಳಿ ನಡೆಸಿದೆ ಎಂದು ಗಾಜಾದ ಆಂತರಿಕ ಸಚಿವಾಲಯ ತಿಳಿಸಿದೆ. ಅಲ್ಲಿ ಇಸ್ರೇಲ್ ಗಡಿಗೆ ಹೊಂದಿಕೊಂಡಿರುವ ಕೆಲವು ಮನೆಗಳ ಮೇಲೆಯೂ ದಾಳಿ ನಡೆದಿದೆ ಎಂದು ತಿಳಿಸಿದೆ.

ಅಕ್ಟೋಬರ್ 7ರ ನಂತರದಲ್ಲಿ ಗಾಜಾದಲ್ಲಿ 3,478 ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ಹೇಳಿದೆ.

ಈಜಿಪ್ಟ್ ಕಡೆಯಿಂದ ಗಾಜಾ ಪಟ್ಟಿಯೊಳಕ್ಕೆ ಆರಂಭದಲ್ಲಿ 20 ಟ್ರಕ್ಕುಗಳಲ್ಲಿ ಅಗತ್ಯ ವಸ್ತುಗಳನ್ನು ಸಾಗಿಸಲಾಗುತ್ತದೆ. ಶುಕ್ರವಾರದಿಂದ ಇದು ಆರಂಭವಾಗಲಿದೆ ಎಂದು ಅಮೆರಿಕ ಹೇಳಿದೆ. ಆದರೆ ಇಲ್ಲಿನ ಗಡಿ ಪ್ರದೇಶದಲ್ಲಿ ರಸ್ತೆಯು ಇಸ್ರೇಲ್ ದಾಳಿಯಿಂದಾಗಿ ಹಾನಿಗೊಂಡಿದೆ. ಅದನ್ನು ಇನ್ನಷ್ಟೇ ಸರಿಪಡಿಸಬೇಕಿದೆ.

ಈಜಿಪ್ಟ್–ಗಾಜಾ ಪಟ್ಟಿ ನಡುವಿನ ಗಡಿಯ ಬಳಿ 200 ಟ್ರಕ್ಕುಗಳು, 3,000 ಟನ್‌ಗಳಷ್ಟು ಅಗತ್ಯ ವಸ್ತುಗಳನ್ನು ಹೊತ್ತು ನಿಂತಿವೆ ಎಂದು ರೆಡ್ ಕ್ರೆಸೆಂಟ್ ಸಂಸ್ಥೆಯ ಖಾಲಿದ್ ಜಾಯೆದ್ ಹೇಳಿದ್ದಾರೆ. ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಅಗತ್ಯ ವಸ್ತುಗಳ ಪೂರೈಕೆ ಆಗಲಿದೆ ಎಂದು ಈಜಿಪ್ಟ್‌ನ ವಿದೇಶಾಂಗ ಸಚಿವ ಸಮೇಹ್ ಶೌಕ್ರಿ ಸುದ್ದಿವಾಹಿನಿಯೊಂದಕ್ಕೆ ತಿಳಿಸಿದ್ದಾರೆ.

ಭೂದಾಳಿಗೆ ಸಜ್ಜಾಗಲು ಸೂಚನೆ

ಖಾನ್ ಯೂನಿಸ್ (ಎಪಿ): ಗಾಜಾ ಪಟ್ಟಿಯನ್ನು ಪ್ರವೇಶಿಸಲು ಸನ್ನದ್ಧರಾಗಿ ಇರುವಂತೆ ಯೋಧರಿಗೆ ಇಸ್ರೇಲ್ ರಕ್ಷಣಾ ಸಚಿವ ಯವಾವ್ ಗ್ಯಾಲಂಟ್ ಅವರು ಸೂಚಿಸಿದ್ದಾರೆ. ಆದರೆ, ಭೂದಾಳಿ ಯಾವಾಗ ಶುರುವಾಗುತ್ತದೆ ಎಂಬುದನ್ನು ಅವರು ಹೇಳಿಲ್ಲ.

ಇಸ್ರೇಲ್ ಪದಾತಿ ದಳದ ಯೋಧರನ್ನು ಗುರುವಾರ ಭೇಟಿ ಮಾಡಿದ ಅವರು, ಗಾಜಾ ಪಟ್ಟಿಯೊಳಕ್ಕೆ ನುಗ್ಗಲು ‘ಸಂಘಟಿತರಾಗಿ, ಸನ್ನದ್ಧರಾಗಿ’ ಎಂದು ತಿಳಿಸಿದ್ದಾರೆ. ‘ಗಾಜಾವನ್ನು ಈಗ ದೂರದಿಂದ ನೋಡುತ್ತಿರುವ ನೀವು, ಹತ್ತಿರದಿಂದಲೇ ಇನ್ನು ಕಾಣಲಿದ್ದೀರಿ. ಈ ಭರವಸೆಯನ್ನು ನಾನು ನೀಡುತ್ತಿದ್ದೇನೆ’ ಎಂದು ಅವರು ಹೇಳಿದ್ದಾರೆ.

ಇಸ್ರೇಲ್ ತನ್ನ ಯೋಧರನ್ನು ಗಾಜಾ ಗಡಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನಿಯೋಜಿಸಿದೆ.

ಪ್ಯಾಲೆಸ್ಟೀನ್: ಮೃತರಿಗೆ ಮೋದಿ ಸಂತಾಪ

ನವದೆಹಲಿ (ಪಿಟಿಐ): ಪ್ಯಾಲೆಸ್ಟೀನ್ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಬ್ಬಾಸ್ ಅವರ ಜೊತೆ ಗುರುವಾರ ದೂರವಾಣಿ ಮೂಲಕ ಮಾತುಕತೆ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಇಸ್ರೇಲ್–ಪ್ಯಾಲೆಸ್ಟೀನ್ ವಿಚಾರವಾಗಿ ಭಾರತ ಹಿಂದಿನಿಂದಲೂ ತಾಳಿರುವ ನೈತಿಕ ನೆಲೆಗಟ್ಟಿನ ನಿಲುವನ್ನು ಪುನರುಚ್ಚರಿಸಿದ್ದಾರೆ.

ಪ್ಯಾಲೆಸ್ಟೀನ್ ಜನರಿಗೆ ಮಾನವೀಯ ನೆಲೆಯಲ್ಲಿ ನೆರವು ಒದಗಿಸುವುದನ್ನು ಭಾರತವು ಮುಂದುವರಿಸಲಿದೆ ಎಂಬ ಭರವಸೆಯನ್ನು ಮೋದಿ ಅವರು ನೀಡಿದ್ದಾರೆ. ಭಯೋತ್ಪಾದನೆ, ಹಿಂಸಾಚಾರದ ಬಗ್ಗೆ ಭಾರತ ಹೊಂದಿರುವ ಕಳವಳವನ್ನು ಕೂಡ ವ್ಯಕ್ತಪಡಿಸಿದ್ದಾರೆ.

‘ಮಹಮದ್ ಅಬ್ಬಾಸ್ ಅವರ ಜೊತೆ ಮಾತುಕತೆ ನಡೆಸಿದೆ. ಗಾಜಾದ ಅಲ್ ಅಹ್ಲಿ ಆಸ್ಪತ್ರೆಯಲ್ಲಿ ನಾಗರಿಕರು ಮೃತಪಟ್ಟ ವಿಚಾರವಾಗಿ ನನ್ನ ಸಂತಾಪಗಳನ್ನು ತಿಳಿಸಿದ್ದೇನೆ’ ಎಂದು ಮೋದಿ ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ. ಗಾಜಾ ಆಸ್ಪತ್ರೆಯ ಮೇಲಿನ ದಾಳಿಯ ಬಗ್ಗೆ ಮೋದಿ ಅವರು ಬುಧವಾರ ಆಘಾತ ವ್ಯಕ್ತಪಡಿಸಿದ್ದರು.

> **ಭಯೋತ್ಪಾದನೆಯನ್ನು ಎಲ್ಲ ಬಗೆಗಳಲ್ಲಿಯೂ ಎದುರಿಸಲು ಅಂತರರಾಷ್ಟ್ರೀಯ ಸಮುದಾಯವು ಒಟ್ಟಾಗಿ ನಿಲ್ಲಬೇಕು**
> **ಅರಿಂದಮ್ ಬಾಗ್ಚಿ,** ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ

‘ಅಬ್ಬಾಸ್ ಅವರು ಪ್ರಧಾನಿ ಮೋದಿ ಅವರ ದೂರವಾಣಿ ಕರೆ ಸ್ವೀಕರಿಸಿ, ಗಾಜಾ ಮೇಲೆ ಇಸ್ರೇಲ್ ನಡೆಸಿರುವ ಆಕ್ರಮಣಕ್ಕೆ ತಕ್ಷಣ ಅಂತ್ಯ ಹೇಳಬೇಕಿರುವುದರ ಮಹತ್ವದ ಬಗ್ಗೆ ಮಾತನಾಡಿದರು’ ಎಂದು ಪ್ಯಾಲೆಸ್ಟೀನ್‌ನ ಸುದ್ದಿಸಂಸ್ಥೆ ವಫಾ ವರದಿ ಮಾಡಿದೆ. ‘ಅಂತರರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ಶಾಂತಿ ಸ್ಥಾಪನೆಗೆ ಭಾರತ ಬೆಂಬಲ ನೀಡಲಿದೆ ಎಂಬುದನ್ನು ಮೋದಿ ಅವರು ಪುನರುಚ್ಚರಿಸಿದರು. ಕಷ್ಟದ ಸಂದರ್ಭದಲ್ಲಿ ಪ್ಯಾಲೆಸ್ಟೀನ್ ಜನರ ಜೊತೆಗಿರುವುದಾಗಿ ಹೇಳಿದರು’ ಎಂದು ಕೂಡ ವಫಾ ವರದಿ ತಿಳಿಸಿದೆ.

ಅಂತರರಾಷ್ಟ್ರೀಯ ಕಾನೂನು ಪಾಲನೆಗೆ ಕರೆ: ಇಸ್ರೇಲ್–ಹಮಾಸ್ ಯುದ್ಧದಲ್ಲಿ ನಾಗರಿಕರು ಜೀವ ಕಳೆದುಕೊಳ್ಳುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಭಾರತವು, ಅಂತರರಾಷ್ಟ್ರೀಯ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಒತ್ತಾಯಿಸಿದೆ.

ಅಕ್ಟೋಬರ್ 7ರಂದು ಹಮಾಸ್ ನಡೆಸಿದ ದಾಳಿಯನ್ನು ಉಲ್ಲೇಖಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, ‘ಆಪರೇಷನ್ ಅಜಯ್’ ಅಡಿಯಲ್ಲಿ ಅಂದಾಜು 1,200 ಭಾರತೀಯರು ಇಸ್ರೇಲ್‌ನಿಂದ ಮರಳಿದ್ದಾರೆ ಎಂದು ಅವರು ಹೇಳಿದ್ದಾರೆ. ‘ದ್ವಿರಾಷ್ಟ್ರ ಸೂತ್ರದ ಜಾರಿಗೆ ಭಾರತವು ನೇರ ಮಾತುಕತೆಯ ಪರವಾಗಿದೆ’ ಎಂದು ತಿಳಿಸಿದ್ದಾರೆ.

‘ಪ್ಯಾಲೆಸ್ಟೀನ್ ವಿಚಾರವಾಗಿ ನಾವು ಬಹುಕಾಲದಿಂದ ತಾಳಿರುವ ನಿಲುವನ್ನು ಪುನರುಚ್ಚರಿಸಿದ್ದೇವೆ. ಸಾರ್ವಭೌಮ, ಸ್ವತಂತ್ರ, ಸುರಕ್ಷಿತವಾದ ಹಾಗೂ ಸ್ಪಷ್ಟವಾಗಿ ಗುರುತಿಸಲಾದ ಗಡಿಯನ್ನು ಹೊಂದಿರುವ ಪ್ಯಾಲೆಸ್ಟೀನ್ ರಾಷ್ಟ್ರವನ್ನು ಸ್ಥಾಪಿಸಲು ಮಾತುಕತೆಯ ಪರವಾಗಿ ಇರುವುದು ನಮ್ಮ ನಿಲುವು. ಪ್ಯಾಲೆಸ್ಟೀನ್ ರಾಷ್ಟ್ರವು ಇಸ್ರೇಲ್‌ನ ಜೊತೆ ಜೊತೆಗೆ ಶಾಂತಿಯಿಂದ ಇರಬೇಕು’ ಎಂದು ಬಾಗ್ಚಿ ಹೇಳಿದ್ದಾರೆ.


ಇಸ್ರೇಲ್ ಬೆನ್ನಿಗೆ ನಿಂತ ಸುನಕ್

ಜೆರುಸಲೇಂ (ಎಪಿ/ಎಎಫ್‌ಪಿ): ‘ಇಸ್ರೇಲ್ ಪಾಲಿನ ಕಡುಕಷ್ಟದ ಈ ಹೊತ್ತಿನಲ್ಲಿ ನಾವು ಇಸ್ರೇಲ್ ಜೊತೆ ಇರುತ್ತೇವೆ’ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ.

‘ನಿಮ್ಮ ಸ್ನೇಹಿತನಾಗಿ, ಈ ಕಡುಕಷ್ಟದ ಸಂದರ್ಭದಲ್ಲಿ ನಿಮ್ಮ ಜೊತೆ ನಿಲ್ಲುತ್ತಿರುವುದು ನನಗೆ ಹೆಮ್ಮೆಯ ಸಂಗತಿ’ ಎಂದು ಸುನಕ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಜೊತೆಯಲ್ಲಿ ನಿಂತು ಘೋಷಿಸಿದರು.

ಗಾಜಾದ ನಾಗರಿಕರಿಗೆ ಆಹಾರ, ನೀರು ಮತ್ತು ಔಷಧ ಲಭ್ಯವಾಗುವಂತೆ ಮಾಡುವುದು ಕೂಡ ಬಹಳ ಮಹತ್ವದ್ದು ಎಂದು ಸುನಕ್ ಹೇಳಿದ್ದಾರೆ.

ಸುನಕ್ ಅವರು ಸೌದಿ ಅರೇಬಿಯಾಕ್ಕೆ ತೆರಳಿ ಅಲ್ಲಿನ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರನ್ನು ಭೇಟಿ ಮಾಡುವ ಯೋಜನೆ ಹೊಂದಿದ್ದಾರೆ. ಮಧ್ಯಪ್ರಾಚ್ಯದಲ್ಲಿನ ಬಿಕ್ಕಟ್ಟನ್ನು ತಿಳಿಗೊಳಿಸುವುದು, ಗಾಜಾ ಪಟ್ಟಿಗೆ ಅಗತ್ಯ ವಸ್ತುಗಳ ಪೂರೈಕೆ ಆಗುವಂತೆ ನೋಡಿಕೊಳ್ಳುವುದು ಮತ್ತು ಹಮಾಸ್ ವಶದಲ್ಲಿ ಇರುವ ಬ್ರಿಟನ್ನಿನ ಒತ್ತೆಯಾಳುಗಳ ಬಿಡುಗಡೆ ಸುನಕ್ ಅವರ ಭೇಟಿಯ ಉದ್ದೇಶ.


ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಜೆರುಸಲೇಂನಲ್ಲಿ ಗುರುವಾರ ಭೇಟಿ ಮಾಡಿದರು –ಪಿಟಿಐ ಚಿತ್ರ


ಚೀನಾ ಕರೆ: ‘ಮಧ್ಯಪ್ರಾಚ್ಯದಲ್ಲಿ ಇನ್ನಷ್ಟು ಸ್ಥಿರತೆ ಮೂಡಿಸಲು ನಾವು ಕೆಲಸ ಮಾಡಬೇಕು’ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಈಜಿಪ್ಟ್ ಪ್ರಧಾನಿ ಮುಸ್ತಫಾ ಮುದ್ಬೌಲಿ ಅವರಲ್ಲಿ ಹೇಳಿದ್ದಾರೆ.

‘ಪ್ಯಾಲೆಸ್ಟೀನ್ ಮತ್ತು ಇಸ್ರೇಲ್ ಶಾಂತಿಯುತವಾಗಿ ಸಹಬಾಳ್ವೆ ನಡೆಸಲು ದ್ವಿರಾಷ್ಟ್ರ ಸೂತ್ರವನ್ನು ಚೀನಾ ಬೆಂಬಲಿಸುತ್ತದೆ’ ಎಂದಿದ್ದಾರೆ.

> **ಇಸ್ರೇಲಿನ ಜನ ಇಷ್ಟು ಒಗ್ಗಟ್ಟು ಪ್ರದರ್ಶಿಸಿದ್ದನ್ನು ನಾನು ಹಿಂದೆಂದೂ ಕಂಡಿರಲಿಲ್ಲ. ನಮ್ಮಲ್ಲಿ ಒಗ್ಗಟ್ಟು ಮೂಡಬೇಕು. ಯುದ್ಧ ಗೆಲ್ಲಲು ಇದನ್ನು ಕಾಯ್ದುಕೊಳ್ಳಬೇಕು**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

> **ನಾಗರಿಕರ ಜೀವ ರಕ್ಷಣೆಗೆ ಇಸ್ರೇಲ್ ಎಲ್ಲ ಬಗೆಯ ಎಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಿದೆ ಎಂಬುದು ಬ್ರಿಟನ್‌ಗೆ ಗೊತ್ತಿದೆ. ಆದರೆ, ಹಮಾಸ್ ಹಾಗಲ್ಲ; ಅದು ನಾಗರಿಕರನ್ನು ಅಪಾಯಕ್ಕೆ ನೂಕುತ್ತಿದೆ.**
> **ರಿಷಿ ಸುನಕ್,** ಬ್ರಿಟನ್ ಪ್ರಧಾನಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,671
ಇಂದಿನ ಅಂತ್ಯ	19,625
	46
ದಿನದ ಕನಿಷ್ಠ	19,512

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ಹೊಸ)	₹1610 (1600)
ಸೋಯಾ (ಹೊಸ)	₹930 (920)
ಸೂರ್ಯಕಾಂತಿ (ಹೊಸ)	₹920 (917)
ಪಾಮೋಲಿನ್	₹825 (830)

ವಿನಿಮಯ ದರ

$ ಡಾಲರ್	83.25
£ ಪೌಂಡ್	100.76
€ ಯುರೊ	87.77
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹4500-7300
ತಿಪಟೂರು	₹8000-9000
ತುಮಕೂರು	₹8800-10100
ತುರುವೇಕೆರೆ	₹8800-9000

ಮುದ್ದೆಮನೆ ಕಾಫಿ (50 ಕೆಜಿಗೆ)

ಎಪಿ	₹10800
ಎಸಿ	₹6440
ಆರ್‌ಪಿ	₹9500
ಆರ್‌ಸಿ	₹5960

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹133

(ಪ್ರತಿ ಕೆ.ಜಿಗೆ)

‘ಭಾರತದಲ್ಲೇ ಗೂಗಲ್‌ನಿಂದ ಪಿಕ್ಸೆಲ್ ಫೋನ್ ತಯಾರಿಕೆ’



ನವದೆಹಲಿ (ರಾಯಿಟರ್ಸ್/ಪಿಟಿಐ): ‘ಗೂಗಲ್’ ಕಂಪನಿಯು ಪಿಕ್ಸೆಲ್ ಸರಣಿಯ ಸ್ಮಾರ್ಟ್‌ಫೋನ್‌ಗಳನ್ನು ಭಾರತದಲ್ಲಿಯೇ ತಯಾರಿಸಲಿದೆ. ಮೊದಲಿಗೆ ಪಿಕ್ಸೆಲ್ 8 ಸ್ಮಾರ್ಟ್‌ಫೋನ್ ತಯಾರಿಸಲಿದ್ದು, ಮುಂದಿನ ವರ್ಷ ಅದು ಮಾರುಕಟ್ಟೆಗೆ ಬರಲಿದೆ’ ಎಂದು ಕಂಪನಿಯ ಹಿರಿಯ ಉಪಾಧ್ಯಕ್ಷ ರಿಕ್ ಆಸ್ಟರ್ಲೋಹ್ ತಿಳಿಸಿದ್ದಾರೆ.

‘ಗೂಗಲ್ ಫಾರ್ ಇಂಡಿಯಾ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಭಾರತದಲ್ಲಿ ಸ್ಮಾರ್ಟ್‌ಫೋನ್‌ಗಳನ್ನು ತಯಾರಿಸಲು ಜಾಗತಿಕ ಮತ್ತು ದೇಶಿ ತಯಾರಕರೊಂದಿಗೆ ಕಂಪನಿಯು ಪಾಲುದಾರಿಕೆ ಮಾಡಿಕೊಳ್ಳಲಿದೆ’ ಎಂದು ಅವರು ಹೇಳಿದ್ದಾರೆ.

‘ಪಿಕ್ಸೆಲ್ ಸ್ಮಾರ್ಟ್‌ಫೋನ್‌ಗಳಿಗೆ ಭಾರತವು ಆದ್ಯತೆಯ ಮಾರುಕಟ್ಟೆ ಆಗಿದೆ. ದೇಶದ ಜನರಿಗೆ ಉತ್ತಮ ಹಾರ್ಡ್‌ವೇರ್ ಮತ್ತು ಬಿಲ್ಟ್ ಇನ್ ಸಾಫ್ಟ್‌ವೇರ್ ನೀಡಲು ನಾವು ಬದ್ಧ’ ಎಂದು ರಿಕ್ ತಿಳಿಸಿದ್ದಾರೆ.


ಈ ಮೊದಲು ಭಾರತದಲ್ಲಿ ಬಳಸುತ್ತಿದ್ದ ಶೇ 98ರಷ್ಟು ಮೊಬೈಲ್ ಫೋನ್‌ಗಳು ಆಮದು ಮಾಡಿಕೊಂಡಿದ್ದಾಗಿರುತ್ತಿತ್ತು. ಈಗ ದೇಶದಲ್ಲಿ ಬಳಕೆ ಆಗುತ್ತಿರುವ ಶೇ 98ರಷ್ಟು ಫೋನ್‌ಗಳು ಭಾರತದಲ್ಲಿಯೇ ತಯಾರಾಗುತ್ತಿವೆ. ಎಲ್ಲಾ ಜಾಗತಿಕ ಕಂಪನಿಗಳು ಭಾರತದಲ್ಲಿ ತಮ್ಮ ತಯಾರಿಕಾ ಘಟಕ ಸ್ಥಾಪಿಸಲು ಬಯಸುತ್ತವೆ ಎಂದು ಐ.ಟಿ. ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ತಯಾರಿಕಾ ಘಟಕ ಎಲ್ಲಿರಲಿದೆ ಅಥವಾ ಎಷ್ಟು ಸ್ಮಾರ್ಟ್‌ಫೋನ್‌ಗಳನ್ನು ತಯಾರಿಸಲಾಗುವುದು ಎನ್ನುವ ಮಾಹಿತಿಯನ್ನು ಕಂಪನಿಯು ತಕ್ಷಣಕ್ಕೆ ನೀಡಿಲ್ಲ.

2024ರ ಸೆಪ್ಟೆಂಬರ್‌ವರೆಗೆ ಜಾರಿಯಲ್ಲಿ: ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ

ಲ್ಯಾಪ್‌ಟಾಪ್ ಆಮದು: ಬೇಕು ದೃಢೀಕರಣ





ನವದೆಹಲಿ (ಪಿಟಿಐ): ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳನ್ನು ಆಮದು ಮಾಡಿಕೊಳ್ಳಲು ಆನ್‌ಲೈನ್ ದೃಢೀಕರಣ ವ್ಯವಸ್ಥೆಯೊಂದನ್ನು ತಕ್ಷಣದಿಂದ ಅನ್ವಯವಾಗುವಂತೆ ಕೇಂದ್ರ ಸರ್ಕಾರ ಜಾರಿಗೊಳಿಸಿದೆ.

ಈ ವ್ಯವಸ್ಥೆಯು 2024ರ ಸೆಪ್ಟೆಂಬರ್‌ವರೆಗೆ ಜಾರಿಯಲ್ಲಿ ಇರಲಿದೆ ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶಕ (ಡಿಜಿಎಫ್‌ಟಿ) ಸಂತೋಷ್ ಕುಮಾರ್ ಸಾರಂಗಿ ತಿಳಿಸಿದ್ದಾರೆ.

ಏನೆಲ್ಲಾ ಮಾಹಿತಿ ಅಗತ್ಯ: ಆನ್‌ಲೈನ್ ದೃಢೀಕರಣ ಪಡೆದುಕೊಳ್ಳಲು ಆಮದುದಾರರು ನೋಂದಣಿ ಮಾಡಿಕೊಳ್ಳುವ ಅಗತ್ಯ ಇಲ್ಲ. ಆಮದು ಮಾಡಿಕೊಳ್ಳುವ ವಸ್ತುಗಳ ಪ್ರಮಾಣ, ಮೌಲ್ಯದ ವಿವರ ನೀಡಬೇಕು. ಈ ಹಿಂದೆ ಆಮದು, ರಫ್ತು ವಹಿವಾಟು ನಡೆಸಿರುವ ಮಾಹಿತಿ ಮತ್ತು ಒಟ್ಟು ವಹಿವಾಟಿನ ವಿವರವನ್ನು ನೀಡಬೇಕು. ಆನ್‌ಲೈನ್ ಮೂಲಕ 10 ನಿಮಿಷಗಳಲ್ಲಿ ಅರ್ಜಿ ಭರ್ತಿ ಮಾಡಬಹುದು ಎಂದು ಅವರು ಹೇಳಿದ್ದಾರೆ.

ಲ್ಯಾಪ್‌ಟಾಪ್, ಪರ್ಸನಲ್ ಕಂಪ್ಯೂಟರ್ (ಟ್ಯಾಬ್ಲೆಟ್ ಕಂಪ್ಯೂಟರ್), ಮೈಕ್ರೊ ಕಂಪ್ಯೂಟರ್ ಮತ್ತು ಕೆಲವೊಂದು ದತ್ತಾಂಶ ಸಂಸ್ಕರಣಾ ಯಂತ್ರಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಈ ದೃಢೀಕರಣ ಪಡೆದುಕೊಳ್ಳಬೇಕು.

ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರೂ ಐ.ಟಿ. ಹಾರ್ಡ್‌ವೇರ್ ಉತ್ಪನ್ನಗಳು ನಿರ್ಬಂಧಿತ ವ್ಯಾಪ್ತಿಯಲ್ಲಿಯೇ ಇರಲಿವೆ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಭಾರತವು ಮುಖ್ಯವಾಗಿ ಚೀನಾ, ಸಿಂಗಪುರ, ಹಾಂಗ್‌ಕಾಂಗ್, ಮಲೇಷ್ಯಾ, ತೈವಾನ್ ನೆದರ್ಲೆಂಡ್ಸ್ ಮತ್ತು ವಿಯೆಟ್ನಾಂನಿಂದ ಆಮದು ಮಾಡಿಕೊಳ್ಳುತ್ತಿದೆ.

ರಫ್ತಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಪಾಲಿಸದೇ ಇರುವ ಹಾಗೂ ರೆವಿನ್ಯು ಗುಪ್ತದಳ ನಿರ್ದೇಶನಾಲಯದಿಂದ (ಡಿಆರ್‌ಐ) ಪ್ರಕರಣ ಎದುರಿಸುತ್ತಿರುವ ಕಂಪನಿಗಳನ್ನು ತಿರಸ್ಕರಿಸಿದ ಕಂಪನಿಗಳ ಪಟ್ಟಿಗೆ ಸೇರಿಸಲಾಗುವುದು. ಇಂತಹ ಕಂಪನಿಗಳಿಗೆ ಆನ್‌ಲೈನ್ ದೃಢೀಕರಣ ಸಿಗುವುದಿಲ್ಲ. ಸೆಕೆಂಡ್ ಹ್ಯಾಂಡ್ ಅಥವಾ ನವೀಕರಿಸಿದ ಉತ್ಪನ್ನಗಳನ್ನು ಆಮದು ಮಾಡುವವರು ಸಹ ಅರ್ಜಿ ಸಲ್ಲಿಸುವಂತಿಲ್ಲ ಎಂದು ಡಿಜಿಎಫ್‌ಟಿ ತಿಳಿಸಿದೆ.

ವಿನಾಯಿತಿ: ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳಿಗೆ ಅಥವಾ ರಕ್ಷಣೆಯ ಉದ್ದೇಶಕ್ಕೆ ನೀಡಲು ಖಾಸಗಿ ಕಂಪನಿಗಳು ಆಮದು ಮಾಡಿಕೊಳ್ಳುವುದಕ್ಕೆ. ಆದರೆ, ಆಮದು ಮಾಡಿಕೊಳ್ಳುವ ಸಂದರ್ಭದಲ್ಲಿ ಸರ್ಕಾರದ ಸಂಸ್ಥೆಯು ನೀಡಿರುವ ಅಧಿಕೃತವಾದ ಪ್ರಮಾಣಪತ್ರ ನೀಡಬೇಕು. ಒಂದಕ್ಕಿಂತ ಹೆಚ್ಚಿಲ್ಲದಂತೆ ಇ-ವಾಣಿಜ್ಯ ವೇದಿಕೆಗಳಿಂದ ಅಂಚೆ ಅಥವಾ ಕೊರಿಯರ್ ಮೂಲಕ ವಿದೇಶಗಳಿಂದ ತರಿಸಿಕೊಳ್ಳುವುದಿದ್ದರೆ ಅದಕ್ಕೆ ಪರವಾನಗಿಯ ಅಗತ್ಯ ಇರುವುದಿಲ್ಲ.

14 ಸಾವಿರ ನೌಕರಿ ಕಡಿತಗೊಳಿಸಲಿರುವ ನೋಕಿಯಾ

ಸ್ಟಾಕ್‌ಹೋಮ್ (ರಾಯಿಟರ್ಸ್): ನೋಕಿಯಾ ಕಂಪನಿಯು ವೆಚ್ಚ ಕಡಿಮೆ ಮಾಡಿಕೊಳ್ಳುವ ಪ್ರಯತ್ನದ ಭಾಗವಾಗಿ 14 ಸಾವಿರ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವುದಾಗಿ ಗುರುವಾರ ಹೇಳಿದೆ.

ಮೂರನೇ ತ್ರೈಮಾಸಿಕದಲ್ಲಿ 5ಜಿ ಸಾಧನಗಳನ್ನೂ ಒಳಗೊಂಡು ಒಟ್ಟು ಮಾರಾಟದಲ್ಲಿ ಇಳಿಕೆ ಕಂಡುಬಂದಿದೆ. ಹೀಗಾಗಿ ವೆಚ್ಚ ತಗ್ಗಿಸಲು ಕಂಪನಿಯು ಈ ನಿರ್ಧಾರಕ್ಕೆ ಬಂದಿದೆ. ಕಂಪನಿಯು ತನ್ನ ಒಟ್ಟು ವೆಚ್ಚವನ್ನು 2026ರ ಒಳಗಾಗಿ ₹6,988 ಕೋಟಿಯಿಂದ ₹9,960 ಕೋಟಿಯವರೆಗೆ ತಗ್ಗಿಸುವ ಗುರಿಯನ್ನು ಇಟ್ಟುಕೊಂಡಿದೆ.

ಮೂರನೇ ತ್ರೈಮಾಸಿಕದಲ್ಲಿ ಕಂಪನಿಯ ಮಾರಾಟವು ₹54,912 ಕೋಟಿಯಿಂದ ₹43,824 ಕೋಟಿಗೆ ಇಳಿಕೆ ಕಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	46000-48500
ರಾಶಿ	45639-46069
ಹೊನ್ನಾವರ	
ಹಳೆಚಾಲಿ	37000-39000
ಹೊಸಚಾಲಿ	25000-34000
ಕಾರ್ಕಳ	
ಹಳತು	30000-48500
ಕುಮಟ	
ಚಿಪ್ಪು	26199-35219
ಕೋಕ	19099-32875
ಹಳೆಚಾಲಿ	37769-38779
ಹೊಸಚಾಲಿ	37259-40611
ಪುತ್ತೂರು	
ಕೋಕ	11000-25000
ಹೊಸತು	34000-43000
ಸಾಗರ	
ಬಿಳಿಗೋಟು	16811-34666
ಚಾಲಿ	28111-39200
ಕೋಕ	18111-35199
ಕೆಂಪುಗೋಟು	26989-35409
ರಾಶಿ	33989-48469
ಸಿಪ್ಪೆಗೋಟು	12000-21565
ಶಿವಮೊಗ್ಗ	
ಬೆಟ್ಟೆ	49710-52939
ಗೊರಬಾಲು	45569-46219
ಹೊಸತು	30599-36999
ರಾಶಿ	44899-47869
ಸಿದ್ದಾಪುರ	
ಬಿಳಿಗೋಟು	31899-34409
ಚಾಲಿ	36109-39739
ಕೋಕ	29119-32350
ಕೆಂಪುಗೋಟು	30699-30699
ರಾಶಿ	40509-45839
ತಟ್ಟಿಬೆಟ್ಟೆ	34699-38609
ಶಿರಸಿ	
ಬೆಟ್ಟೆ	37699-44009
ಬಿಳಿಗೋಟು	27109-35919
ಚಾಲಿ	37099-41508
ಕೆಂಪುಗೋಟು	28758-31699
ರಾಶಿ	45699-47509
ತುಮಕೂರು	
ರಾಶಿ	44600-46000
ಸಿದ್ದಾಪುರ	
ಬಿಳಿಗೋಟು	30113-35540
ಚಾಲಿ	37059-40888
ಕೋಕ	18099-29099
ಕೆಂಪುಗೋಟು	34733-34799
ರಾಶಿ	46299-53699
ತಟ್ಟಿಬೆಟ್ಟೆ	37899-44999

ಎಚ್‌ಯುಎಲ್ ಲಾಭ ₹2,657 ಕೋಟಿ

ನವದೆಹಲಿ (ಪಿಟಿಐ): ಹಿಂದುಸ್ತಾನ್ ಯೂನಿಲಿವರ್ ಲಿಮಿಟೆಡ್‌ನ (ಎಚ್‌ಯುಎಲ್) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಅಲ್ಪ ಇಳಿಕೆ ಕಂಡು ₹2,657 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭ ₹2,670 ಕೋಟಿಯಷ್ಟು ಇತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಒಟ್ಟು ವರಮಾನವು ₹15,253 ಕೋಟಿಯಿಂದ ₹15,806 ಕೋಟಿಗೆ ಏರಿಕೆ ಕಂಡಿದೆ. ಆದರೆ, ವೆಚ್ಚವು ₹11,965 ಕೋಟಿಯಿಂದ ₹12,211 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

19-10-2023

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	11400-11500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1610)
ಒಂದು ವಾರದ ಡೆಲಿವರಿ	1615 (1605)
ಸೋಯಾ ಕಚ್ಚಾ	870 (865)
ಪಾಮ್ ವಾರದ ಡೆಲಿವರಿ	823 (828)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

59,650 (59,650)

ಬೆಳ್ಳಿ ಕೆ.ಜಿ 71,250 (72,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಐಟಿಸಿ ಲಾಭ ಶೇ 6ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಐಟಿಸಿ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 6.11ರಷ್ಟು ಹೆಚ್ಚಾಗಿ ₹4,955 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭ ₹4,570 ಕೋಟಿ ಆಗಿತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಸರಾಸರಿ ವರಮಾನವು ₹18,430 ಕೋಟಿಯಿಂದ ₹19,137 ಕೋಟಿಗೆ ಏರಿಕೆ ಕಂಡಿದೆ. ಕಂಪನಿಯ ವೆಚ್ಚವು ಶೇ 3.54ರಷ್ಟು ಹೆಚ್ಚಾಗಿ ₹13,278 ಕೋಟಿಗೆ ಏರಿಕೆ ಕಂಡಿದೆ ಎಂದು ತಿಳಿಸಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ಇಳಿಮುಖ ವಹಿವಾಟಿನಿಂದಾಗಿ ಭಾರತದ ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ದಿನವೂ ಇಳಿಕೆ ಕಾಣುವಂತಾಯಿತು.

ಐ.ಟಿ. ಕಂಪನಿಗಳು ವರಮಾನ ಮುನ್ನೋಟ ತಗ್ಗಿಸುತ್ತಿರುವುದು ಸಹ ಷೇರುಪೇಟೆಗಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ವರ್ತಕರು ಹೇಳಿದ್ದಾರೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 246 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 46 ಅಂಶ ಇಳಿಕೆ ಕಂಡಿತು. ಬ್ರೆಂಟ್ ಕಚ್ಚಾ ತೈಲ ದರ ಗುರುವಾರ ಬ್ಯಾರಲ್‌ಗೆ ಶೇ 1.99ರಷ್ಟು ಇಳಿಕೆ ಕಂಡು 89.68 ಡಾಲರ್‌ಗೆ ತಲುಪಿತು.

ಮಧ್ಯಪ್ರಾಚ್ಯ ಬಿಕ್ಕಟ್ಟು ಹೆಚ್ಚಾಗಿದ್ದರಿಂದ ಜಾಗತಿಕ ಮಾರುಕಟ್ಟೆಗಳ ವಹಿವಾಟು ಗುರುವಾರ ಇನ್ನಷ್ಟು ಇಳಿಕೆ ಕಂಡಿತು. ಅಮೆರಿಕದ ಬಾಂಡ್ ಗಳಿಕೆಯು 16 ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದು, ಇದರಿಂದಾಗಿ ಅಮೆರಿಕದ ಫೆಡರಲ್ ರಿಸರ್ವ್ ಮೊತ್ತೊಮ್ಮೆ ಬಡ್ಡಿದರ ಹೆಚ್ಚಳ ಮಾಡುವ ಸಾಧ್ಯತೆ ದಟ್ಟವಾಗಿದೆ. ಈ ಬೆಳವಣಿಗೆಗಳು ವಹಿವಾಟಿನ ಇಳಿಕೆಗೆ ಕಾರಣವಾದವು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ದೀಪಕ್ ಜಸನಿ ತಿಳಿಸಿದ್ದಾರೆ.

‘ಆಹಾರ ವಸ್ತುಗಳ ದರದಲ್ಲಿ ಸ್ಥಿರತೆ’

ನವದೆಹಲಿ (ಪಿಟಿಐ): ಹಬ್ಬದ ಋತುವಿನಲ್ಲಿ ಸಕ್ಕರೆ, ಅಕ್ಕಿ, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ದರವು ಸ್ಥಿರವಾಗಿ ಇರಲಿದೆ ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಗುರುವಾರ ತಿಳಿಸಿದ್ದಾರೆ.

ಮುಂದಿನ ಎರಡು ತಿಂಗಳುಗಳವರೆಗೂ ಆಹಾರ ವಸ್ತುಗಳ ದರವು ಯಾವುದೇ ರೀತಿಯಲ್ಲಿಯೂ ಏರಿಕೆ ಆಗಲಾರದು ಎನ್ನುವ ನಿರೀಕ್ಷೆಯಲ್ಲಿ ಇದ್ದೇವೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಬೆಲೆ ಏರಿಕೆ ಕಾಣದಂತೆ ತಡೆಯಲು ರಫ್ತು ನಿರ್ಬಂಧ, ದಾಸ್ತಾನು ಮಿತಿ ಸೇರಿದಂತೆ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದೂ ತಿಳಿಸಿದ್ದಾರೆ.

₹100 ಕೋಟಿ ಕ್ರಿಪ್ಟೊಕರೆನ್ಸಿ ವಂಚನೆ ಪ್ರಕರಣ

ದೇಶದ ವಿವಿಧೆಡೆ ಸಿಬಿಐ ಶೋಧ



ನವದೆಹಲಿ (ಪಿಟಿಐ): ಸೈಬರ್ ವಂಚನೆ ಪ್ರಕರಣ ಸಂಬಂಧ ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳ 76 ಸ್ಥಳಗಳಲ್ಲಿ ಗುರುವಾರ ಸಿಬಿಐ ಅಧಿಕಾರಿಗಳು ಶೋಧ ನಡೆಸಿದ್ದಾರೆ.

‘ಆಪರೇಷನ್ ಚಕ್ರ-2’ ಅಡಿ ಉತ್ತರಪ್ರದೇಶ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಹರಿಯಾಣ, ಕೇರಳ, ತಮಿಳುನಾಡು, ಪಂಜಾಬ್, ನವದೆಹಲಿ ಮತ್ತು ಪಶ್ಚಿಮ ಬಂಗಾಳದಲ್ಲಿ ಏಕಕಾಲಕ್ಕೆ ಈ ಕಾರ್ಯಾಚರಣೆ ನಡೆದಿದೆ.

ಸೈಬರ್ ವಂಚನೆಗೆ ಸಂಬಂಧಿಸಿ ಸಿಬಿಐ ಪ್ರತ್ಯೇಕವಾಗಿ ಐದು ಪ್ರಕರಣಗಳನ್ನು ದಾಖಲಿಸಿತ್ತು. ಈ ಪೈಕಿ ಕ್ರಿಪ್ಟೊಕರೆನ್ಸಿ ಹೆಸರಿನಡಿ ಭಾರತೀಯ ಪ್ರಜೆಗಳಿಗೆ ₹100 ಕೋಟಿ ವಂಚಿಸಿರುವ ಪ್ರಕರಣವೂ ಸೇರಿದೆ. ಹಣಕಾಸು ಗುಪ್ತಚರ ಘಟಕ ನೀಡಿದ ಮಾಹಿತಿ ಆಧರಿಸಿ ಈ ಪ್ರಕರಣ ದಾಖಲಿಸಲಾಗಿದೆ ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

‘ಯಾರಿಗೂ ಅನುಮಾನ ಬಾರದಂತಹ ವ್ಯಕ್ತಿಗಳನ್ನೇ ಗುರಿಯಾಗಿಟ್ಟುಕೊಂಡು ನಕಲಿ ಕ್ರಿಪ್ಟೊಕರೆನ್ಸಿ ಮೂಲಕ ವಂಚಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ 32 ಮೊಬೈಲ್, 48 ಲ್ಯಾಪ್‌ಟಾಪ್, ಎರಡು ಸರ್ವರ್‌ಗಳಲ್ಲಿನ ಫೋಟೊ, 33 ಸಿಮ್ ಕಾರ್ಡ್ ಹಾಗೂ ಪೆನ್‌ಡ್ರೈವ್‌ಗಳನ್ನು ಜಪ್ತಿ ಮಾಡಲಾಗಿದೆ. ನೂರಾರು ಬ್ಯಾಂಕ್ ಖಾತೆಗಳ ವಹಿವಾಟುಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ವಿವರಿಸಿದ್ದಾರೆ.

ಅಮೆಜಾನ್, ಮೈಕ್ರೋಸಾಫ್ಟ್‌ಗೂ ವಂಚನೆ:

ಕಾಲ್‌ಸೆಂಟರ್‌ಗಳ ಮೂಲಕ ತಂತ್ರಜ್ಞಾನದ ನೆರವು ನೀಡುವುದಾಗಿ ಅಮೆಜಾನ್ ಹಾಗೂ ಮೈಕ್ರೋಸಾಫ್ಟ್ ಕಂಪನಿಗಳಿಗೆ ವಂಚಿಸಿದ ಎರಡು ಪ್ರಕರಣಗಳು ದಾಖಲಾಗಿವೆ. ಈ ಸಂಬಂಧ ಒಂಬತ್ತು ಕಾಲ್‌ಸೆಂಟರ್‌ಗಳ ಮೇಲೆ ದಾಳಿ ನಡೆದಿದೆ.

‘ಆರೋಪಿಯು ತಂತ್ರಜ್ಞಾನದ ನೆರವು ನೀಡುವ ಸೋಗಿನಲ್ಲಿ ತನ್ನ ಕಾಲ್‌ಸೆಂಟರ್‌ಗಳು ಆನ್‌ಲೈನ್ ತಂತ್ರಜ್ಞಾನದ ವ್ಯಾಪಾರ ವೇದಿಕೆಯ ತಾಣಗಳೆಂದು ನಂಬಿಸಿದ್ದಾನೆ. ಐದು ರಾಜ್ಯಗಳು ಸೇರಿದಂತೆ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೆಂಟರ್‌ಗಳನ್ನು ತೆರೆದು ಈ ಕಾರ್ಪೊರೇಟ್ ಕಂಪನಿಗಳಿಗೆ ವಂಚಿಸಿದ್ದಾನೆ’ ಎಂದು ವಕ್ತಾರ ಮಾಹಿತಿ ನೀಡಿದ್ದಾರೆ.

ಕಾರ್ಯಾಚರಣೆಯನ್ನು ಮುಂದುವರಿಸಿರುವುದರಿಂದ ಉಳಿದ ಎರಡು ಪ್ರಕರಣಗಳ ಬಗ್ಗೆ ಮಾಹಿತಿ ನೀಡಲಾಗುವುದಿಲ್ಲ. ಎಫ್‌ಬಿಐ, ಇಂಟರ್‌ಪೋಲ್ ಸೇರಿದಂತೆ ಅಂತರರಾಷ್ಟ್ರೀಯ ಗುಪ್ತಚರ ಏಜೆನ್ಸಿಗಳು ನೀಡಿದ ಮಾಹಿತಿ ಆಧರಿಸಿ ಈ ಕಾರ್ಯಾಚರಣೆ ನಡೆದಿದೆ ಎಂದು ವಿವರಿಸಿದ್ದಾರ.

ಇಂಟರ್‌ಪೋಲ್ ನೆರವಿನಲ್ಲಿ ಕಳೆದ ವರ್ಷ ಸಿಬಿಐ ‘ಚಕ್ರ-1’ ಕಾರ್ಯಾಚರಣೆ ಅಡಿ ವಿವಿಧ ರಾಜ್ಯಗಳ 115 ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿತ್ತು.

ಸಂಕ್ಷಿಪ್ತ ಸುದ್ದಿ

ನ್ಯೂಸ್‌ಕ್ಲಿಕ್ ಪ್ರಕರಣ: ದೆಹಲಿ ಪೊಲೀಸರಿಗೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಯುಎಪಿಎ ಕಾಯ್ದೆಯಡಿ ಬಂಧಿಸಿರುವುದನ್ನು ಪ್ರಶ್ನಿಸಿ ನ್ಯೂಸ್‌ಕ್ಲಿಕ್ ಸುದ್ದಿಸಂಸ್ಥೆಯ ಸ್ಥಾಪಕ ಪ್ರಬೀರ್ ಪುರಕಾಯಸ್ಥ, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆಯನ್ನು ದಾಖಲಿಸುವಂತೆ ದೆಹಲಿ ಪೊಲೀಸರಿಗೆ ಸೂಚಿಸಿ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಅಕ್ಟೋಬರ್ 30ರ ಒಳಗೆ ಪ್ರತಿಕ್ರಿಯಿಸುವಂತೆ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ನ್ಯಾಯಪೀಠವು ಸೂಚಿಸಿತು.

ಪುರಕಾಯಸ್ಥ ಮತ್ತು ಚಕ್ರವರ್ತಿ ಸದ್ಯ ಜೈಲಿನಲ್ಲಿದ್ದು, ಅರ್ಜಿಯ ತುರ್ತು ವಿಚಾರಣೆ ನಡೆಸಬೇಕು ಎಂದು ಕ್ರಮವಾಗಿ ಈ ಇಬ್ಬರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ದೇವದತ್ತ ಕಾಮತ್ ಅವರು ಪೀಠಕ್ಕೆ ನಿವೇದಿಸಿಕೊಂಡರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠಕ್ಕೆ ಸಿಬಲ್ ಅವರು ಅಕ್ಟೋಬರ್ 16ರಂದು ಮನವಿ ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಈ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿಸಿತ್ತು.

ನ.15ರಿಂದ ಆಂಧ್ರಪ್ರದೇಶದಲ್ಲಿ ಜಾತಿಗಣತಿ

ಹೈದರಾಬಾದ್: ವೈ.ಎಸ್.ಜಗನ್ ಮೋಹನ್ ರೆಡ್ಡಿ ನೇತೃತ್ವದ ರಾಜ್ಯ ಸರ್ಕಾರ ಆಂಧ್ರಪ್ರದೇಶದಲ್ಲಿ ನ.15ರಿಂದ ಜಾತಿಗಣತಿ ನಡೆಸಲಿದೆ. ಟಿಡಿಪಿ ಮತ್ತು ಜನಸೇನಾ ಪಕ್ಷಗಳು ಮೈತ್ರಿ ಮಾಡಿಕೊಂಡ ಬಳಿಕ ರಾಜ್ಯದಲ್ಲಿ ಜಾತಿ ಲೆಕ್ಕಾಚಾರ ಬದಲಾಗುವುದರಿಂದ, ಚುನಾವಣೆಗೆ ಕೆಲವು ತಿಂಗಳು ಬಾಕಿ ಇರುವಾಗ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ವೈಎಸ್‌ಆರ್‌ಸಿಪಿ ಸರ್ಕಾರವು ಈ ಹಿಂದೆಯೇ ದೇಶದಾದ್ಯಂತ ಜಾತಿ ಗಣತಿ ನಡೆಸಬೇಕು ಎಂಬ ನಿರ್ಣಯವನ್ನು ಕೇಂದ್ರಕ್ಕೆ ಕಳುಹಿಸಿತ್ತು. ರಾಜ್ಯದಲ್ಲಿ ಜಾತಿಗಣತಿಗೆ ಆ್ಯಪ್ ರೂಪಿಸಿದ್ದು, ಯಾವುದೇ ಗಡುವು ನಿಗದಿಪಡಿಸಿಲ್ಲ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಚೆಲ್ಲುಬೊಯಿನಾ ವೇಣುಗೋಪಾಲಕೃಷ್ಣ ತಿಳಿಸಿದ್ದಾರೆ.

ಉಗ್ರರಿಗೆ ಹಣಕಾಸು ನೆರವು: ಬಂಧನ

ಚಂಡೀಗಢ(ಪಿಟಿಐ): ಉಗ್ರರಿಗೆ ಹಣಕಾಸು ನೆರವು ಒದಗಿಸುತ್ತಿದ್ದ ಘಟಕವನ್ನು ಭೇದಿಸಿರುವ ಪಂಜಾಬ್ ಪೊಲೀಸರು, ಮಹಿಳೆ ಸೇರಿದಂತೆ ಐವರನ್ನು ಬಂಧಿಸಿದ್ದಾರೆ. ಅಮನ್‌ಪ್ರೀತ್ ವಾಲಿಯಾ, ರಮನ್‌ಬೀರ್ ಸಿಂಗ್, ಅರ್ಷಪ್ರೀತ್ ಸಿಂಗ್, ಹರ್ಮನ್‌ಪ್ರೀತ್ ಸಿಂಗ್ ಹಾಗೂ ಕಿರಣ್‌ದೀಪ್ ಕೌರ್ ಬಂಧಿತರು. ಎಲ್ಲರೂ ಅಮೃತಸರ ನಿವಾಸಿಗಳು ಎಂದು ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

ನಾಯ್ಡುಗೆ ಜಾಮೀನು ಇಲ್ಲ

ಅಮರಾವತಿ (ಪಿಟಿಐ): ಕೌಶಲ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರ ಪ್ರಕರಣದಲ್ಲಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರಿಗೆ ಮಧ್ಯಂತರ ಜಾಮೀನು ನೀಡಲು ಆಂಧ್ರಪ್ರದೇಶ ಹೈಕೋರ್ಟ್ ಗುರುವಾರ ನಿರಾಕರಿಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದ ನಾಯ್ಡು ಅವರ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಇರುವ ಕಾರಣ ಹೈಕೋರ್ಟ್ ಈ ನಿರ್ಧಾರ ಕೈಗೊಂಡಿದೆ.

ಆರ್‌ಆರ್‌ಟಿಎಸ್ ಈಗ ‘ನಮೋ ಭಾರತ್’



‘ನಮೋ ಭಾರತ್’ ರೈಲುಗಳು –ಪಿಟಿಐ ಚಿತ್ರ

ನವದೆಹಲಿ(ಪಿಟಿಐ): ‘ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಮ್’ (ಆರ್‌ಆರ್‌ಟಿಎಸ್) ವ್ಯವಸ್ಥೆಯ ರೈಲುಗಳಿಗೆ ‘ನಮೋ ಭಾರತ್’ ರೈಲು ಎಂದು ಹೆಸರಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಈ ರೈಲುಗಳ ಸಂಚಾರಕ್ಕೆ ಶುಕ್ರವಾರ ಹಸಿರು ನಿಶಾನೆ ತೋರಲಿದ್ದಾರೆ.

ಆರ್‌ಆರ್‌ಟಿಎಸ್ ಭಾಗವಾದ ದೆಹಲಿ–ಗಾಜಿಯಾಬಾದ್–ಮೀರತ್ ನಡುವಿನ 17 ಕಿ.ಮೀ. ಉದ್ದದ ಮಾರ್ಗದಲ್ಲಿ ಈ ರೈಲುಗಳು ಅ. 21ರಿಂದ ಸಾರ್ವಜನಿಕರ ಸಂಚಾರಕ್ಕೆ ಮುಕ್ತವಾಗಲಿವೆ.

ಕಾಂಗ್ರೆಸ್ ಟೀಕೆ: ಆರ್‌ಆರ್‌ಟಿಎಸ್ ರೈಲುಗಳಿಗೆ ‘ನಮೋ ಭಾರತ್’ ಎಂದು ಹೆಸರಿಸಿರುವುದನ್ನು ಮುಂದಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಗುರುವಾರ ಟೀಕಾಪ್ರಹಾರ ನಡೆಸಿದೆ.

‘ನಮೋ ಸ್ಟೇಡಿಯಂ ನಂತರ ಈಗ ನಮೋ ರೈಲುಗಳು. ಅವರ ಸ್ವಯಂ ಗೀಳಿಗೆ ಮಿತಿ ಎಂಬುದೇ ಇಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

‘ಭಾರತ ಅಂತಾದರೂ ಯಾಕೆ ಕರೆಯಬೇಕು? ದೇಶದ ಹೆಸರನ್ನು ನಮೋ ಎಂದು ಬದಲಾಯಿಸಿ ಅಷ್ಟೆ’ ಎಂದು ಮತ್ತೊಬ್ಬ ಮುಖಂಡ ಪವನ್ ಖೇರಾ ಟೀಕಿಸಿದ್ದಾರೆ.

ಮುಸ್ಲಿಮರಿಗೆ ಥಳಿತ: ನಾಲ್ವರು ಪೊಲೀಸರಿಗೆ 14 ದಿನ ಜೈಲು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಖೇಡಾ ಜಿಲ್ಲೆಯ ಉಂಡೇಲಾ ಗ್ರಾಮದಲ್ಲಿ ಮೂವರು ಮುಸ್ಲಿಂ ವ್ಯಕ್ತಿಗಳನ್ನು ಕಂಬಕ್ಕೆ ಕಟ್ಟಿ ಥಳಿಸಿದ್ದಕ್ಕೆ ಸಂಬಂಧಿಸಿದ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ನಾಲ್ವರು ಪೊಲೀಸರು ತಪ್ಪಿತಸ್ಥರು ಎಂದು ಘೋಷಿಸಿರುವ ಗುಜರಾತ್ ಹೈಕೋರ್ಟ್, ಅವರಿಗೆ 14 ದಿನಗಳ ಜೈಲು ಶಿಕ್ಷೆ ವಿಧಿಸಿ ಗುರುವಾರ ತೀರ್ಪು ನೀಡಿದೆ.

ಈ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಈ ನಾಲ್ವರು ಪೊಲೀಸರಿಗೆ 90 ದಿನಗಳ ಕಾಲಾವಕಾಶವನ್ನೂ ನೀಡಿದೆ.

ನ್ಯಾಯಮೂರ್ತಿ ಎ.ಎಸ್. ಸುಪೇಹಿಯಾ ನೇತೃತ್ವದ ವಿಭಾಗೀಯ ಪೀಠ ಅರ್ಜಿ ವಿಚಾರಣೆ ನಡೆಸಿತು.

‘ದೂರುದಾರರ ಮೇಲೆ ಪ್ರತಿವಾದಿಗಳು (ಪೊಲೀಸರು) ನಡೆಸಿದ ಹಲ್ಲೆ ಮಾನವೀಯತೆಗೆ ವಿರುದ್ಧವಾದುದು. ನಾಲ್ವರು ದೂರುದಾರರನ್ನು ಕಂಬಕ್ಕೆ ಕಟ್ಟಿ, ಸಾರ್ವಜನಿಕವಾಗಿ ಥಳಿಸಲಾಗಿತ್ತು. ಈ ಘಟನೆ ಉಂಡೇಲಾ ಗ್ರಾಮದಲ್ಲಿ ನಡೆದಿದ್ದರೂ, ದೇಶದಾದ್ಯಂತ ಸದ್ದು ಮಾಡಿತ್ತು’ ಎಂದು ಹೇಳಿದ ನ್ಯಾಯಪೀಠ, ಪೊಲೀಸರ ಬೇಷರತ್ ಕ್ಷಮೆಯನ್ನು ತಿರಸ್ಕರಿಸಿತು.

ಖಾತೆಗೆ ₹ 221 ಕೋಟಿ ಜಮೆ: ದಿನಗೂಲಿಗೆ ಐ.ಟಿ ನೋಟಿಸ್

ಬಸ್ತಿ(ಉತ್ತರ ಪ್ರದೇಶ)(ಪಿಟಿಐ): ಜಿಲ್ಲೆಯ ಬರ್ತಾನಿಯಾ ಗ್ರಾಮದ ದಿನಗೂಲಿ ಶಿವಪ್ರಸಾದ್ ನಿಶಾದ್ ಅವರ ಖಾತೆಗೆ ಅಪರಿಚಿತರೊಬ್ಬರು ₹ 221 ಕೋಟಿ ಜಮೆ ಮಾಡಿದ್ದಾರೆ. ಈ ಕುರಿತು ವಿವರಣೆ ನೀಡುವಂತೆ ಸೂಚಿಸಿ, ನಿಶಾದ್ ಅವರಿಗೆ ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡಿದೆ.

ಶಿವಪ್ರಸಾದ್ ಅವರ ಖಾತೆಗೆ ₹ 2,21,30,00,007 ಜಮೆ ಮಾಡಲಾಗಿದೆ. ಖಾತೆ ಹಾಗೂ ಹಣದ ವ್ಯವಹಾರ ಕುರಿತ ದಾಖಲೆಗಳೊಂದಿಗೆ ಇಲಾಖೆಯ ಸ್ಥಳೀಯ ಕಚೇರಿಗೆ ಅ.20ರಂದು ಹಾಜರಾಗುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ.

‘ಇಷ್ಟೊಂದು ದೊಡ್ಡ ಮೊತ್ತ ನನ್ನ ಖಾತೆಗೆ ಜಮೆ ಆಗಿರುವ ಕುರಿತು ನನಗೆ ಗೊತ್ತೇ ಇಲ್ಲ. ಈ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ಬುಧವಾರ ದೂರು ಸಲ್ಲಿಸಿದ್ದೇನೆ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

‘ಕೆಲ ವರ್ಷಗಳ ಹಿಂದೆ ನನ್ನ ಪಾನ್ ಕಾರ್ಡ್ ಕಳೆದುಕೊಂಡಿದ್ದೇನೆ. ಇದನ್ನು ಯಾರೋ ದುರುಪಯೋಗಪಡಿಸಿಕೊಂಡು ಈ ಹಣವನ್ನು ನನ್ನ ಖಾತೆಗೆ ಜಮೆ ಮಾಡಿರಬಹುದು’ ಎಂದೂ ಹೇಳಿದ್ದಾರೆ.

ಜೆಡಿಎಸ್ ರಾಜ್ಯ ಸಮಿತಿ ವಿಸರ್ಜನೆ ಕುಮಾರಸ್ವಾಮಿ ಹಂಗಾಮಿ ಅಧ್ಯಕ್ಷ

ಒಂದನೇ ಪುಟದಿಂದ

‘ಜೆಡಿಎಸ್ ಪಕ್ಷದ ಸಂವಿಧಾನ ಮತ್ತು ನಿಯಮಗಳ ಅನ್ವಯ ಸಮಿತಿಯನ್ನು ವಿಸರ್ಜಿಸಲಾಗಿದೆ’ ಎಂದು ಹೇಳಿದರು.

‘ಕುಮಾರಸ್ವಾಮಿ ಅವರ ರಾಜಕೀಯ ನಡೆಯನ್ನು ಎಲ್ಲ ನಾಯಕರು ಗಮನಿಸಿದ್ದಾರೆ. ಪಕ್ಷದ ಜವಾಬ್ದಾರಿ ಅವರಿಗೆ ನೀಡಿದರೆ ಅನುಕೂಲವಾಗುತ್ತದೆ ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಅವರ ನಾಯಕತ್ವಕ್ಕೆ ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಸಿಕ್ಕಿದೆ. ವಿಧಾನಸಭೆ ಚುನಾವಣೆ ಮುಗಿದ ಮೇಲೆ ಸ್ಥಗಿತಗೊಂಡಿದ್ದ ಪಕ್ಷದ ಚಟುವಟಿಕೆಗೆ ಮತ್ತೆ ವೇಗ ದೊರೆಯಲಿದೆ’ ಎಂದು ಹೇಳಿದರು.

‘ಬಿಜೆಪಿ ಜತೆಗಿನ ಮೈತ್ರಿಗೆ ಕೇರಳದ ಘಟಕ ಸಹ ಒಪ್ಪಿಗೆ ನೀಡಿದೆ. ವಿವಿಧ ರಾಜ್ಯಗಳ ಘಟಕಗಳಿಗೂ ಮಾಹಿತಿ ನೀಡಲಾಗಿದೆ. ಇಬ್ರಾಹಿಂ ಸೇರಿದಂತೆ ಪಕ್ಷದ ನಾಯಕರು, ಶಾಸಕರಿಗೆ ಮನವರಿಕೆ ಮಾಡಿಕೊಡಲಾಗಿತ್ತು. ಅಸಮಾಧಾನವನ್ನು ಪಕ್ಷದ ವೇದಿಕೆಯಲ್ಲಿ ಚರ್ಚಿಸಲು ಅವಕಾಶವಿತ್ತು. ಆದರೆ, ಕೆಲವರು ಪಕ್ಷಕ್ಕೆ ಮುಜುಗರವಾಗುವ ನಡೆ ಅನುಸರಿಸಿದರು. ಪಕ್ಷದ ಹಲವು ಮುಸ್ಲಿಂ ನಾಯಕರು ಜತೆಗೆ ಇದ್ದಾರೆ. ಯಾರೂ ಧೃತಿಗೆಡಬೇಕಾಗಿಲ್ಲ’ ಎಂದರು.

ಜೆಡಿಎಸ್ ಉನ್ನತ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ, ಮುಖಂಡರಾದ ಎಚ್.ಕೆ. ಕುಮಾರಸ್ವಾಮಿ, ಬಂಡೆಪ್ಪ ಕಾಶೆಂಪೂರ, ಅಲ್ಕೋಡ್ ಹನುಮಂತಪ್ಪ, ವೆಂಕಟರಾವ್ ನಾಡಗೌಡ, ವೈ.ಎಸ್.ವಿ.ದತ್ತ, ಟಿ.ಎ. ಶರವಣ, ರಮೇಶ್ ಗೌಡ ಉಪಸ್ಥಿತರಿದ್ದರು.

ರಾಜ್ಯ ಘಟಕಕ್ಕೆ ನಾನೇ ಅಧ್ಯಕ್ಷ: ಇಬ್ರಾಹಿಂ

ಒಂದನೇ ಪುಟದಿಂದ



‘ನನ್ನ ಪುತ್ರನನ್ನು ಕಳೆದುಕೊಂಡು ಹುಬ್ಬಳ್ಳಿ ಈದ್ಗಾ ಸಮಸ್ಯೆ ಬಗೆಹರಿಸಿದ್ದೆ. ಜೆಡಿಎಸ್ ಸರ್ಕಾರ ಗಟ್ಟಿ ಮಾಡಿದ್ದೆ. ಈಗ ತಮ್ಮ ಪುತ್ರನ ಸಲುವಾಗಿ ಅನ್ಯರ ಮಕ್ಕಳನ್ನು ದೇವೇಗೌಡರು ಬಲಿ ಕೊಡುತ್ತಿದ್ದಾರೆ. ಮಹಾಭಾರತದಲ್ಲಿ ಧೃತರಾಷ್ಟ್ರನಿಗಾದ ಸ್ಥಿತಿಯೇ ದೇವೇಗೌಡರಿಗೂ ಬರಲಿದೆ’ ಎಂದರು.

‘ಪಕ್ಷದ ಕಾರ್ಯಕಾರಿ ಸಮಿತಿ ವಿಸರ್ಜಿಸಿದ ನಂತರ ಕುಮಾರಸ್ವಾಮಿಗೇ ಏಕೆ ಪಟ್ಟ ನೀಡಿದರು? ಜಿ.ಟಿ. ದೇವೇಗೌಡಗೆ ನೀಡಬಹುದಿತ್ತಲ್ಲ? ನಾಲ್ಕು ವರ್ಷಗಳ ಅವಧಿ ಬಾಕಿ ಇದ್ದಾಗಲೇ ವಿಧಾನ ಪರಿಷತ್ ಸ್ಥಾನ ತೊರೆದು ಪಕ್ಷಕ್ಕೆ ಬಂದೆ. ಇನ್ನೂ ಎಷ್ಟು ಮನೆ ಹಾಳು ಮಾಡುತ್ತೀರಿ? 90 ವರ್ಷವಾಗಿದೆ. ಇನ್ನಾದರೂ ನಿಲ್ಲಿಸಿ. ನನ್ನನ್ನು ಕೆಣಕಿದರೆ ನೆಟ್ಟಗಿರುವುದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ವಿಧಾನಸಭೆ ಚುನಾವಣೆಯ ಬಳಿಕ ನಡೆದ ರಾಜಕೀಯ ಕಾರಣಗಳಿಂದ ರಾಜ್ಯ ಸಮಿತಿ ವಿಸರ್ಜಿಸಲಾಗಿದೆ. ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಲಾಗುವುದು**
>
> **ಎಚ್.ಡಿ.ಕುಮಾರಸ್ವಾಮಿ,** ಜೆಡಿಎಸ್ ರಾಜ್ಯ ಘಟಕದ ಹಂಗಾಮಿ ಅಧ್ಯಕ್ಷ

‘ಪಿಒಎಸ್‌ಎಚ್ ಕಾಯ್ದೆ: ಅಧಿಕಾರಿ ನೇಮಿಸಿ’

ನವದೆಹಲಿ(ಪಿಟಿಐ): ಉದ್ಯೋಗ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆ, ನಿರ್ಬಂಧ ಮತ್ತು ಪರಿಹಾರ) ಕಾಯ್ದೆಯ (ಪಿಒಎಸ್‌ಎಚ್ ಕಾಯ್ದೆ) ಪರಿಣಾಮಕಾರಿ ಅನುಷ್ಠಾನ ಖಾತ್ರಿಪಡಿಸುವುದಕ್ಕಾಗಿ ನಾಲ್ಕು ವಾರಗಳೊಳಗೆ ಪ್ರತಿ ಜಿಲ್ಲೆಯಲ್ಲಿ ಅಧಿಕಾರಿಯನ್ನು ನೇಮಕ ಮಾಡಬೇಕು ಎಂದು ಎಲ್ಲ ರಾಜ್ಯಗಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಕಾಯ್ದೆಯ ಅನುಷ್ಠಾನದ ಮೇಲ್ವಿಚಾರಣೆ ಹಾಗೂ ನೆರವು ನೀಡುವುದಕ್ಕಾಗಿ ಇಲಾಖೆಯ ಅಧಿಕಾರಿಯೊಬ್ಬರನ್ನು ನೋಡಲ್ ವ್ಯಕ್ತಿಯನ್ನಾಗಿ ನೇಮಕ ಮಾಡಬೇಕು ಎಂದು ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಹಾಗೂ ದೀಪಂಕರ್ ದತ್ತಾ ಅವರಿದ್ದ ನ್ಯಾಯಪೀಠ ನಿರ್ದೇಶಿಸಿದೆ.

ಇಶಾನ್ ಹ್ಯಾಟ್ರಿಕ್: ಸೌತ್ ತಂಡಕ್ಕೆ ಜಯ

ಬೆಂಗಳೂರು: ಇಶಾನ್ ಸಾಹಿ ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 5–0 ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಇಶಾನ್ (10, 19, 29ನೇ ನಿ) ಮೂರು ಗೋಲು ಗಳಿಸಿದರೆ, ನಿಖಿಲ್ ಮಾಲಿ (30ನೇ), ಎಡ್ವಿನ್ ರೊಜಾರಿಯೊ (39ನೇ) ತಲಾ ಒಂದು ಗೋಲು ತಂದಿತ್ತರು.

ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 2–0 ಯಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು. ಚಿಕ್ಕಮಗಳೂರು ತಂಡದ ಇಶಾನ್ ರಘುನಂದ (15ನೇ), ಆರೀಫ್ ಶೇಖ್ (64ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡವು 2–0 ಯಿಂದ ರೂಟ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಬಿಎಫ್‌ಸಿ ತಂಡದ ತಾಕ್‌ಚೊಮ್ ಮಲೆಂಗಾಂಬ (3ನೇ), ಅಮಯ್ ಮೊರಾಜಕರ್ (28ನೇ) ತಲಾ ಒಂದು ಗೋಲು ಗಳಿಸಿದರು.

ಧಾರವಾಡ: ಐಟಿಎಫ್ ಟೂರ್ನಿಯಲ್ಲಿ ಅಪರೂಪದ ಪ್ರಸಂಗ

ಎಂಟೂ ಶ್ರೇಯಾಂಕಿತರು ಕ್ವಾರ್ಟರ್‌ಗೆ

• ಬಿ.ಜೆ.ಧನ್ಯಪ್ರಸಾದ್

ಧಾರವಾಡ: ವಿರಳ ಎಂಬಂತೆ ಎಲ್ಲಾ ಎಂಟೂ ಮಂದಿ ಶ್ರೇಯಾಂಕ ಆಟಗಾರರು, ಜಿಲ್ಲಾ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಯಲ್ಲಿ (ಐಟಿಎಫ್) ಉತ್ತಮ ಪ್ರದರ್ಶನ ನೀಡಿ, ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾರತದ ಆಟಗಾರರಾದ ಮೂರನೇ ಶ್ರೇಯಾಂಕದ ದಿಗ್ವಿಜಯ್ ಪ್ರತಾಪ್ ಸಿಂಗ್, ನಾಲ್ಕನೇ ಶ್ರೇಯಾಂಕದ ರಾಮಕುಮಾರ್ ರಾಮನಾಥನ್, ಏಳನೇ ಶ್ರೇಯಾಂಕದ ಸಿದ್ಧಾರ್ಥ ರಾವತ್, ಎಂಟನೇ ಶ್ರೇಯಾಂಕದ ಎಸ್.ಡಿ.ಪ್ರಜ್ವಲ್ ದೇವ್ ಇವರಲ್ಲಿ ಒಳಗೊಂಡಿದ್ದಾರೆ.

ಅಗ್ರ ಶ್ರೇಯಾಂಕದ ನಿಕ್ ಚಾಪೆಲ್ (ಅಮೆರಿಕ) 6–4, 6–4 ರಲ್ಲಿ ನೇರ ಸೆಟ್‌ಗಳಿಂದ ಕರಣ್ ಸಿಂಗ್ ಅವರನ್ನು ಸೋಲಿಸಿದರೂ ಪೈಪೋಟಿ ಎದುರಿಸಿದರು. ಒಂದು ಹಂತದಲ್ಲಿ ಮೊದಲ ಸೆಟ್ ಸ್ಕೋರ್ 4–4ರಲ್ಲಿ ಸಮನಾಗಿತ್ತು. ಆದರೆ 9ನೇ ಗೇಮ್‌ಅನ್ನು ಸ್ವಯಂಕೃತ ತಪ್ಪುಗಳಿಂದ ಕಳೆದುಕೊಂಡ ಪರಿಣಾಮ, ಚಾಪೆಲ್ ಹಿಡಿತ ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಒಮ್ಮೆ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ್ದ ಕರಣ್ 3–0 ಮುನ್ನಡೆದಿದ್ದರು. ಆದರೆ ಅದೇ ಲಯವನ್ನು ಮುಂದುವರಿಸಲಿಲ್ಲ. ಇನ್ನೊಂದೆಡೆ ಚಾಪೆಲ್ ಸ್ಕೋರ್ ಸಮಮಾಡಿ, ಪಂದ್ಯವನ್ನು ನಿಯಂತ್ರಣಕ್ಕೆ ಪಡೆದರು.

ದಶಕದ ಹಿಂದೆ ಇದೇ ಅಂಗಣದಲ್ಲಿ ಐಟಿಎಫ್ ಫ್ಯೂಚರ್ಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದ ರಾಮಕುಮಾರ ರಾಮನಾಥನ್ 88 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ 7-6 (8–6), 6-3 ರಿಂದ ಇಷಾಕ್ ಇಕ್ಬಾಲ್ ಅವರನ್ನು ಸೋಲಿಸಿದರು.



ಭಾರತದ ಆಟಗಾರ ರಾಮಕುಮಾರ್ ರಾಮನಾಥನ್ ಅವರು ಚೆಂಡು ಹೊಡೆದ ಪರಿ – ಪ್ರಜಾವಾಣಿ ಚಿತ್ರ/ ಬಿ.ಎಂ.ಕೇದಾರನಾಥ

ಎರಡನೇ ಶ್ರೇಯಾಂಕದ ಬೋಗ್ದಾನ್ ಬೊಬ್ರೊವ್ 6–3, 6–3 ರಿಂದ ರಣಜಿತ್ ವಿರಾಲಿ ಮುರುಗೇಶನ್ ಅವರನ್ನು ಸೋಲಿಸಿದರು.

ಇತರ ಫಲಿತಾಂಶಗಳು: ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್ಸ್: ದಿಗ್ವಿಜಯ ಪ್ರತಾಪ್ ಸಿಂಗ್ 6-4, 6-2 ರಿಂದ ರಿಷಬ್ ಅಗರವಾರ್ ಅವರನ್ನು, ಏಳನೇ ಶ್ರೇಯಾಂಕದ ಸಿದ್ಧಾರ್ಥ ರಾವತ್ 6-3, 7-5ರಿಂದ ನಿತಿನ್‌ಕುಮಾರ್ ಸಿನ್ಹಾ ಅವರನ್ನು; ಐದನೇ ಶ್ರೇಯಾಂಕದ ಖಜೂಕಿ ನಿಶಿವಾಕಿ (ಜಪಾನ್) 6-4 6-4ರಿಂದ ಕ್ವಾಲಿಫೈಯರ್ ಮಾಧ್ವಿನ್ ಕಾಮತ್ ಅವರನ್ನು; ಮೈಸೂರಿನ ಪ್ರಜ್ವಲ್ ದೇವ್ ಅವರು 6-3, 6-1ರಿಂದ ಸೂರಜ್ ಆರ್ ಪ್ರಬೋಧ್ ಅವರನ್ನು ಸೋಲಿಸಿದರು.

ಆರನೇ ಶ್ರೇಯಾಂಕದ ಫ್ಲೊರೆಂಟ್ ಬಾಕ್ಸ್ (ಫ್ರಾನ್ಸ್) 6-4, 6-0 ಯಿಂದ ಎನ್ರಿಕೊ ಗಿಯಾಕೊಮಿನಿ (ಇಟಲಿ) ಮೇಲೆ ಜಯ ಪಡೆದರು.

ಡಬಲ್ಸ್ (ಕ್ವಾರ್ಟರ್ ಫೈನಲ್ಸ್): ಸಿದ್ಧಾಂತ ಬಂಥಿಯಾ-ವಿಷ್ಣುವರ್ಧನ ಜೋಡಿಗೆ 6-3, 7-6 ರಿಂದ ಮನಿಷ್ ಗಣೇಶ್- ಸೂರಜ್ ಆರ್.ಪ್ರಬೋಧ್ ಜೋಡಿ ವಿರುದ್ಧ ಜಯ; ಸಾಯಿ ಕಾರ್ತಿಕ್ ರೆಡ್ಡಿ- ಮನಿಶ್ ಸುರೇಶಕುಮಾರ್ ಜೋಡಿಗೆ 6-3, 7-6 ರಲ್ಲಿ ರಿಷಭ್ ಅಗರವಾಲ್- ಫ್ಲೋರೆಂಟ್ ಜೋಡಿ ವಿರುದ್ಧ ಜಯ.

ಎಸ್.ಡಿ. ಪ್ರಜ್ವಲ್ ದೇವ್- ನಿತಿನ್‌ಕುಮಾರ್ ಸಿನ್ಹಾ ಜೋಡಿಗೆ 6-2, 4-6, 10-5 ರಿಂದ ಇಷಾಕ್ ಇಕ್ಬಾಲ್-ಫೈಸಲ್ ಖಮರ್ ಜೋಡಿ ವಿರುದ್ಧ ಜಯ.

ಅಚ್ಚರಿಯ ಸೋಲು: ಬೆಳಿಗ್ಗೆ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ದಿಗ್ವಿಜಯ್ ಪ್ರತಾಪ್ ಸಿಂಗ್ – ಕರಣ್ ಸಿಂಗ್ ಜೋಡಿ 7–6 (3), 3–6, 10–6 ರಿಂದ ಅಗ್ರ ಶ್ರೇಯಾಂಕದ ಪುರವ್ ರಾಜಾ- ರಾಮಕುಮಾರ್ ರಾಮನಾಥನ್ ಜೋಡಿಯನ್ನು ಸೋಲಿಸಿ ಅನಿರೀಕ್ಷಿತ ಫಲಿತಾಂಶ ನೀಡಿತು. ಪುರವ್, ರಾಮನಾಥನ್ ಇಬ್ಬರೂ ಅಂತರರಾಷ್ಟ್ರೀಯ ಆಟಗಾರರು.

ಪ್ರಮುಖರನ್ನು ಉಳಿಸಿಕೊಂಡ ತಂಡಗಳು

ಟಿ20 ಕ್ರಿಕೆಟ್: ಡಬ್ಲ್ಯುಪಿಎಲ್ ಎರಡನೇ ಆವೃತ್ತಿಯ ಟೂರ್ನಿ

ನವದೆಹಲಿ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿಯ ಎರಡನೇ ಆವೃತ್ತಿಗೆ ಎಲ್ಲ ಐದೂ ಫ್ರಾಂಚೈಸಿಗಳು ನಿರೀಕ್ಷೆಯಂತೆಯೇ ಪ್ರಮುಖ ಆಟಗಾರ್ತಿಯರನ್ನು ತಮ್ಮಲ್ಲೇ ಉಳಿಸಿಕೊಂಡಿವೆ.

2024ರ ಟೂರ್ನಿಗೆ ಆಟಗಾರ್ತಿಯರನ್ನು ಉಳಿಸಿಕೊಳ್ಳುವ ಮತ್ತು ಬಿಟ್ಟು ಕೊಡುವ ಅವಧಿಯು ಅ.15 ರಂದು ಕೊನೆಗೊಂಡಿದೆ. ಹೊರದೇಶಗಳ 21 ಆಟಗಾರ್ತಿಯರು ಸೇರಿದಂತೆ ಒಟ್ಟು 60 ಮಂದಿಯನ್ನು ತಂಡಗಳು ತಮ್ಮಲ್ಲೇ ಉಳಿಸಿಕೊಂಡಿವೆ. 29 ಆಟಗಾರ್ತಿಯರನ್ನು ಕೈಬಿಡಲಾಗಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸ್ಮೃತಿ ಮಂದಾನ, ಹೀದರ್ ನೈಟ್, ರಿಚಾ ಘೋಷ್ ಮತ್ತು ಶ್ರೇಯಾಂಕಾ ಪಾಟೀಲ್ ಸೇರಿದಂತೆ 11 ಆಟಗಾರ್ತಿಯರನ್ನು ತನ್ನಲ್ಲೇ ಉಳಿಸಿಕೊಂಡಿದೆ. ಮೊದಲ ಋತುವಿನಲ್ಲಿ ತಂಡದಲ್ಲಿದ್ದ ಡೇನ್ ವಾನ್ ನೀಕರ್ಕ್, ಎರಿನ್ ಬರ್ನ್ಸ್, ಕೋಮಲ್ ಜಂಜದ್, ಮೇಗನ್ ಶುಟ್, ಪೂನಮ್ ಖೆಮ್ನರ್, ಪ್ರೀತಿ ಬೋಸ್ ಮತ್ತು ಸಹನಾ ಪವಾರ್ ಅವರನ್ನು ಕೈಬಿಟ್ಟಿದೆ.

ಮುಂಬೈ ಇಂಡಿಯನ್ಸ್ ತಂಡವು ನಾಯಕಿ ಹರ್ಮನ್‌ಪ್ರೀತ್ ಕೌರ್, ಹೇಯ್ಲಿ ಮ್ಯಾಥ್ಯೂಸ್ ಮತ್ತು ಯಸ್ತಿಕಾ ಭಾಟಿಯಾ ಸೇರಿದಂತೆ 13 ಮಂದಿಯನ್ನು ಉಳಿಸಿಕೊಂಡಿದೆ.



ಸ್ಮೃತಿ ಮಂದಾನ



ಹರ್ಮನ್‌ಪ್ರೀತ್ ಕೌರ್

ವಿವಿಧ ಫ್ರಾಂಚೈಸಿಗಳು ತಮ್ಮಲ್ಲೇ ಉಳಿಸಿಕೊಂಡ ಆಟಗಾರ್ತಿಯರು:

ರಾಯಲ್ ಚಾಲೆಂಜರ್ಸ್: ಸ್ಮೃತಿ ಮಂದಾನ, ಆಶಾ ಶೋಭನಾ, ಎಲ್ಲೀಸ್ ಪೆರಿ, ದಿಶಾ ಕಾಸಟ್, ಹೀದರ್ ನೈಟ್, ಇಂದ್ರಾಣಿ ರಾಯ್, ಕನಿಕಾ ಅಹುಜಾ, ರೇಣುಕಾ ಸಿಂಗ್, ರಿಚಾ ಘೋಷ್, ಶ್ರೇಯಾಂಕ ಪಾಟೀಲ್, ಸೋಫಿ ಡಿವೈನ್

ಮುಂಬೈ ಇಂಡಿಯನ್ಸ್: ಹರ್ಮನ್‌ಪ್ರೀತ್ ಕೌರ್, ಅಮನ್‌ಜೋತ್ ಕೌರ್, ಅಮೇಲಿ ಕೆರ್, ಕ್ಲೋಯಿ ಟ್ರಯಾನ್, ಹೇಯ್ಲಿ ಮ್ಯಾಥ್ಯೂಸ್, ಹುಮೇರಾ ಕಾಝಿ, ಇಸಾಬೆಲಾ ವಾಂಗ್, ಜಿಂತಿಮಣಿ ಕಲಿತಾ, ನತಾಲಿ ಸಿವೆರ್, ಪೂಜಾ ವಸ್ತ್ರಕರ್, ಪ್ರಿಯಾಂಕಾ ಬಾಲಾ, ಸೈಕಾ ಇಶಾಖ್, ಯಸ್ತಿಕಾ ಭಾಟಿಯಾ

ಡೆಲ್ಲಿ ಕ್ಯಾಪಿಟಲ್ಸ್: ಅಲೀಸ್ ಕ್ಯಾಪ್ಸಿ, ಅರುಂಧತಿ ರೆಡ್ಡಿ, ಜೆಮಿಮಾ ರಾಡ್ರಿಗಸ್, ಜೆಸ್ ಜೊನಾಸೆನ್, ಲಾರಾ ಹ್ಯಾರಿಸ್, ಮೆರಿಜಾನೆ ಕಾಪ್, ಮೆಗ್‌ಲ ಲಾನಿಂಗ್, ಮಿನ್ನು ಮಣಿ, ಪೂನಂ ಯಾದವ್, ರಾಧಾ ಯಾದವ್, ಶಫಾಲಿ ವರ್ಮಾ, ಶಿಖಾ ಪಾಂಡೆ, ಸ್ನೇಹಾ ದೀಪ್ತಿ, ತಾನಿಯಾ ಭಾಟಿಯಾ, ತಿತಾಸ್ ಸಾಧು

ಗುಜರಾತ್ ಜೈಂಟ್ಸ್: ಆ್ಯಶ್ಲೆ ಗಾರ್ಡನರ್, ಬೆತ್ ಮೂನಿ, ಡಿ.ಹೇಮಲತಾ, ಹರ್ಲೀನ್ ದೇವ್ಯೋಲ್, ಲಾರಾ ವೊಲ್‌ವಾರ್ಟ್, ಶಬ್ನಂ ಶಕೀಲ್, ಸ್ನೇಹಾ ರಾಣಾ, ತನುಜಾ ಕನ್ವರ್

ಯುಪಿ ವಾರಿಯರ್ಸ್: ಅಲಿಸಾ ಹೀಲಿ, ಅಂಜಲಿ ಸರವಾನಿ, ದೀಪ್ತಿ ಶರ್ಮಾ, ಗ್ರೇಸ್ ಹ್ಯಾರಿಸ್, ಕಿರಣ್ ನವಗಿರೆ, ಲಾರೆನ್ ಬೆಲ್, ಲಕ್ಷ್ಮಿ ಯಾದವ್, ಪಾರ್ಶ್ವಿ ಚೋಪ್ರಾ, ರಾಜೇಶ್ವರಿ ಗಾಯಕವಾಡ್, ಎಸ್.ಯಶಶ್ರೀ, ಶ್ವೇತಾ, ಸೋಫಿ ಎಕ್ಲೆಸ್ಟೋನ್, ತಹ್ಲಿಯಾ ಮೆಕ್‌ಗ್ರಾ

ಫಿಡೆ ರೇಟೆಡ್ ಚೆಸ್: ಇಂದ್ರಜೀತ್, ಅನಿಲ್ ಕುಮಾರ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಹಾರಾಷ್ಟ್ರ ಮತ್ತು ತಮಿಳುನಾಡು ಆಟಗಾರರು ಪಾರಮ್ಯ ಮೆರೆದ ಫಿಡೆ ರೇಟೆಡ್ ಅಖಿಲ ಭಾರತ ಚೆಸ್ ಟೂರ್ನಿಯ ಮೂರನೇ ದಿನ ಇಂದ್ರಜೀತ್ ಮಹೀಂದ್ರಕರ್ ಮತ್ತು ನಿಗಶ್ ಜಿ. ಸೇರಿದಂತೆ ಐವರು ಮುನ್ನಡೆ ಸಾಧಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆಯು ನಗರದ ಪುರಭವನದಲ್ಲಿ ಆಯೋಜಿಸಿರುವ ಟೂರ್ನಿಯ ಎರಡನೇ ದಿನ ಉತ್ತಮ ಸಾಮರ್ಥ್ಯ ಪ್ರದರ್ಶಿಸಿದ್ದ ಕರ್ನಾಟಕದ ಆಟಗಾರರು ಗುರುವಾರ ನಿರಾಸೆ ಅನುಭವಿಸಿದರು. ಅಗ್ರ ಶ್ರೇಯಾಂಕದ, ದಕ್ಷಿಣ ಕನ್ನಡ ಜಿಲ್ಲೆಯ ಆಟಗಾರ ಗಹನ್ ಎಂ.ಜಿ ಐದು ಸುತ್ತುಗಳ ನಂತರ 4 ಪಾಯಿಂಟ್‌ಗಳೊಂದಿಗೆ ಹಿನ್ನಡೆ ಅನುಭವಿಸಿದರು.

ಮಹಾರಾಷ್ಟ್ರದ ಇಂದ್ರಜೀತ್ ಮಹೀಂದ್ರಕರ್, ಆದಿತ್ಯ ಸಾವಳ್ಕರ್, ತಮಿಳುನಾಡಿನ ನಿಗಶ್ ಜಿ., ಕೃಪೇಶ್ ಐ. ಮತ್ತು ಕೇರಳದ ಒ.ಟಿ.ಅನಿಲ್ ಕುಮಾರ್ ಒ.ಟಿ 5 ಪಾಯಿಂಟ್‌ಗಳೊಂದಿಗೆ ಅಗ್ರ ಸ್ಥಾನದಲ್ಲಿದ್ದಾರೆ. ಕರ್ನಾಟಕದ ಆಗಸ್ಟಿನ್ ಎ ಮತ್ತು ಮೇಧಾಂಶ್ ರಾಠಿ 4.5 ಪಾಯಿಂಟ್‌ಗಳೊಂದಿಗೆ ಭರವಸೆ ಮೂಡಿಸಿದರೆ, ಅನ್ಮೂಲ್ ಪಣಿಕ್ಕರ್, ಸುಶಾಂತ್ ವಾಮನ್ ಶೆಟ್ಟಿ, ಸಿದ್ಧಾಂತ್ ಪೂಂಜಾ ಮತ್ತು ಧ್ರುವ ಚಿಪ್ಲಿ ಅವರಿಗೆ ನಾಲ್ಕು ಪಾಯಿಂಟ್ ಮಾತ್ರ ಗಳಿಸಲು ಸಾಧ್ಯವಾಯಿತು.



ಇಂದ್ರಜೀತ್ ಮಹೀಂದ್ರಕರ್

ಇಂದ್ರಜೀತ್ (ರೇಟಿಂಗ್: 1990) ಐದನೇ ಸುತ್ತಿನಲ್ಲಿ ಅಫ್ರೀದ್ ಖಾನ್ (1634) ವಿರುದ್ಧ ಜಯ ಸಾಧಿಸಿದರು. ತಮಿಳುನಾಡಿನ ನಿಗಶ್ ಜಿ. (1662) ತಮಗಿಂತ ಹೆಚ್ಚಿನ ರೇಟಿಂಗ್ ಹೊಂದಿರುವ ಕೇರಳದ ಶಾರ್ಶ ಬೇಕರ್ (1965) ವಿರುದ್ಧ ಜಯಗಳಿಸಿದರು. ಅನಿಲ್ ಕುಮಾರ್ (1875) ಎದುರು ಸುಶಾಂತ್ ವಾಮನ್ ಶೆಟ್ಟಿ ಸೋಲನುಭವಿಸಿದರು. ಕೃಪೇಶ್ ಮತ್ತು ಆದಿತ್ಯ ಸಾವಳ್ಕರ್ ಕ್ರಮವಾಗಿ ಕರ್ನಾಟಕದ ಸಿದ್ಧಾಂತ್ ಪೂಂಜಾ ವಿರುದ್ಧ ಮತ್ತು ಕೇರಳದ ರಜಿತ್ ವಿ. ಎದುರು ಜಯ ಗಳಿಸಿದರು. ಮಹಾರಾಷ್ಟ್ರದ ಆದಿತ್ಯ ಸಾವಳ್ಕರ್ ಗೆ ಕೇರಳದ ರಜಿತ್ ವಿ ವಿರುದ್ಧ, ತಮಿಳುನಾಡಿನ ರಾಮನಾಥನ್ ಬಾಲಸುಬ್ರಹ್ಮಣ್ಯಂಗೆ ಕರ್ನಾಟಕದ ಅನ್ಮೂಲ್ ಪಣಿಕ್ಕರ್ ವಿರುದ್ಧ ಜಯ; ತಮಿಳುನಾಡಿನ ರವೀಶ್‌ಗೆ ಕರ್ನಾಟಕದ ರವೀಶ್ ಕೋಟೆ ಎದುರು, ಕರ್ನಾಟಕದ ಆಗಸ್ಟಿನ್‌ಗೆ ತಮಿಳುನಾಡಿನ ಸ್ವರ್ಣಮಾಲಾ ಎದುರು ಜಯ.

ಅಥ್ಲೆಟಿಕ್ಸ್: ಪಾವನಾಗೆ ಲಾಂಗ್‌ಜಂಪ್ ಚಿನ್ನ

ದಸರಾ ಕ್ರೀಡಾಕೂಟ: ಕಬಡ್ಡಿ ಟೂರ್ನಿಯಲ್ಲಿ ದಕ್ಷಿಣ ಕನ್ನಡ ತಂಡಗಳಿಗೆ ಪ್ರಶಸ್ತಿ

• ಆರ್.ಜಿತೇಂದ್ರ

ಮೈಸೂರು: ಬೆಂಗಳೂರಿನ ಪಾವನಾ ನಾಗರಾಜು ಇಲ್ಲಿ ನಡೆಯುತ್ತಿರುವ ಸಿ.ಎಂ. ಕಪ್ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಲಾಂಗ್‌ಜಂಪ್‌ನಲ್ಲಿ ಚಿನ್ನ ಹಾಗೂ ಹೈಜಂಪ್‌ನಲ್ಲಿ ಬೆಳ್ಳಿ ಪಡೆದು ಸಂಭ್ರಮಿಸಿದರು.

ಚಾಮುಂಡಿವಿಹಾರ ಕ್ರೀಡಾಂಗಣದ ಸಿಂಥೆಟಿಕ್ ಅಂಗಳದಲ್ಲಿ ಗುರುವಾರ ನಡೆದ ಮಹಿಳೆಯರ ಹೈಜಂಪ್‌ನಲ್ಲಿ ಪಾವನಾ ಹಾಗೂ ಯಾದಗಿರಿಯ ಪಲ್ಲವಿ ಪಾಟೀಲ ನಡುವೆ ತೀವ್ರ ಸ್ಪರ್ಧೆ ಕಂಡುಬಂತು. ಇಬ್ಬರೂ 1.67 ಮೀಟರ್ ಎತ್ತರ ಜಿಗಿದು ಸಮಬಲ ಸಾಧಿಸಿದರು. ಪಲ್ಲವಿ ಅವರು ಪಾವನಾಗಿಂತ ಕಡಿಮೆ ಅವಕಾಶದಲ್ಲಿ ಈ ಸಾಧನೆ ತೋರಿದ್ದರಿಂದ ಅವರಿಗೆ ಚಿನ್ನ ಒಲಿಯಿತು. ಪಾವನಾಗೆ ಬೆಳ್ಳಿ ಲಭಿಸಿತು.

ಲಾಂಗ್‌ಜಂಪ್‌ನಲ್ಲಿಯೂ ಪ್ರತಿಭೆ ಪ್ರದರ್ಶನಕ್ಕಿಟ್ಟ ಪಾವನಾ ಕಡೆಯ ಅವಕಾಶದಲ್ಲಿ 6.10 ಮೀಟರ್ಸ್ ಜಿಗಿದು ಬಂಗಾರದ ಪದಕ ಪಡೆದು ಸಂಭ್ರಮಿಸಿದರು. ಅವರಿಗೆ ಪೈಪೋಟಿ ಒಡ್ಡಿದ ವಿ.ಎಸ್. ಶ್ರೀದೇವಿಕಾ 5.94 ಮೀ. ಸಾಧನೆಯೊಂದಿಗೆ ಬೆಳ್ಳಿ ಪಡೆದರು.

800 ಮೀಟರ್ಸ್ ಓಟದಲ್ಲಿ ಬೆಂಗಳೂರು ಕ್ರೀಡಾ ಹಾಸ್ಟೆಲ್‌ನ ಕೆ. ಸೂರ್ಯ ಹಾಗೂ ಭಾರತೀಯ ಕ್ರೀಡಾ ಪ್ರಾಧಿಕಾರದ ಜಿ.ಕೆ. ವಿಜಯಕುಮಾರಿ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಚಿನ್ನ ಗೆದ್ದರು.

ಕೊಕ್ಕೊ: ಮಹಿಳೆಯರ ವಿಭಾಗದ ಕೊಕ್ಕೊ ಫೈನಲ್‌ನಲ್ಲಿ ಯಾದಗಿರಿ ತಂಡ, ಬೆಳಗಾವಿ ತಂಡವನ್ನು 7–6 ಅಂಕಗಳಿಂದ ಮಣಿಸಿ ಪ್ರಶಸ್ತಿ ಜಯಿಸಿತು. ವಿಜೇತ ತಂಡದ ಪರ ಪೂಜಾ ಉತ್ತಮ ಪ್ರದರ್ಶನ ತೋರಿದರು. ಪುರುಷರ ವಿಭಾಗದ ಫೈನಲ್‌ನಲ್ಲಿ ಬಾಗಲಕೋಟೆ ತಂಡವು ಬೆಳಗಾವಿ ತಂಡವನ್ನು 19–15 ಅಂಕಗಳಿಂದ ಮಣಿಸಿತು.



ಮಹಿಳೆಯರ ಲಾಂಗ್ ಜಂಪ್‌ನಲ್ಲಿ ಚಿನ್ನ ಗೆದ್ದ ಬೆಂಗಳೂರಿನ ಪಾವನಾ ನಾಗರಾಜು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಕಬಡ್ಡಿ: ಕಬಡ್ಡಿಯ ಎರಡೂ ವಿಭಾಗದಲ್ಲಿಯೂ ದಕ್ಷಿಣ ಕನ್ನಡ ತಂಡಗಳು ಬಂಗಾರ ಗೆದ್ದವು. ಪುರುಷರ ವಿಭಾಗದಲ್ಲಿ ಹಾಸನ ಹಾಗೂ ಮಹಿಳೆಯರ ವಿಭಾಗದಲ್ಲಿ ರಾಮನಗರ ಬೆಳ್ಳಿ ಗೆದ್ದವು.

ಅಥ್ಲೆಟಿಕ್ಸ್ ಫಲಿತಾಂಶ: ಪುರುಷರು: 800 ಮೀಟರ್ಸ್ ಓಟ: ಕೆ. ಸೂರ್ಯ (ಡಿವೈಇಎಸ್, ಬೆಂಗಳೂರು)-1, ರಾಹುಲ್ ಚೌಧರಿ (ಮೈಸೂರು)-2, ಎಸ್. ಕಮಲನಾಥನ್ (ಬಿಯುಡಿಎಎ)-3. ಕಾಲ: 2ನಿ, 07.47 ಸೆ.

ಶಾಟ್‌ಪಟ್: ಎಸ್.ಆರ್. ರಾಹುಲ್ ಕಶ್ಯಪ್ (ಮೈಸೂರು)-1, ಪ್ರಜ್ವಲ್ ಶೆಟ್ಟಿ (ಉಡುಪಿ)-2, ಮಾನುಷ್ (ಮೈಸೂರು)-3. ದೂರ: 16.45 ಮೀ.

5000 ಮೀಟರ್ಸ್ ಓಟ: ವೈಭವಮೂರ್ತಿ ಪಾಟೀಲ್ (ಡಿವೈಇಎಸ್, ಬೆಂಗಳೂರು)-1, ಎ.ಆರ್. ರೋಹಿತ್ (ಬೆಂಗಳೂರು)-2, ಗುರುಪ್ರಸಾದ್ (ಕೆಎಸ್‌ಪಿ)-3. ಕಾಲ: 15 ನಿ, 17.24 ಸೆ.

ಮಹಿಳೆಯರ ವಿಭಾಗ: 800 ಮೀ. ಓಟ: ಜಿ.ಕೆ. ವಿಜಯಕುಮಾರಿ (ಸಾಯ್, ಬೆಂಗಳೂರು)-1, ಇ.ಬಿ. ಅರ್ಪಿತಾ (ಫ್ಯೂಷನ್ ಕ್ಲಬ್, ಬೆಂಗಳೂರು)-2, ದೀಪಶ್ರೀ (ಆಳ್ವಾಸ್, ಮೂಡಬಿದಿರೆ)-3. ಕಾಲ: 2ನಿ, 10.46ಸೆ.

5000 ಮೀ. ಓಟ: ಚೈತ್ರಾ ದೇವಾಡಿಗ (ಆಳ್ವಾಸ್)-1, ಎನ್.ಎಲ್. ತೇಜಸ್ವಿನಿ (ಕೆಎಸ್‌ಪಿ)-2, ಶಾಹಿನ್ ಶಂಶುದ್ದೀನ್ (ಧಾರವಾಡ)-3. ಕಾಲ: 18ನಿ. 24.44 ಸೆ.

ಹೈಜಂಪ್: ಪಲ್ಲವಿ ಪಾಟೀಲ (ಯಾದಗಿರಿ)-1, ಎನ್. ಪಾವನಾ (ಬೆಂಗಳೂರು)-2, ಫ್ಲವೀಶಾ ಮೊಂಟೆರೊ (ದಕ್ಷಿಣ ಕನ್ನಡ)-3. ಎತ್ತರ: 1.67 ಮೀ.

ಲಾಂಗ್ ಜಂಪ್: ಪಾವನಾ ನಾಗರಾಜು (ಬೆಂಗಳೂರು)-1, ವಿ.ಎಸ್. ಶ್ರೀದೇವಿಕಾ-2, ಅಕ್ಷತಾ-3: ದೂರ: 6.10 ಮೀ.

ಜಾವೆಲಿನ್ ಥ್ರೋ: ಕರಿಷ್ಮಾ ಸಾಹಿಲ್-1, ಶ್ರಾವ್ಯ (ಉಡುಪಿ)-2, ನಿಧಿ ಶೆಟ್ಟಿ (ಉಡುಪಿ)-3. ದೂರ: 52.06 ಮೀ.

ಸೈಕ್ಲಿಂಗ್ (ಪುರುಷರು): 50 ಕಿ.ಮೀ. ಟೀಮ್ ಟೈಮ್ ಟ್ರಯಲ್: ವಿಜಯಪುರ-1, ಬಾಗಲಕೋಟೆ-2, ಮೈಸೂರು-3.

ಮಹಿಳೆಯರು: 50 ಕಿ.ಮೀ. ಟೀಮ್ ಟೈಮ್ ಟ್ರಯಲ್: ವಿಜಯಪುರ-1, ಬಾಗಲಕೋಟೆ-2, ಗದಗ-3.

ಭ್ರಷ್ಟಾಚಾರ ಪ್ರಕರಣ: ಜಾಮೀನು ಮಂಜೂರು

ನವಾಜ್ ಷರೀಫ್‌ಗೆ ತಾತ್ಕಾಲಿಕ ನಿರಾಳ

ಇಸ್ಲಾಮಾಬಾದ್ (ಪಿಟಿಐ): ಎರಡು ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷೆಗೆ ಗುರಿಯಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರಿಗೆ ಇಸ್ಲಾಮಾಬಾದ್ ಹೈಕೋರ್ಟ್ ಅಕ್ಟೋಬರ್ 24ರವರೆಗೆ ರಕ್ಷಣಾತ್ಮಕ ಜಾಮೀನು ಮಂಜೂರು ಮಾಡಿದೆ.



ನವಾಜ್ ಷರೀಫ್

ಮತ್ತೊಂದೆಡೆ ತೋಷಖಾನ ಪ್ರಕರಣದಲ್ಲಿ ಷರೀಫ್ ವಿರುದ್ಧ ಜಾರಿಯಾಗಿದ್ದ ಬಂಧನದ ವಾರಂಟ್ ಅನ್ನು ಭ್ರಷ್ಟಾಚಾರ ತಡೆ ನ್ಯಾಯಾಲಯವು ಅಮಾನತಿನಲ್ಲಿಟ್ಟಿದೆ. ಹಾಗಾಗಿ, ನಾಲ್ಕು ವರ್ಷಗಳ ಬಳಿಕ ಲಂಡನ್‌ನಿಂದ ಸ್ವದೇಶಕ್ಕೆ ಮರಳುತ್ತಿರುವ ಅವರಿಗೆ ತಾತ್ಕಾಲಿಕ ನಿರಾಳತೆ ಸಿಕ್ಕಿದಂತಾಗಿದೆ.

ತೋಷಖಾನ ಪ್ರಕರಣದಲ್ಲಿ ಷರೀಫ್ ಕೋರ್ಟ್‌ಗೆ ಶಾಶ್ವತವಾಗಿ ಗೈರು ಹಾಜರಾಗಿದ್ದರು. ಹಾಗಾಗಿ, ಅವರ ವಿರುದ್ಧ ಬಂಧನದ ವಾರಂಟ್ ಹೊರಡಿಸಲಾಗಿತ್ತು. ಇದನ್ನು ಅಮಾನತುಗೊಳಿಸುವಂತೆ ಕೋರಿ ಮಾಜಿ ಪ್ರಧಾನಿ ಪರ ವಕೀಲ ಖಾಜಿ ಮುಶಾಹಿದ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಗುರುವಾರ ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮುಹಮ್ಮದ್ ಬಶೀರ್, 'ಸ್ವದೇಶಕ್ಕೆ ಮರಳುತ್ತಿರುವ ಅವರನ್ನು ಪೊಲೀಸರು ಬಂಧಿಸಬಾರದು. ನ್ಯಾಯಾಲಯದ ಮುಂದೆ ಶರಣಾಗಲು ಅವರಿಗೆ ಅವಕಾಶ ಕಲ್ಪಿಸಬೇಕು. ಈ ಬಗ್ಗೆ ಅವರಿಗೂ ಮಾಹಿತಿ ನೀಡಬೇಕು' ಎಂದು ನಿರ್ದೇಶನ ನೀಡಿದರು.

ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಪಕ್ಷದ ಮುಖ್ಯಸ್ಥರಾದ ಷರೀಫ್ ವಿರುದ್ಧ ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ. ತೋಷಖಾನ ಪ್ರಕರಣದಲ್ಲಿ ಘೋಷಿತ ಅಪರಾಧಿ ಎಂದು ಪ್ರಕಟಿಸಲಾಗಿದೆ. 2019ರಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಬ್ರಿಟನ್‌ಗೆ ತೆರಳುವುದಕ್ಕೂ ಮೊದಲು ಅವರಿಗೆ ಈ ಪ್ರಕರಣಗಳಲ್ಲಿ ಜಾಮೀನು ಸಿಕ್ಕಿತ್ತು.

ಏನಿದು ತೋಷಖಾನ?

'ತೋಷಖಾನ' ಎಂಬುದು ಪಾಕಿಸ್ತಾನದ ಉಡುಗೊರೆಗಳ ಭಂಡಾರ. ಇದು ಕ್ಯಾಬಿನೆಟ್ ವಿಭಾಗದಡಿ ಕಾರ್ಯ ನಿರ್ವಹಿಸುತ್ತದೆ. ವಿದೇಶಿ ನಾಯಕರು ಮತ್ತು ಗಣ್ಯರು, ಪಾಕ್‌ನ ಆಡಳಿತಗಾರರು ಮತ್ತು ಸರ್ಕಾರಿ ಅಧಿಕಾರಿಗಳಿಗೆ ನೀಡಿದ ಉಡುಗೊರೆಗಳನ್ನು ಇದು ಸಂಗ್ರಹಿಸುತ್ತದೆ. ನಿಯಮಗಳ ಪ್ರಕಾರ ಕ್ಯಾಬಿನೆಟ್ ವಿಭಾಗಕ್ಕೆ ಅಂತಹ ಉಡುಗೊರೆಗಳು ಮತ್ತು ವಸ್ತುಗಳ ಬಗ್ಗೆ ವರದಿ ಮಾಡುವುದು ಕಡ್ಡಾಯ.

ಪ್ರಧಾನಿ ಅಥವಾ ಅಧ್ಯಕ್ಷರು ₹ 30 ಸಾವಿರಕ್ಕಿಂತಲೂ ಕಡಿಮೆ ಮೊತ್ತದ ಉಡುಗೊರೆಗಳು ಅಥವಾ ವಸ್ತುಗಳನ್ನು ತಮ್ಮ ಬಳಿಯೇ ಉಳಿಸಿಕೊಳ್ಳಬಹುದು. ದುಬಾರಿ ಮೌಲ್ಯದ ವಸ್ತುಗಳನ್ನು ಭಂಡಾರದ ಸುಪರ್ದಿಗೆ ನೀಡಬೇಕು ಎಂದು ಪಾಕ್ ಕಾನೂನು ಹೇಳುತ್ತದೆ.

ರಿಯಾಯಿತಿ ದರದಡಿ ತೋಷಖಾನದಿಂದ ವಾಹನ ಪಡೆದ ಆರೋಪ ಷರೀಫ್ ಅವರ ಮೇಲಿದೆ.

ಸಿಕ್ಕಿಂ ಪ್ರವಾಹ: 2,000 ಜನರ ರಕ್ಷಣೆ

ಪ್ರಜಾವಾಣಿ ವಾರ್ತೆ

ಗ್ಯಾಂಗ್ಟಕ್: ಪ್ರವಾಹ ಪೀಡಿತ ಸಿಕ್ಕಿಂ ರಾಜ್ಯದ ವಿವಿಧ ಪ್ರದೇಶಗಳಿಂದ ಭಾರತೀಯ ವಾಯು ಪಡೆಯು (ಐಎಎಫ್) ಸುಮಾರು 2,000ಕ್ಕೂ ಹೆಚ್ಚು ಜನರನ್ನು ರಕ್ಷಿಸಿದೆ.

ಐಎಎಫ್‌ನ ಚೀತಾ, ಚಿನೋಕ್, ಎಂಐ–17 1ವಿ, ಮತ್ತು ಎಂಐ–17 ವಿ5 ಹೆಲಿಕಾಪ್ಟರ್‌ಗಳು ಪ್ರವಾಹ ಪೀಡಿತ ಪ್ರದೇಶಗಳಲ್ಲಿ 262ಕ್ಕೂ ಹೆಚ್ಚು ಬಾರಿ ಸಂಚರಿಸಿ ರಾಜ್ಯ ಸರ್ಕಾರದ ಪರಿಹಾರ ಕಾರ್ಯಕ್ಕೆ ನೆರವಾಗಿವೆ. ಈ ಮೂಲಕ ಮಾನವೀಯ ನೆರವನ್ನು ಐಎಎಫ್ ಮುಂದುವರಿಸಿದೆ ಎಂದು ಸರ್ಕಾರದ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಒಟ್ಟಾರೆ 2,002 ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಿರುವ ಐಎಎಫ್, ಪ್ರವಾಹ ಪೀಡಿತ ಜನರ ಸ್ಥಳಗಳಿಗೆ 1,32,805 ಕೆ.ಜಿಯಷ್ಟು ಪರಿಹಾರ ಸಾಮಗ್ರಿಗಳನ್ನು ಸಾಗಿಸಿದೆ.

ಸುಮಾರು 259 ಕಾರ್ಯಕರ್ತರು ಮತ್ತು ಭಾರತೀಯ ಸೇನೆಯ 179 ಸಿಬ್ಬಂದಿ ಪರಿಹಾರ ಕಾರ್ಯದಲ್ಲಿ ನಿರತರಾಗಿದ್ದರು. ವಿಪತ್ತಿನ ಸಂದರ್ಭದಲ್ಲಿ ಐಎಎಫ್ ರಾಜ್ಯ ಸರ್ಕಾರದ ಜತೆಗೂಡಿ ಸಮನ್ವಯ ಮತ್ತು ಸಂಘಟಿತವಾಗಿ ಕಾರ್ಯ ನಿರ್ವಹಿಸಿವೆ ಎಂದು ತಿಳಿಸಲಾಗಿದೆ.



ಸಿಕ್ಕಿಂನ ಪ್ರವಾಹ ಪೀಡಿತ ಪ್ರದೇಶಗಳಿಂದ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಿದ ಭಾರತೀಯ ವಾಯು ಪಡೆ (ಐಎಎಫ್)

ಆಧ್ಯಾತ್ಮಿಕ ಗುರು ಬಂಗಾರು ಅಡಿಗಲರ್ ನಿಧನ

ಚೆನ್ನೈ: ತಮಿಳುನಾಡಿನ ಮೆಲ್ಮರುವತ್ತೂರಿನ ಅರುಳ್ಮಿಗು ಆದಿಪರಾಶಕ್ತಿ ದೇವಸ್ಥಾನದ ಗರ್ಭಗುಡಿಯೊಳಗೆ ದಶಕಗಳ ಹಿಂದೆಯೇ ಮಹಿಳೆಯರಿಗೆ ಪ್ರವೇಶ ನೀಡಿ ಕ್ರಾಂತಿ ಮೂಡಿಸಿದ್ದ ಖ್ಯಾತ ಆಧ್ಯಾತ್ಮಿಕ ಗುರು ಬಂಗಾರು ಅಡಿಗಲರ್ (82) ಗುರುವಾರ ಇಲ್ಲಿ ನಿಧನರಾದರು.

ತಮ್ಮ ಅನುಯಾಯಿಗಳಿಂದ ಅಮ್ಮ ಎಂದೇ ಕರೆಯಲ್ಪಡುತ್ತಿದ್ದ ಬಂಗಾರು ಅಡಿಗಲರ್, ಕೆಲ ದಿನಗಳಿಂದ ಅನಾರೋಗ್ಯಕ್ಕೆ ಒಳಗಾಗಿದ್ದರು. ಅವರಿಗೆ ಗುರುವಾರ ಸಂಜೆ ಹೃದಯಾಘಾತವಾಗಿತ್ತು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಅವರ ಕುಟುಂಬದ ಒಡೆತನದಲ್ಲಿ ವೈದ್ಯಕೀಯ ಕಾಲೇಜು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳಿವೆ.

ಚೆನ್ನೈನಿಂದ 90 ಕಿ.ಮೀ ದೂರದಲ್ಲಿರುವ ಮೆಲ್ಮರುವತ್ತೂರಿನ ಆದಿಪರಾಶಕ್ತಿ ದೇವಸ್ಥಾನ ಸೇರಿದಂತೆ ತಮ್ಮ ನಿರ್ವಹಣೆಯಲ್ಲಿದ್ದ ಇತರ ಧಾರ್ಮಿಕ ಸಂಸ್ಥೆಗಳ ಒಳಗೆ ಮಹಿಳೆಯರಿಗೆ, ಅವರ ಋತುಚಕ್ರದ ಅವಧಿಯೂ ಸೇರಿದಂತೆ ಎಲ್ಲ ದಿನಗಳಲ್ಲೂ ಪ್ರವೇಶಕ್ಕೆ ಅವಕಾಶ ನೀಡುವ ಮೂಲಕ ಅಡಿಗಲರ್ ಕ್ರಾಂತಿಕಾರಿ ಹೆಜ್ಜೆಯಿಟ್ಟಿದ್ದರು. ಅಲ್ಲದೆ ದೇವಸ್ಥಾನಗಳಲ್ಲಿ ಪುರುಷರಂತೆ ಮಹಿಳೆಯರಿಗೂ ಪೂಜೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದರು.

ಚೀನಾದ ಬಿಆರ್‌ಐ: ಭಾರತ ವಿರೋಧ

ನವದೆಹಲಿ(ಪಿಟಿಐ): ಚೀನಾದ ಮಹತ್ವಾಕಾಂಕ್ಷೆಯ 'ಬೆಲ್ಟ್ ಅಂಡ್ ರೋಡ್ ಇನಿಷಿಯೇಟಿವ್' (ಬಿಆರ್‌ಐ) ಯೋಜನೆಗೆ ಭಾರತ ಗುರುವಾರ ಮತ್ತೊಮ್ಮೆ ತನ್ನ ವಿರೋಧ ವ್ಯಕ್ತಪಡಿಸಿದೆ.

'ಭಾರತದ ಸಾರ್ವಭೌಮತೆ ಹಾಗೂ ಸಮಗ್ರತೆಯನ್ನು ನಿರ್ಲಕ್ಷಿಸಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಚೀನಾ ಮುಂದಾಗಿದೆ. ಹೀಗಾಗಿ, ಮೊದಲಿನಿಂದಲೂ ಭಾರತ ಈ ಯೋಜನೆಯನ್ನು ವಿರೋಧಿಸುತ್ತಾ ಬಂದಿದ್ದು, ಈ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಈ ವರ್ಷದ ಬೆಲ್ಟ್ ಅಂಡ್ ರೋಡ್ ಫೋರಮ್ ಸಭೆಗೆ ಭಾರತಕ್ಕೆ ಚೀನಾ ಆಹ್ವಾನ ನೀಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಪುಣೆಯ ಅಂಗಳದಲ್ಲಿ ವಿಜೃಂಭಿಸಿದ ಕಿಂಗ್ ಕೊಹ್ಲಿ • ಶುಭಮನ್ ಗಿಲ್ ಅರ್ಧಶತಕ • ಬಾಂಗ್ಲಾ ತಂಡಕ್ಕೆ ನಿರಾಶೆ

ವಿರಾಟ್ ಶತಕ; ಭಾರತಕ್ಕೆ ನಾಲ್ಕನೇ ಜಯ

ಪ್ರಜಾವಾಣಿ ವಾರ್ತೆ

ಪುಣೆ: ಮಹಾರಾಷ್ಟ್ರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗುರುವಾರ ವಿರಾಟ್ ಕೊಹ್ಲಿಯ ಚೆಂದದ ಶತಕ ಅರಳಿತು. ಜೊತೆಗೆ ಭಾರತ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಸತತ ನಾಲ್ಕನೇ ಜಯವನ್ನೂ ದಾಖಲಿಸಿತು. ಬಾಂಗ್ಲಾದೇಶವು ಸತತ ಮೂರನೇ ಪಂದ್ಯ ಸೋತಿತು.

ಏಕದಿನ ಮಾದರಿಯಲ್ಲಿ 48ನೇ ಶತಕ ಬಾರಿಸಿದ ವಿರಾಟ್ ಬಲದಿಂದ ಭಾರತ ತಂಡವು ಬಾಂಗ್ಲಾ ಎದುರು 7 ವಿಕೆಟ್‌ಗಳಿಂದ ಜಯಿಸಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 256 ರನ್ ಗಳಿಸಿತು.

ಈ ಗುರಿ ಬೆನ್ನಟ್ಟಿದ ಭಾರತ ತಂಡವು 41.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 261 ರನ್ ಗಳಿಸಿ ಜಯಿಸಿತು. ಇಡೀ ಪಂದ್ಯದ ಬಹುತೇಕ ಸಮಯದಲ್ಲಿ ಭಾರತವೇ ಮೇಲುಗೈ ಸಾಧಿಸಿತ್ತು.

ಶತಕ ಕೌತುಕ: ಆದರೆ ಪಂದ್ಯದ ಕೊನೆಯಲ್ಲಿ ಭಾರತದ ಜಯಕ್ಕೆ ಒಂಬತ್ತು ಓವರ್‌ಗಳಲ್ಲಿ ಎರಡು ರನ್‌ಗಳ ಅಗತ್ಯವಿದ್ದಾಗ ರೋಚಕತೆ ಸೃಷ್ಟಿಯಾಯಿತು!

ಹೌದು; ಆ ಸಂದರ್ಭದಲ್ಲಿ ಕ್ರೀಸ್‌ನಲ್ಲಿ 97 ರನ್ ಗಳಿಸಿ ಆಡುತ್ತಿದ್ದ ವಿರಾಟ್ ಕೊಹ್ಲಿ ಶತಕ ಗಳಿಸುವರೇ ಎಂಬುದೇ ಆ ಕುತೂಹಲಕ್ಕೆ ಕಾರಣವಾಗಿತ್ತು. ನೂರರ ಗಡಿ ದಾಟಲು ವಿರಾಟ್ ಕೂಡ ಉತ್ಸುಕರಾಗಿದ್ದರು. ಆದ್ದರಿಂದ 42ನೇ ಓವರ್‌ನ ಮೊದಲೆರಡೂ ಎಸೆತಗಳಲ್ಲಿ ವಿರಾಟ್ ಒಂದು ಅಥವಾ ಎರಡು ರನ್ ಪಡೆಯಲು ಇಷ್ಟಪಡಲಿಲ್ಲ. ಮೂರನೇ ಎಸೆತವನ್ನು ಸಿಕ್ಸರ್‌ಗೆ ಎತ್ತಿದ ವಿರಾಟ್ (ಅಜೇಯ 103) ಸಂಭ್ರಮಿಸಿದರು. ಇನ್ನೊಂದು ಬದಿಯಲ್ಲಿದ್ದ ಕೆ.ಎಲ್. ರಾಹುಲ್ (ಔಟಾಗದೆ 34) ಅವರನ್ನು ಬಿಗಿದಪ್ಪಿಕೊಂಡರು.

ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕ ಗಳಿಸಿರುವ ಸಚಿನ್ ತೆಂಡೂಲ್ಕರ್ (49) ದಾಖಲೆಯನ್ನು ಸರಿಗಟ್ಟಲು ಕೊಹ್ಲಿಗೆ ಇನ್ನೊಂದು ಶತಕ ಅಗತ್ಯವಿದೆ.

ಉತ್ತಮ ಆರಂಭ: ಗುರಿ ಬೆನ್ನಟ್ಟಿದ ಭಾರತಕ್ಕೆ ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 88 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಈ ವಿಶ್ವಕಪ್ ಟೂರ್ನಿಯಲ್ಲಿ ಎರಡನೇ ಪಂದ್ಯ ಆಡಿದ ಗಿಲ್ (53; 55ಎ) ಅರ್ಧಶತಕ ಗಳಿಸಿದರು. ರೋಹಿತ್ 48 ರನ್ ಗಳಿಸಿ ಔಟಾದರು. ಆದರೆ ಇವರ ಶ್ರಮ ವ್ಯರ್ಥವಾಗದಂತೆ ಕೊಹ್ಲಿ ನೋಡಿಕೊಂಡರು.

ಬಾಂಗ್ಲಾದ ಬೌಲರ್‌ಗಳ ಎಸೆತಗಳಿಗೆ ತಕ್ಕ ಉತ್ತರ ನೀಡಿದ ಕೊಹ್ಲಿ, ಪುಲ್, ಡ್ರೈವ್‌ಗಳ ಚಿತ್ತಾರ ಬಿಡಿಸಿದರು. ಸ್ಪಿನ್ನರ್‌ಗಳಿಗೂ ಬಿಸಿ ಮುಟ್ಟಿಸಿದರು. ವಿರಾಟ್ ಮತ್ತು ರಾಹುಲ್ ಮುರಿಯದ ನಾಲ್ಕನೇ ಜೊತೆಯಾಟದಲ್ಲಿ 83 ರನ್ ಸೇರಿಸಿದರು.

ರಾಹುಲ್ ಅಮೋಘ ಕ್ಯಾಚ್: ಈ ವಿಶ್ವಕಪ್ ಟೂರ್ನಿಯಲ್ಲಿ ವಿಕೆಟ್‌ಕೀಪಿಂಗ್ ಮಾಡುತ್ತಿರುವ ಕನ್ನಡಿಗ ಕೆ.ಎಲ್. ರಾಹುಲ್ ಬಾಂಗ್ಲಾದ ಮೆಹದಿ ಹಸನ್ ಮಿರಾಜ್ ಅವರ ಕ್ಯಾಚ್ ಪಡೆದ ರೀತಿಗೆ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ಸಿರಾಜ್ ಹಾಕಿದ ಎಸೆತವು ಲೆಗ್‌ಸ್ಟಂಪ್‌ನಿಂದ ತುಸು ಹೊರಗಿತ್ತು. ಮಿರಾಜ್ ಅದನ್ನು ಡ್ರೈವ್ ಮಾಡಲು ಪ್ರಯತ್ನಿಸಿದರು. ಚೆಂಡು ಬ್ಯಾಟ್ ಅಂಚು ಸವರಿ ಹಿಂದೆ ಧಾವಿಸಿತು. ರಾಹುಲ್ ತಮ್ಮ ಎಡಬದಿಗೆ ಜಿಗಿದು ಚೆಂಡನ್ನು ಹಿಡಿತಕ್ಕೆ ಪಡೆದರು. ಮಿರಾಜ್ ಚಕಿತರಾಗಿ ನಿರ್ಗಮಿಸಿದರು.

ಬೂಮ್ರಾ ಯಾರ್ಕರ್: ಬಾಂಗ್ಲಾ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಅವರು ಹಾಕಿದ ನಿಖರ ಯಾರ್ಕರ್‌ಗೆ ಮಹಮುದುಲ್ಲಾ ಕ್ಲೀನ್‌ಬೌಲ್ಡ್ ಆದರು. 48 ರನ್ ಗಳಿಸಿದ್ದ ಅವರು ನಿರಾಶೆಯಿಂದ ಮರಳಬೇಕಾಯಿತು. ಅದಕ್ಕೂ ಮುಂಚಿನ ಎಸೆತದಲ್ಲಿ ಎಲ್‌ಬಿಡಬ್ಲ್ಯು ತೀರ್ಪಿನಲ್ಲಿ ಡಿಆರ್‌ಎಸ್ ಮೂಲಕ 'ಜೀವದಾನ' ಪಡೆದಿದ್ದ ಮಹಮುದುಲ್ಲಾ ಅರ್ಧಶತಕ ಗಳಿಸಲು ಬೂಮ್ರಾ ಬಿಡಲಿಲ್ಲ.



ಮುಖ್ಯಾಂಶಗಳು

- ಏಕದಿನ ಕ್ರಿಕೆಟ್‌ನಲ್ಲಿ ಕೊಹ್ಲಿ 48ನೇ ಶತಕ
- ಸಚಿನ್ (49 ಶತಕ) ದಾಖಲೆ ಸರಿಗಟ್ಟಲು ಇನ್ನೊಂದು ಶತಕ ಬೇಕು
- 3ನೇ ಕ್ರಮಾಂಕದಲ್ಲಿ ಆಡಲಿಳಿದು 41ನೇ ಶತಕ
- ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಗಳಿಸಿದವರ ಪಟ್ಟಿಯಲ್ಲಿ ಮಾಹೇಲ ಜಯವರ್ಧನೆ (25,957) ಅವರನ್ನು ಹಿಂದಿಕ್ಕಿ ನಾಲ್ಕನೇ ಸ್ಥಾನಕ್ಕೇರಿದ ಕೊಹ್ಲಿ

ವಿರಾಟ್ ಕೊಹ್ಲಿ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಹಾರ್ದಿಕ್‌ಗೆ ಗಾಯ; ಕೊಹ್ಲಿ ಬೌಲಿಂಗ್

ಮಧ್ಯಮವೇಗಿ ಹಾರ್ದಿಕ್ ಪಾಂಡ್ಯ ಅವರು ಇನಿಂಗ್ಸ್‌ನ ಒಂಬತ್ತನೇ ಓವರ್ ಬೌಲಿಂಗ್ ಮಾಡುವಾಗ ಕಾಲು ಉಳುಕಿಸಿಕೊಂಡು ವಿಶ್ರಾಂತಿಗೆ ತೆರಳಿದರು.

ಅದರಿಂದಾಗಿ ಈ ಓವರ್‌ನಲ್ಲಿ ಉಳಿದಿದ್ದ ಮೂರು ಎಸೆತಗಳನ್ನು ಕೊಹ್ಲಿ ಹಾಕಿದರು. ಅದರಲ್ಲಿ ಎರಡು ರನ್ ಕೊಟ್ಟರು.

ಹಾರ್ದಿಕ್ ಹಾಕಿದ್ದ ಓವರ್‌ನ ಎರಡು ಮತ್ತು ಮೂರನೇ ಎಸೆತಗಳಲ್ಲಿ ಲಿಟನ್ ದಾಸ್ ಬೌಂಡರಿ ಗಳಿಸಿದ್ದರು. ಹಾರ್ದಿಕ್ ಅವರಿಗೆ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು. ಆದರೂ ರನ್ ಅಪ್ ತೆಗೆದುಕೊಳ್ಳಲು ಹಾರ್ದಿಕ್‌ಗೆ ಸಾಧ್ಯವಾಗದ ಕಾರಣ ಮೈದಾನದಿಂದ ಹೊರನಡೆದರು. ಪಂದ್ಯದಲ್ಲಿ ಇದು ಅವರಿಗೆ ಮೊದಲ ಓವರ್ ಆಗಿತ್ತು.

ಬದಲೀ ಆಟಗಾರ ಸೂರ್ಯಕುಮಾರ್ ಯಾದವ್ ಅವರು ಫೀಲ್ಡಿಂಗ್ ನಿರ್ವಹಿಸಿದರು.

ಸ್ಕೋರ್ ಕಾರ್ಡ್

ಬಾಂಗ್ಲಾದೇಶ 8ಕ್ಕೆ 256 (50 ಓವರ್)

ತಂಜಿದ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 51 (43ಎ, 4x5, 6x3)
ಲಿಟ್ಟನ್ ದಾಸ್ ಸಿ ಗಿಲ್ ಬಿ ಜಡೇಜ 66 (82ಎ, 4x7)
ನಜ್ಮುಲ್ ಎಲ್‌ಬಿಡಬ್ಲ್ಯು ಬಿ ಜಡೇಜ 8 (17 ಎ)
ಮೆಹಿದಿ ಹಸನ್ ಸಿ ರಾಹುಲ್ ಬಿ ಸಿರಾಜ್ 3 (13 ಎ)
ತೌಹಿದ್ ಸಿ ಗಿಲ್ ಬಿ ಠಾಕೂರ್ 16 (35 ಎ)
ಮುಷ್ಫಿಕುರ್ ಸಿ ಜಡೇಜ ಬಿ ಬೂಮ್ರಾ 38 (46ಎ, 4x1, 6x1)
ಮಹಮುದುಲ್ಲಾ ಬಿ ಬೂಮ್ರಾ 46 (36ಎ, 4x3, 6x3)
ನಸುಮ್ ಸಿ ರಾಹುಲ್ ಬಿ ಸಿರಾಜ್ 14 (18ಎ, 4x2)
ಮುಸ್ತಫಿಜುರ್ ಔಟಾಗದೇ 1 (7 ಎ)
ಶರೀಫುಲ್ ಔಟಾಗದೇ 7 (3ಎ, 6x1)
ಇತರೆ: 6 (ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1–93 (ತಂಜಿದ್ ಹುಸೇನ್, 14.4), 2–110 (ನಜ್ಮುಲ್ ಹುಸೇನ್ ಶಾಂತೊ, 19.6), 3–129 (ಮೆಹಿದಿ ಹಸನ್ ಮಿರಾಜ್, 24.1), 4–137 (ಲಿಟ್ಟನ್ ದಾಸ್, 27.4), 5–179 (ತೌಹಿದ್ ಹೃದಯ್, 37.2), 6–201 (ಮುಷ್ಫಿಕುರ್ ರಹೀಂ, 42.3), 7–233 (ನಸುಮ್ ಅಹ್ಮದ್, 46.5), 8–248 (ಮಹಮುದುಲ್ಲಾ, 49.2
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–1–41–2; ಮೊಹಮ್ಮದ್ ಸಿರಾಜ್ 10–0–60–2; ಹಾರ್ದಿಕ್ ಪಾಂಡ್ಯ 0.3–0–8–0; ವಿರಾಟ್ ಕೊಹ್ಲಿ 0.3–0–2–0; ಶಾರ್ದೂಲ್ ಠಾಕೂರ್ 9–0–59–1, ಕುಲದೀಪ್ ಯಾದವ್ 10–0–47–1; ರವೀಂದ್ರ ಜಡೇಜ 10–0–38–2.

ಭಾರತ: 3ಕ್ಕೆ 261 (41.3 ಓವರ್)

ರೋಹಿತ್ ಸಿ ತೌಹಿದ್ ಬಿ ಹಸನ್ 48 (40 ಎ, 4x7, 6x2)
ಗಿಲ್ ಸಿ ಮಹಮದುಲ್ಲಾ ಬಿ ಮೆಹಿದಿ 53 (55 ಎ, 4x5, 2x6)
ಕೊಹ್ಲಿ ಔಟಾಗದೇ 103 (97 ಎ, 4x6, 6x4)
ಶ್ರೇಯಸ್ ಸಿ ಮಹಮುದುಲ್ಲಾ ಬಿ ಮಹಿದಿ 19 (25 ಎ, 4x2)
ರಾಹುಲ್ ಔಟಾಗದೇ 34 (34 ಎ, 4x3, 6x1)
ಇತರೆ: 4 (ನೋಬಾಲ್ 2, ವೈಡ್ 2)
ವಿಕೆಟ್ ಪತನ: 1–88 (ರೋಹಿತ್ ಶರ್ಮ, 12.4), 2–132 (ಶುಭಮನ್ ಗಿಲ್, 19.2), 3–178 (ಶ್ರೇಯಸ್ ಅಯ್ಯರ್, 29.1)
ಬೌಲಿಂಗ್: ಬೌಲಿಂಗ್: ಶರೀಫುಲ್ ಇಸ್ಲಾಂ 8–0–54–0; ಮುಸ್ತಫಿಜುರ್ ರೆಹಮಾನ್ 5–0–29–0; ನಸುಮ್ ಅಹ್ಮದ್ 9.3–0–60–0; ಹಸನ್ ಮಹಮುದ್ 8–0–65–1; ಮೆಹಿದಿ ಹಸನ್ ಮಿರಾಜ್ 10–0–47–2; ಮಹಮುದುಲ್ಲಾ 1–0–6–0

ಫಲಿತಾಂಶ: ಭಾರತಕ್ಕೆ 7 ವಿಕೆಟ್ ಗೆಲುವು, 2 ಅಂಕ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ನ್ಯೂಜಿಲೆಂಡ್	4	4	0	0	8	1.923
ಭಾರತ	4	4	0	0	8	1.659
ದಕ್ಷಿಣ ಆಫ್ರಿಕಾ	3	2	1	0	4	1.385
ಪಾಕಿಸ್ತಾನ	3	2	1	0	4	-0.137
ಇಂಗ್ಲೆಂಡ್	3	1	2	0	2	-0.084
ಆಸ್ಟ್ರೇಲಿಯಾ	3	1	2	0	2	-0.734
ಬಾಂಗ್ಲಾದೇಶ	4	1	3	0	2	-0.784
ನೆದರ್ಲೆಂಡ್ಸ್	3	1	2	0	2	-0.993
ಅಫ್ಗಾನಿಸ್ತಾನ	4	1	3	0	2	-1.250
ಶ್ರೀಲಂಕಾ	3	0	3	0	0	-1.532

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಾಕಿಸ್ತಾನಕ್ಕೆ ಆಸ್ಟ್ರೇಲಿಯಾ ಸವಾಲು ಇಂದು

ಬಾಬರ್ ಬಳಗಕ್ಕೆ ಪುಟಿದೇಳುವ ಛಲ

• ಗಿರೀಶ ದೊಡ್ಡಮನಿ

ಬೆಂಗಳೂರು: 'ಭಾರತ ತಂಡದ ಎದುರಿನ ಪಂದ್ಯದಲ್ಲಿ ಗೆಲುವು, ಸೋಲುಗಳು ನಮ್ಮ ಭವಿಷ್ಯವನ್ನು ಉಜ್ವಲಗೊಳಿಸಬಹುದು ಇಲ್ಲವೇ ನಾಶ ಕೂಡ ಮಾಡಿಬಿಡಬಹುದು. ಅಹಮದಾಬಾದಿನಲ್ಲಿ ನಮ್ಮ ತಪ್ಪಿನಿಂದಾಗಿ ಭಾರತದ ಎದುರು ಸೋತಿದ್ದೇವೆ. ಸುಧಾರಿಸಿಕೊಂಡು ವಿಶ್ವಕಪ್ ಜಯಿಸುವ ಅವಕಾಶ ಇನ್ನೂ ಇದೆ. ಅದರತ್ತ ಮುಂದುವರಿಯುತ್ತೇವೆ' –

ಪಾಕಿಸ್ತಾನ ಕ್ರಿಕೆಟ್ ತಂಡದ ಹಸನ್ ಅಲಿ ಅವರ ನುಡಿಗಳಿವು. ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಆಸ್ಟ್ರೇಲಿಯಾ ಎದುರು ಕಣಕ್ಕಿಳಿಯಲಿದೆ. ಹೋದ ಶನಿವಾರ ಮೊಟೇರಾದಲ್ಲಿ ಪಾಕ್ ತಂಡವು ಭಾರತದ ಎದುರು ಸೋತಿತ್ತು. ಅದರ ನಂತರ ಬೆಂಗಳೂರಿಗೆ ಬಂದಿದೆ. ತಂಡದ ಬಹುತೇಕ ಎಲ್ಲ ಆಟಗಾರರಿಗೆ ವೈರಲ್ ಜ್ವರ ಕಾಡಿತ್ತು. ಇದೀಗ ಎಲ್ಲರೂ ಗುಣಮುಖರಾಗಿದ್ದಾರೆ. ಗುರುವಾರ ಸಂಜೆ ಅಭ್ಯಾಸ ನಡೆಸಿದರು. ಇದೇ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಹಸನ್ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.

ಈ ಟೂರ್ನಿಯಲ್ಲಿ ಪಾಕ್ ತಂಡವು ಮೊದಲೆರಡು ಪಂದ್ಯಗಳಲ್ಲಿ ಗೆದ್ದಿತ್ತು. ಆದರೆ, ಮೂರನೇ ಪಂದ್ಯದಲ್ಲಿ ಭಾರತದ ಎದುರು ಸೋತಿತ್ತು. ಆ ಪಂದ್ಯದಲ್ಲಿ ಉತ್ತಮ ಆರಂಭ ಲಭಿಸಿತ್ತು. ಆದರೆ, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರು. ಅದರಿಂದಾಗಿ ತಂಡವು ಸಾಧಾರಣ ಮೊತ್ತದ ಗುರಿ ಯೊಡ್ಡಿತ್ತು. ಈ ಪಂದ್ಯದಲ್ಲಿಯೂ ಪಾಕ್ ತಂಡವು ಮೊಹಮ್ಮದ್ ರಿಜ್ವಾನ್, ಬಾಬರ್ ಆಜಂ ಮತ್ತು ಅಬ್ದುಲ್ಲಾ ಶಫೀಕ್ ಅವರ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ.

ವೇಗದ ಬೌಲಿಂಗ್ ವಿಭಾಗ ಉತ್ತಮವಾಗಿದೆ. ಆದರೆ, ಆಸ್ಟ್ರೇಲಿಯಾದ ಬ್ಯಾಟಿಂಗ್ ಪಡೆ ಬಲಾಢ್ಯವಾಗಿದೆ. ಮಿಚೆಲ್ ಮಾರ್ಷ್, ಜೋಷ್ ಇಂಗ್ಲಿಸ್ ಮತ್ತು ಮಾರ್ನಸ್ ಲಾಬುಷೇನ್ ಅವರು ಶ್ರೀಲಂಕಾ ವಿರುದ್ಧದ ಹಿಂದಿನ ಪಂದ್ಯದಲ್ಲಿ ಮಿಂಚಿದ್ದರು. ಇದು ಪಾಕ್ ಬೌಲರ್‌ಗಳಿಗೆ ಕಠಿಣ ಸವಾಲಾಗಬಹುದು. ಶಹೀನ್ ಶಾ ಆಫ್ರಿದಿ, ಹ್ಯಾರಿಸ್ ರವೂಫ್ ಹಾಗೂ ಹಸನ್ ಅಲಿ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ಸ್ಪಿನ್ ಬೌಲಿಂಗ್ ವಿಭಾಗ ದುರ್ಬಲವಾಗಿದೆ.

ಆದರೆ, ಆಸ್ಟ್ರೇಲಿಯಾ ತಂಡದ ಬೌಲಿಂಗ್ ಪ್ಯಾಟ್ ಕಮಿನ್ಸ್ ನಾಯಕತ್ವದಲ್ಲಿ ಬಲಿಷ್ಠವಾಗಿದೆ. ಸ್ಪಿನ್ನರ್ ಆ್ಯಡಂ ಜಂಪಾ ಅದ್ಭುತ ಲಯದಲ್ಲಿದ್ದಾರೆ. ರನ್‌ಗಳನ್ನು ನೀಡಿದರೂ ವಿಕೆಟ್ ಉರುಳಿಸುವ ಛಲದ ಆಟಗಾರ ಜಂಪಾ. ಬುಧವಾರ ಸಂಜೆ ನೆಟ್ಸ್‌ನಲ್ಲಿ ಲವಲವಿಕೆಯಿಂದಲೇ ಬೌಲಿಂಗ್ ಮಾಡಿದರು.

ಆದರೆ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ತನ್ನ ಸ್ಪರ್ಧಾತ್ಮಕ ಗುಣಕ್ಕೆ ಖ್ಯಾತಿ ಪಡೆದಿದೆ. ಈ ಪಂದ್ಯದಲ್ಲಿಯೂ ಬೌಲರ್ ಮತ್ತು ಬ್ಯಾಟರ್‌ಗಳಿಗೆ ಸಮಾನ ಅವಕಾಶ ಒದಗಿಸುವ ನಿರೀಕ್ಷೆ ಇದೆ. ಮೊದಲು ಬ್ಯಾಟಿಂಗ್ ಮಾಡುವ ತಂಡವು ದೊಡ್ಡ ಮೊತ್ತ ಗಳಿಸಲು ಉತ್ತಮ ಅವಕಾಶವಿದೆ. ಆಸ್ಟ್ರೇಲಿಯಾ ತಂಡವು ಈ ಅಂಗಳದಲ್ಲಿ ಇಲ್ಲಿಯವರೆಗೆ ಹತ್ತು ಪಂದ್ಯಗಳನ್ನು ಆಡಿದೆ. ಅಲ್ಲದೇ ತಂಡದ ಪ್ರಮುಖ ಆಟಗಾರರು ಐಪಿಎಲ್‌ನಲ್ಲಿ ಆಡಿರುವುದರಿಂದ ಪಿಚ್ ಮತ್ತು ಹವಾಗುಣದ ಪರಿಚಯವಿದೆ.

ಅದರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸುವ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ವೇಗಿ ಜೋಶ್ ಹ್ಯಾಜಲ್‌ವುಡ್ ಅವರು ತಂಡದಲ್ಲಿದ್ದಾರೆ. ಅವರನ್ನು ನೋಡಲೆಂದೇ ಬಹಳಷ್ಟು ಅಭಿಮಾನಿಗಳು ಟಿಕೆಟ್ ಖರೀದಿಸಿದ್ದಾರೆ. ಆದರೆ ಪಾಕಿಸ್ತಾನದ ಬಹುತೇಕ ಆಟಗಾರರಿಗೆ ಅಂತಹ ಹಿನ್ನೆಲೆ ಇಲ್ಲ. ಆದ್ದರಿಂದ ತಂಡದ ಮುಂದೆ ಕಠಿಣ ಸವಾಲಿದೆ.

ಆಸ್ಟ್ರೇಲಿಯಾ ತಂಡವು ಈ ಟೂರ್ನಿಯಲ್ಲಿ ಮೊದಲ ಮೂರು ಪಂದ್ಯಗಳಲ್ಲಿ ಎರಡು ಸೋತು ಒಂದರಲ್ಲಿ ಗೆದ್ದಿದೆ. ಐದು ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ಈ ಸಲ ಸೆಮಿಫೈನಲ್ ತಲುಪಬೇಕಾದರೆ, ಇನ್ನುಳಿದಿರುವ ಆರು ಪಂದ್ಯಗಳಲ್ಲಿ ಹೆಚ್ಚು ಗೆಲುವುಗಳನ್ನು ಸಾಧಿಸುವುದು ಅನಿವಾರ್ಯ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್



ಆಸ್ಟ್ರೇಲಿಯಾ ತಂಡದ ಪ್ಯಾಟ್ ಕಮಿನ್ಸ್ (ಎಡಚಿತ್ರ) ಪಾಕಿಸ್ತಾನ ತಂಡದ ಬಾಬರ್ ಆಜಂ ಮತ್ತು ಸಹ ಆಟಗಾರರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಚಿನ್ನಸ್ವಾಮಿ ಅಂಗಳದಲ್ಲಿ ಆಸ್ಟ್ರೇಲಿಯಾ ವಿಶೇಷ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಳೆದ 12 ವರ್ಷಗಳಲ್ಲಿ ಐದು ಅಂತರರಾಷ್ಟ್ರೀಯ ಏಕದಿನ ಪಂದ್ಯಗಳು ನಡೆದಿವೆ. ಈ ಎಲ್ಲ ಪಂದ್ಯಗಳಲ್ಲಿಯೂ ಆಸ್ಟ್ರೇಲಿಯಾ ಆಡಿರುವುದು ವಿಶೇಷ.

ಇದರಲ್ಲಿ ಮೂರು ಗೆದ್ದು ಎರಡರಲ್ಲಿ ಸೋತಿದೆ. ಎರಡು ಬಾರಿ ಭಾರತವನ್ನು ಎದುರಿಸಿದರೆ, ಕೆನ್ಯಾ ಹಾಗೂ ಕೆನಡಾ ವಿರುದ್ಧ ತಲಾ ಒಂದು ಪಂದ್ಯ ಆಡಿದೆ.

ತಂಡ	ಎದುರಾಳಿ	ವರ್ಷ	ಫಲಿತಾಂಶ
ಆಸ್ಟ್ರೇಲಿಯಾ	ಕೆನ್ಯಾ	2011	ಆಸ್ಟ್ರೇಲಿಯಾಕ್ಕೆ ಗೆಲುವು
ಆಸ್ಟ್ರೇಲಿಯಾ	ಕೆನಡಾ	2011	ಆಸ್ಟ್ರೇಲಿಯಾಕ್ಕೆ ಜಯ
ಆಸ್ಟ್ರೇಲಿಯಾ	ಭಾರತ	2013	ಭಾರತಕ್ಕೆ ಜಯ
ಆಸ್ಟ್ರೇಲಿಯಾ	ಭಾರತ	2017	ಆಸ್ಟ್ರೇಲಿಯಾ ಜಯ
ಆಸ್ಟ್ರೇಲಿಯಾ	ಭಾರತ	2020	ಭಾರತಕ್ಕೆ ಗೆಲುವು

ಪಾಕ್ ಆಟಗಾರರಿಗೆ ಮೊದಲ ಪಂದ್ಯ

ಆಸ್ಟ್ರೇಲಿಯಾ ವಿರುದ್ಧ ಆಡಲಿರುವ ಪಾಕಿಸ್ತಾನ ತಂಡದ ಎಲ್ಲ ಆಟಗಾರರೂ ಇದೇ ಮೊದಲ ಸಲ ಬೆಂಗಳೂರಿನಲ್ಲಿ ಆಡಲಿದ್ದಾರೆ.

ಪಾಕ್ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿರುವ ಮೂರನೇ ಏಕದಿನ ಪಂದ್ಯ ಇದು. 1996 ಮತ್ತು 1999ರಲ್ಲಿ ಆಡಿತ್ತು. ಅದರ ನಂತರ ಈಗಲೇ ಆಡುತ್ತಿದೆ. 2012ರಲ್ಲಿ ಭಾರತದ ಎದುರು ಇಲ್ಲಿ ಟಿ20 ಪಂದ್ಯ ಆಡಿತ್ತು. ಆಗ ತಂಡದಲ್ಲಿದ್ದ ಯಾರೂ ಈಗ ಇಲ್ಲ.

ಬಾಬರ್ ಆಜಂ ಬಳಗದಲ್ಲಿರುವ ಎಲ್ಲರಿಗೂ ಉದ್ಯಾನನಗರಿಯಲ್ಲಿ ಇದೇ ಮೊದಲ ಪಂದ್ಯ. ನವೆಂಬರ್ 4ರಂದು ಪಾಕ್ ತಂಡವು ಇಲ್ಲಿಯೇ ನ್ಯೂಜಿಲೆಂಡ್ ಎದುರು ಆಡಲಿದೆ.

ಭಾರತ ಮತ್ತು ಪಾಕ್ ನಡುವಣ ರಾಜಕೀಯ ಬಿಕ್ಕಟ್ಟು ಇರುವ ಕಾರಣ ಎರಡೂ ತಂಡಗಳ ನಡುವಣ ಸರಣಿಗಳು ನಡೆಯುತ್ತಿಲ್ಲ. ಕೇವಲ ಐಸಿಸಿ ಟೂರ್ನಿಗಳಲ್ಲಿ ಮಾತ್ರ ಮುಖಾಮುಖಿಯಾಗುತ್ತಿವೆ.

ಮಿತಿಮೀರಿದ ವೇಗದಲ್ಲಿ ಚಾಲನೆ: ರೋಹಿತ್‌ಗೆ ದಂಡ

ಪುಣೆ (ಪಿಟಿಐ): ಮುಂಬೈ– ಪುಣೆ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಲ್ಯಾಂಬರ್ಗಿನಿ ಉರುಸ್ ಎಸ್‌ಯುವಿ ಕಾರನ್ನು ಅತಿವೇಗವಾಗಿ ಚಲಾಯಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ₹4,000 ದಂಡ ವಿಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಂಗಳವಾರ ಅವರು ಈ ಹೆದ್ದಾರಿಯಲ್ಲಿ ಪ್ರಯಾಣಿಸಿದ್ದರು. ಮರುದಿನ ಎರಡು ಚಲನ್‌ಗಳ ಮೂಲಕ ನಿಗದಿಪಡಿಸಿದ ಈ ದಂಡವನ್ನು ಪಾವತಿಸಲಾಗಿದೆ ಎಂದು ಹೆದ್ದಾರಿ ವಿಭಾಗದ ಎಸ್ಪಿ ಲತಾ ಪಾಹಡ್ ತಿಳಿಸಿದ್ದಾರೆ.

ಕಾಮ್ಶೆಟ್ ಸುರಂಗ ಮಾರ್ಗದ ಬಳಿ 117 ಕಿ.ಮೀ. ವೇಗದಲ್ಲಿ ಚಾಲನೆ ಮಾಡಿದ್ದು ಆಟೊ ಕ್ಯಾಮೆರಾದಲ್ಲಿ ದಾಖಲಾಗಿದೆ. ಇಲ್ಲಿ 105 ಕಿ.ಮೀ. ವೇಗಮಿತಿಯಿದೆ. ಸೋಮತಾನೆ ಪಹಾಟ ಬಳಿ 111 ಕಿ.ಮೀ. ವೇಗದಲ್ಲಿ ಚಾಲನೆ ಮಾಡಿದ್ದು ದಾಖಲಾಗಿದೆ. ಇಲ್ಲೂ 105 ಕಿ.ಮೀ. ವೇಗದಲ್ಲಿ ಸಾಗಲು ಮಾತ್ರ ಅವಕಾಶವಿದೆ ಎಂದು ಸಬ್ ಇನ್‌ಸ್ಪೆಕ್ಟರ್ ಅಮೋಲ್ ಪವಾರ್ ತಿಳಿಸಿದ್ದಾರೆ.

ಇಂದಿನ ಪಂದ್ಯಕ್ಕೆ ಜಮಾನ್, ಸಲ್ಮಾನ್ ಅಲಭ್ಯ

ಬೆಂಗಳೂರು: ಪಾಕಿಸ್ತಾನ ತಂಡದ ಅನುಭವಿ ಬ್ಯಾಟರ್ ಫಕಾರ್ ಜಮಾನ್ ಮತ್ತು ಆಲ್‌ರೌಂಡರ್ ಸಲ್ಮಾನ್ ಅಲಿ ಆಘಾ ಅವರು ಗಾಯಗೊಂಡಿದ್ದಾರೆ.

ಇದರಿಂದಾಗಿ ಅವರು ಶುಕ್ರವಾರ ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಜಮಾನ್ ಅವರ ಮಂಡಿಗೆ ಗಾಯವಾಗಿದೆ. ಆಘಾ ಅವರು ಜ್ವರದಿಂದ ಚೇತರಿಸಿಕೊಳ್ಳುತ್ತಿದ್ದಾರೆ.

'ಜಮಾನ್ ಮಂಡಿ ಗಾಯಕ್ಕೆ ಚಿಕಿತ್ಸೆ ನೀಡಲಾಗಿದೆ. ಮುಂದಿನ ವಾರದ ಹೊತ್ತಿಗೆ ಅವರು ಚೇತರಿಸಿಕೊಳ್ಳುವರು' ಎಂದು ಪಾಕ್ ತಂಡದ ಮಾಧ್ಯಮ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಟೂರ್ನಿಯಲ್ಲಿ ಜಮಾನ್ ಅವರು ಕೇವಲ ಒಂದು ಪಂದ್ಯ ಆಡಿದ್ದಾರೆ. ಹೈದರಾಬಾದಿನಲ್ಲಿ ನಡೆದಿದ್ದ ನೆದರ್ಲೆಂಡ್ಸ್ ಎದುರಿನ ಪಂದ್ಯದಲ್ಲಿ ಅವರು 12 ರನ್ ಗಳಿಸಿದ್ದರು. ನಂತರದ ಎರಡು ಪಂದ್ಯಗಳಲ್ಲಿ ಜಮಾನ್ ಬದಲಿಗೆ ಅಬ್ದುಲ್ಲಾ ಶಫೀಕ್ ಆಡಿದರು.

ಮೀಸಲು ಆಟಗಾರರಾಗಿ ಲಂಕಾ ತಂಡ ಸೇರಿಕೊಳ್ಳಲಿರುವ ಮ್ಯಾಥ್ಯೂಸ್, ಚಮೀರ

ನವದೆಹಲಿ (ಪಿಟಿಐ): ಅನುಭವಿ ಆಲ್‌ರೌಂಡರ್ ಆ್ಯಂಜೆಲೊ ಮ್ಯಾಥ್ಯೂಸ್ ಮತ್ತು ಮಧ್ಯಮ ವೇಗದ ಬೌಲರ್ ದುಷ್ಮಂತ ಚಮೀರ ಅವರು ಮೀಸಲು ಆಟಗಾರರಾಗಿ ಶುಕ್ರವಾರ ಲಖನೌದಲ್ಲಿ ಶ್ರೀಲಂಕಾ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಆ ರಾಷ್ಟ್ರದ ಕ್ರಿಕೆಟ್ ಮಂಡಳಿ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಈ ಇಬ್ಬರು ರಾಷ್ಟ್ರೀಯ ತಂಡದ ಪರ ತಮ್ಮ ಕೊನೆ ಪಂದ್ಯವನ್ನು ಜೂನ್‌ನಲ್ಲಿ ವಿರುದ್ಧ ಆಡಿದ್ದರು.

ಇಬ್ಬರೂ 'ಪ್ರಯಾಣ ಮೀಸಲು ಆಟಗಾರರಾಗಿ' (ಟ್ರಾವೆಲಿಂಗ್ ರಿಸರ್ವ್ಸ್) ತಂಡದ ಜೊತೆ ಪ್ರಯಾಣಿಸುವರು. ತಂಡದಲ್ಲಿ ಯಾರಿಗಾದರೂ ಗಾಯವಾದಲ್ಲಿ ತಕ್ಷಣಕ್ಕೆ ಬದಲಿ ಆಟಗಾರ ಲಭ್ಯರಾಗುವಂತೆ ಇವರನ್ನು 'ಪ್ರಯಾಣದ ಮೀಸಲು' ಆಟಗಾರರಾಗಿ ಸೇರ್ಪಡೆ ಮಾಡಲಾಗಿದೆ.

ಕಬಡ್ಡಿ: ಡಿ.8 ರಿಂದ ಬೆಂಗಳೂರು ಲೆಗ್

ಬೆಂಗಳೂರು: ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) 10ನೇ ಆವೃತ್ತಿಯ ಟೂರ್ನಿ ಡಿ.2 ರಂದು ಆರಂಭವಾಗಲಿದೆ. ಈ ಬಾರಿ ಎಲ್ಲ ಫ್ರಾಂಚೈಸ್‌ಗಳ ತವರು ನೆಲದಲ್ಲಿ ಪಂದ್ಯಗಳು ಆಯೋಜನೆಯಾಗಿವೆ.

ಮೊದಲ ಲೆಗ್‌ನ ಪಂದ್ಯಗಳು ಅಹಮದಾಬಾದ್‌ನಲ್ಲಿ ಡಿ.2 ರಿಂದ 7ರ ವರೆಗೆ ನಡೆಯಲಿದ್ದರೆ, ಎರಡನೇ ಲೆಗ್‌ನ ಪಂದ್ಯಗಳು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಡಿ.8 ರಿಂದ 13ರ ವರೆಗೆ ಆಯೋಜನೆಯಾಗಿವೆ.

ಡಿ.2 ರಂದು ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳು ಎದುರಾಗಲಿವೆ. ಬೆಂಗಳೂರು ಬುಲ್ಸ್ ತಂಡ ಡಿ.3 ರಂದು ಗುಜರಾತ್ ಜೈಂಟ್ಸ್ ವಿರುದ್ಧದ ಪಂದ್ಯದೊಂದಿಗೆ ಪ್ರಶಸ್ತಿಯೆಡೆಗಿನ ಅಭಿಯಾನ ಆರಂಭಿಸಲಿದೆ.

ಬೆಂಗಳೂರು ಲೆಗ್‌ನ ಬಳಿಕ ಕ್ರಮವಾಗಿ ಪುಣೆ (ಡಿ.15–20), ಚೆನ್ನೈ (ಡಿ.22–27), ನೋಯ್ಡಾ (ಡಿ.29–ಜ.3, 2024), ಮುಂಬೈ (ಜ.5–10), ಜೈಪುರ (ಜ.12–17), ಹೈದರಾಬಾದ್ (ಜ.19–24), ಪಟ್ನಾ (ಜ.26–31), ದೆಹಲಿ (ಫೆ. 2–7), ಕೋಲ್ಕತ್ತ (ಫೆ.9–14), ಪಂಚಕುಲದಲ್ಲಿ (ಫೆ.16–21) ಲೀಗ್ ಹಂತದ ಪಂದ್ಯಗಳು ನಡೆಯಲಿವೆ.

ಮೈಸೂರು ರೇಸ್

ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಐರಿಶ್ ರಾಕ್‌ಸ್ಟಾರ್ 5, ಬ್ರೂಸ್ ಆಲ್‌ಮೈಟಿ 2, ಆರ್ಮರಿ 6
2ನೇ ರೇಸ್: ರಾಯಲ್ ಟೈಟ್ಲ್ 6, ವೈಟ್ ಲೈಸ್ 3, ಗಾಡ್ಸ್ ಪವರ್ 7
3ನೇ ರೇಸ್: ಜೆರ್ಸಿ ಲೆಜೆಂಡ್ 11, ಚಿರಾಗ್ 12, ಸ್ಕೈ ಸ್ವಾರ್ಮ್ 8
4ನೇ ರೇಸ್: ಕಿಂಗ್‌ಆಫ್‌ದಿಜಂಗಲ್ 8, ಆಲ್‌ಡ್‌ಗೇಟ್ 1, ಮಿಚಿಗನ್ ಮೆಲೋಡಿ 5
5ನೇ ರೇಸ್: ಶ್ಯಾಮ್‌ರಾಕ್ 1, ಶುಭಾಂಕರ್ 5, ಕುಶಾಖ್ 4
6ನೇ ರೇಸ್: ಮಾರ್ಕ್ ಒನ್ 4, ಟ್ವಿಲೈಟ್ ಫೇಮ್ 8, ಸೌಂಡ್ ಆಫ್ ಕೆನಾನ್ಸ್ 2
7ನೇ ರೇಸ್: ಎಲ್ವೆಡೆನ್ 10, ಸಿಯೋಲ್ 1, ಟ್ರೆಶರ್ ಚೆಸ್ಟ್ 4

ಉತ್ತಮ ಬೆಟ್: ಐರಿಶ್ ರಾಕ್‌ಸ್ಟಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಡೆನ್ಮಾರ್ಕ್ ಓಪನ್: ಕ್ವಾರ್ಟರ್‌ಗೆ ಸಿಂಧು

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಡೆನ್ಮಾರ್ಕ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಆದರೆ, ಮತ್ತೊಬ್ಬ ಆಟಗಾರ್ತಿ ಆಕರ್ಷಿ ಕಶ್ಯಪ್ ನಿರಾಸೆ ಅನುಭವಿಸಿದರು.

ಗುರುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ವಿಶ್ವದ 12ನೇ ಕ್ರಮಾಂಕದ ಸಿಂಧು ಅವರು 7ನೇ ಕ್ರಮಾಂಕದ ಇಂಡೊನೇಷ್ಯಾದ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ ಅವರನ್ನು ಸದೆಬಡಿದರು. 71 ನಿಮಿಷ ನಡೆದ ಮ್ಯಾರಥಾನ್‌ನಲ್ಲಿ 18-21, 21-15, 21-13 ರಿಂದ ಮಣಿಸಿದರು.

ಉತ್ತಮ ಪೈಪೋಟಿಯ ಹೊರತಾಗಿಯೂ ಮೊದಲ ಗೇಮ್ ಕಳೆದುಕೊಂಡ ಸಿಂಧು, ಎರಡನೇ ಗೇಮ್‌ನಲ್ಲಿ ಪುಟಿದೆದ್ದರು. ನಿಖರವಾದ ಆಟದೊಂದಿಗೆ 13–4ರ ಮುನ್ನಡೆ ಪಡೆದ ಅವರು ಗೇಮ್ ಅನ್ನು ಸಮಬಲಗೊಳಿಸಿದರು. ನಿರ್ಣಾಯಕ ಗೇಮ್‌ನ ಆರಂಭದಲ್ಲಿ ಕೆಲ ತಪ್ಪುಗಳಿಂದ 5–9ರ ಹಿನ್ನಡೆ ಕಂಡರೂ ಛಲ ಬಿಡಲಿಲ್ಲ. ಇಂಡೊನೇಷ್ಯಾದ ಆಟಗಾರ್ತಿ ಬ್ಯಾಕ್‌ಲೈನ್ ಮತ್ತು ನೆಟ್‌ನಲ್ಲಿ ಮಾಡಿದ ಕೆಲ ತಪ್ಪುಗಳ ಲಾಭ ಪಡೆದ ಸಿಂಧು, ರಿವರ್ಸ್ ಡ್ರಾಪ್‌ಗಳ ಮೂಲಕ 7 ಪಾಯಿಂಟ್ ಗಳಿಸಿ ಗೆಲುವು ಸಾಧಿಸಿದರು.

ಕಳೆದ ವಾರ ಆರ್ಕಟಿಕ್ ಓಪನ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದ ಮಾಜಿ ವಿಶ್ವ ಚಾಂಪಿಯನ್ ಸಿಂಧು ಮತ್ತೆ ಲಯ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸಿಂಧು ಅವರು ಗ್ರೆಗೋರಿಯಾ ವಿರುದ್ಧ 8–2 ಗೆಲುವಿನ ದಾಖಲೆ ಹೊಂದಿದ್ದಾರೆ. ಆದರೆ, ಕೊನೆಯ ಮೂರು ಮುಖಾಮುಖಿಯಲ್ಲಿ ಎರಡು ಬಾರಿ ಸೋತಿದ್ದರು.

ಮತ್ತೊಂದು ಪಂದ್ಯದಲ್ಲಿ 38ನೇ ಕ್ರಮಾಂಕದ ಆಕರ್ಷಿ ಕಶ್ಯಪ್ ಅವರು 21–18, 21–8 ರಿಂದ 19ನೇ ಕ್ರಮಾಂಕದ ಥಾಯ್ಲೆಂಡ್‌ನ ಸುಪಾನಿಡಾ ಕಟೆಥಾಂಗ್ ಅವರಿಗೆ ಮಣಿದರು. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸಿಂಧು ಅವರು ಸುಪಾನಿಡಾ ಅವರನ್ನು ಎದುರಿಸಲಿದ್ದಾರೆ.

ಇಂದಿನ ಕ್ವಾರ್ಟರ್ ಫೈನಲ್ ಪಂದ್ಯ
ಸಮಯ: ಮಧ್ಯಾಹ್ನ 3.30
ನೇರಪ್ರಸಾರ: ಜಿಯೊ ಸಿನಿಮಾ, ಸ್ಪೋರ್ಟ್ಸ್ 18



ಪಿ.ವಿ. ಸಿಂಧು

ಕರ್ನಾಟಕ ತಂಡಕ್ಕೆ ಸುಲಭ ಜಯ

ಡೆಹ್ರಾಡೂನ್: ಬೌಲರ್‌ಗಳ ಶಿಸ್ತಿನ ದಾಳಿಯ ನೆರವಿನಿಂದ ಕರ್ನಾಟಕ ತಂಡ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ಮಧ್ಯಪ್ರದೇಶ ತಂಡವನ್ನು ಮಣಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಮಧ್ಯಪ್ರದೇಶ ತಂಡವನ್ನು ಕರ್ನಾಟಕದ ಬೌಲರ್‌ಗಳು 17.4 ಓವರ್‌ಗಳಲ್ಲಿ 76 ರನ್‌ಗಳಿಗೆ ನಿಯಂತ್ರಿಸಿದರು. ವೈಶಾಖ್ ವಿಜಯಕುಮಾರ್ (16ಕ್ಕೆ 3) ಮತ್ತು ಕೆ.ಗೌತಮ್ (17ಕ್ಕೆ 3) ತಲಾ ಮೂರು ವಿಕೆಟ್ ಪಡೆದು ಗಮನ ಸೆಳೆದರೆ, ವಿದ್ವತ್ ಕಾವೇರಪ್ಪ 2 ವಿಕೆಟ್ ಗಳಿಸಿದರು.

ಕರ್ನಾಟಕ ತಂಡ 16 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು. ದೇವದತ್ತ ಪಡಿಕ್ಕಲ್ ಮತ್ತು ನಾಯಕ ಮಯಂಕ್ ಅಗರವಾಲ್ ಅವರು ಮೊದಲ ವಿಕೆಟ್‌ಗೆ 52 ರನ್ ಸೇರಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು.

ಸಂಕ್ಷಿಪ್ತ ಸ್ಕೋರ್: ಮಧ್ಯಪ್ರದೇಶ 17.4 ಓವರ್‌ಗಳಲ್ಲಿ 76 (ಶುಭಂ ಶರ್ಮಾ 24, ವಿದ್ವತ್ ಕಾವೇರಪ್ಪ 11ಕ್ಕೆ 2, ವೈಶಾಖ್ ವಿಜಯಕುಮಾರ್ 16ಕ್ಕೆ 3, ಕೆ.ಗೌತಮ್ 17ಕ್ಕೆ 3, ಪ್ರಸಿದ್ಧ ಕೃಷ್ಣ 15ಕ್ಕೆ 1, ಶುಭಾಂಗ್ ಹೆಗ್ಡೆ 16ಕ್ಕೆ 1)

ಕರ್ನಾಟಕ 16 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 77 (ದೇವದತ್ತ ಪಡಿಕ್ಕಲ್ 24, ಮಯಂಕ್ ಅಗರವಾಲ್ 26, ಕೆ.ಶ್ರೀಜಿತ್ ಔಟಾಗದೆ 13, ಮನೀಷ್ ಪಾಂಡೆ 11, ಆವೇಶ್ ಖಾನ್ 17ಕ್ಕೆ 1) ಫಲಿತಾಂಶ: ಕರ್ನಾಟಕಕ್ಕೆ 7 ವಿಕೆಟ್ ಗೆಲುವು



ವೈಶಾಖ್ ವಿಜಯಕುಮಾರ್

ಮ್ಯಾಚ್ ಫಿಕ್ಸಿಂಗ್: ಪಂದ್ಯಗಳ ವಿಡಿಯೊ ವೀಕ್ಷಣೆ

ಬೆಂಗಳೂರು: 'ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದಿದೆ' ಎನ್ನಲಾದ ಆರೋಪ ಸಂಬಂಧ ಸಿಸಿಬಿ ಪೊಲೀಸರು ವಿಚಾರಣೆ ಚುರುಕುಗೊಳಿಸಿದ್ದು, ಅನುಮಾನಾಸ್ಪದ ಪಂದ್ಯಗಳ ವಿಡಿಯೊ ವೀಕ್ಷಿಸಿ ಪರಿಶೀಲನೆ ನಡೆಸುತ್ತಿದ್ದಾರೆ.

ಮ್ಯಾಚ್ ಫಿಕ್ಸಿಂಗ್ ಬಗ್ಗೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಉಪಾಧ್ಯಕ್ಷರೂ ಆಗಿರುವ ಶಾಸಕ ಎನ್.ಎ. ಹ್ಯಾರಿಸ್ ಅವರು ನೀಡಿರುವ ದೂರು ಆಧರಿಸಿ ಸಿಸಿಬಿ ವಿಚಾರಣೆ ಆರಂಭವಾಗಿದೆ.

'ಇಂಡಿಯನ್ ಸೂಪರ್ ಲೀಗ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದಿರುವ ಮಾಹಿತಿ ಇತ್ತು. ಪರಿಶೀಲನೆ ನಡೆಸಿದಾಗ, ತಪ್ಪು ಮಾಹಿತಿ ಎಂಬುದು ತಿಳಿಯಿತು. ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ಆಗಿರುವ ಬಗ್ಗೆ ಖಚಿತ ಮಾಹಿತಿ ಇದ್ದು, ಅದನ್ನು ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಪ್ರತಿನಿಧಿಗಳ ನೆರವು ಪಡೆದು, ಪಂದ್ಯಗಳ ವಿಡಿಯೊ ಪರಿಶೀಲನೆ ನಡೆಸಲಾಗುತ್ತಿದೆ. ಸೋಲು–ಗೆಲುವು ಲೆಕ್ಕಾಚಾರದಲ್ಲಿ ಯಾವ ಆಟಗಾರ? ಯಾವ ರೀತಿಯಲ್ಲಿ ಆಟವಾಡಿದ್ದಾರೆ ? ಎಂಬುದನ್ನು ತಿಳಿಯಲಾಗುತ್ತಿದೆ. ಆಟಗಾರರ ಪ್ರದರ್ಶನದಲ್ಲಿ ವ್ಯತ್ಯಾಸಗಳು ಕಂಡುಬಂದರೆ, ಅವರನ್ನು ವಿಚಾರಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

ಪುರಾವೆ ಸಂಗ್ರಹಿಸಿ ಕ್ರಮ: 'ಫುಟ್‌ಬಾಲ್ ಆಟಗಾರರ ಭವಿಷ್ಯದ ದೃಷ್ಟಿಯಿಂದ, ಸದ್ಯಕ್ಕೆ ತಂಡಗಳ ಯಾರನ್ನೂ ವಿಚಾರಣೆ ನಡೆಸಿಲ್ಲ. ಮ್ಯಾಚ್ ಫಿಕ್ಸಿಂಗ್ ಆರೋಪದ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಅದಾದ ನಂತರವೇ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಸಿಸಿಬಿ ಮೂಲಗಳು ಹೇಳಿವೆ.

ಅಕ್ರಮ ಬೆಟ್ಟಿಂಗ್ ದಂಧೆ: ವಾರ್ಷಿಕ ₹2 ಲಕ್ಷ ಕೋಟಿ ತೆರಿಗೆ ನಷ್ಟ

ನವದೆಹಲಿ (ಪಿಟಿಐ): ಕ್ರಿಕೆಟ್ ವಿಶ್ವಕಪ್ ಮೂರನೇ ವಾರದತ್ತ ಸಾಗುತ್ತಿರುವಂತೆಯೇ ಅಕ್ರಮ ಬೆಟ್ಟಿಂಗ್ ದಂಧೆಯೂ ಬಿರುಸು ಪಡೆದುಕೊಳ್ಳುತ್ತಿದೆ. ವಾಮಮಾರ್ಗಗಳ ಮೂಲಕ ನಡೆಯುತ್ತಿರುವ ಬೆಟ್ಟಿಂಗ್ ದಂಧೆಯಿಂದಾಗಿ ₹2 ಲಕ್ಷ ಕೋಟಿ ತೆರಿಗೆ ನಷ್ಟವಾಗುತ್ತಿದೆ ಎಂದು ವರದಿಯೊಂದು ಹೇಳಿದೆ.

ಭಾರತದಲ್ಲಿ ಕ್ರೀಡೆಗೆ ಸಂಬಂಧಿಸಿ ಅಕ್ರಮ ಬೆಟ್ಟಿಂಗ್ ಮಾರುಕಟ್ಟೆಯಲ್ಲಿ ವಾರ್ಷಿಕ ₹8,20,000 ಕೋಟಿ 'ವ್ಯವಹಾರ' ನಡೆಯುತ್ತಿದೆ ಎಂದು ಥಿಂಕ್ ಚೇಂಜ್ ಫೋರಂ (ಟಿಸಿಎಫ್) ವರದಿ ತಿಳಿಸಿದೆ.

ಡಿಜಿಟಲ್ ತಂತ್ರಜ್ಞಾನದಲ್ಲಿ ಆಗಿರುವ ಬೆಳವಣಿಗೆ, ಸ್ಮಾರ್ಟ್‌ಫೋನ್‌ಗಳ ಬಳಕೆ, ಕ್ರೀಡಾ ಚಟುವಟಿಕೆಗಳ ವಿಸ್ತರಣೆ ಇವೇ ಮೊದಲಾದ ಅಂಶಗಳು ಈ ರೀತಿಯ ಹಣದ ಪ್ರವಾಹ ಹರಿಯಲು ಕಾರಣವಾಗಿವೆ ಎಂದು ಅದು ಹೇಳಿದೆ.

ಸಾಕಷ್ಟು ಕಾನೂನು ನಿರ್ಬಂಧಗಳಿದ್ದರೂ, ಭಾರತದ ಅಕ್ರಮ ಬೆಟ್ಟಿಂಗ್ ಮತ್ತು ಜೂಜು ಮಾರುಕಟ್ಟೆ ಅಸಾಧಾರಣ ಬೆಳವಣಿಗೆ ಕಂಡಿದೆ ಎಂದೂ ವರದಿ ವಿವರಿಸಿದೆ. ವರದಿಯ ಪ್ರಕಾರ, ಅಂದಾಜು ₹8.2 ಲಕ್ಷ ಕೋಟಿಯಷ್ಟು ಮೊತ್ತವನ್ನು ಬೆಟ್ಟಿಂಗ್ ವ್ಯವಹಾರದಲ್ಲಿ ತೊಡಗಿಸಲಾಗುತ್ತಿದೆ. ಈಗಿನ ಜಿಎಸ್‌ಟಿ ದರದ ಶೇ 28ರಂತೆ ಲೆಕ್ಕಹಾಕಿದರೆ ಸರ್ಕಾರಕ್ಕೆ ವಾರ್ಷಿಕವಾಗಿ ₹2.29 ಲಕ್ಷ ಕೋಟಿ ಆದಾಯ ನಷ್ಟವಾಗುತ್ತಿದೆ.

ಇಂಥ ಕಾನೂನುಬಾಹಿರ ಚಟುವಟಿಕೆ ನಿಯಂತ್ರಿಸಲು ಹೊಸ ಜಿಎಸ್‌ಟಿ ಆಡಳಿತವು, ಇವುಗಳ ಮೇಲೆ ನಿಗಾ ಇಡುವಂತೆ ಕಾರ್ಯಪಡೆ ಸ್ಥಾಪನೆಯಂಥ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಹೊರರಾಷ್ಟ್ರಗಳಿಂದ ಈ ಚಟುವಟಿಕೆ ನಡೆಸುವವರು ಭಾರತದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ಕಾನೂನು ತರಬೇಕು ಎಂದು ವರದಿ ಸಲಹೆ ನೀಡಿದೆ.

ಕ್ರಿಕೆಟ್ ಅತಿ ಜನಪ್ರಿಯವಾಗಿರುವ ಭಾರತದಲ್ಲಿ ಬೆಟ್ಟಿಂಗ್ ವ್ಯವಹಾರದಲ್ಲಿ ಐಪಿಎಲ್ ಪಾಲು ದೊಡ್ಡ ಮಟ್ಟದಲ್ಲಿದೆ. 14 ಕೋಟಿ ಜನರು ಬೆಟ್ಟಿಂಗ್ ಮತ್ತು ಜೂಜಿನಲ್ಲಿ ಭಾಗಿಯಾಗುತ್ತಿರುವ ಅಂದಾಜು ಇದೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ವೇಳೆ ಇವರ ಸಂಖ್ಯೆ 37 ಕೋಟಿವರೆಗೆ ಏರುತ್ತದೆ.